ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 27 ಜುಲೈ 6, 1986 ಬೆಲೆ 1 ರೂ.

ಪ. ಬಂಗಾಳ ನಗರ ಸಭಾ ಚುನಾವಣೆ

ಪಕ್ಷ	ಸ್ಪರ್ಧೆ	ವಿಜಯಶಾಲಿ
ಸಿ. ಪಿ. ಐ(ಎಂ)	811	566
ಸಿ. ಪಿ. ಐ.	126	68
ಫುರೋಗಾಮಿ ಪಕ್ಷ	107	46
ಆರ್. ಎಸ್. ಪಿ.	67	38
ಆರ್. ಸಿ. ಪಿ. ಐ.	8	2
ಮಾರ್ಕ್ಸಿಸ್ಟ್ ಫ. ಪಕ್ಷ	19	10
ಎಡ ಸ್ವತಂತ್ರರು		49
ಕಾಂಗ್ರೆ	1119	346
ಸ್ವತಂತ್ರರು	147	126

ಎಡರಂಗ ಪಕ್ಷಗಳ ಜಯಭೇರಿಯ ಫಲಿತಾಂಶದ ವಿವರ ಇಲ್ಲಿದೆ. 147 ಸ್ಥಾನಗಳಿಗೆ ಸ್ಪರ್ಧಿಸಿದ್ದ ಬಿಜೆಪಿ, ಜನತಾ, (36), ಕಾಂಗ್ರೆಸ್ (ಎಸ್), ಲೋಕದಳ, ಸಿ ಪಿ ಐ (ಎಂ ಎಲ್) ಎಸ್ ಯು ಸಿ ಐ ಗಳಿಗೆ ಒಂದು ಸ್ಥಾನವೂ ಇಲ್ಲ.

ಹತ್ತನೇ ವರ್ಷಕ್ಕೆ ದಾಪುಗಾಲಿಟ್ಟ ಪಶ್ಚಿಮ ಬಂಗಾಲ ಎಡರಂಗ ಸರ್ಕಾರ

ಸಂಸದೀಯ ಪ್ರಜಾಸತ್ತೆಯ ಇತಿಹಾಸದಲ್ಲಿ ಅಭೂತಪೂರ್ವ - ಜ್ಯೋತಿ ಬಸು

ಬಂಡವಾಳಶಾಹೀ-ಭೂಮಾಲಿಕ ವ್ಯವಸ್ಥೆಯೊಳಗೆ ಎರಡು ರಾಜ್ಯಗಳಲ್ಲಿ ಎಡರಂಗ ಅಧಿಕಾರಕ್ಕೆ ಬಂದು ಐದು ವರ್ಷ ಆಳ್ವಿಕೆ ನಡೆಸಿ ಮತ್ತೆ ಮತದಾರರ ಬೆಂಬಲ ಪಡೆದು ಅಧಿಕಾರಕ್ಕೆ ಮರಳಿರುವುದು ಸಂಸದೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಒಂದು ಅಭೂತಪೂರ್ವ ಘಟನೆ. ಇಂತಹ ಉದಾಹರಣೆ ನಮ್ಮ ದೇಶದಲ್ಲಿ ಮಾತ್ರವಲ್ಲ, ಸಕಲ ವಿಶ್ವದಲ್ಲೇ ಇಲ್ಲ" ಎಂದು ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಕಾಂ. ಜ್ಯೋತಿ ಬಸು ಹೇಳಿದ್ದಾರೆ.

ಇದೇ ಜೂನ್ 21ರಂದು ತನ್ನ ಆಳ್ವಿಕೆಯ ಒಂಬತ್ತು ವರ್ಷಗಳನ್ನು ಸಾವಿರಾರು ಅಡ್ಡಿ-ಆತಂಕಗಳನ್ನು ಎದುರಿಸಿ ಯಶಸ್ವಿಯಾಗಿ ಪೂರ್ಣಗೊಳಿಸಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಹತ್ತನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಸಿ ಪಿ.ಐ.(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಹಿಂದಿ ಮುಖ ಪತ್ರಿಕೆ "ಸ್ವಾಧೀನತಾ" ದಲ್ಲಿ ಎಡರಂಗ ಆಳ್ವಿಕೆಯ ಮೂಲಭೂತ ಸೈದ್ಧಾಂತಿಕ ಅಂಶಗಳ ಬಗ್ಗೆ ಚರ್ಚಿಸುತ್ತಾ ಅವರು ಈ ರೀತಿ ಬರೆದಿದ್ದಾರೆ ಮುಂದುವರಿದು ಅವರು "ಈ ರೀತಿಯ ಉದಾಹರಣೆ ಇದುವರೆಗೆ ಇಲ್ಲದಿರುವಾಗ ಭಾರತದ ವಿಶೇಷ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಪ್ರಯೋಗಿಸುವ ಪ್ರಯತ್ನ ನಾವು ಮಾಡಿದ್ದೇವೆ" ಎಂದು ಬರೆದಿದ್ದಾರೆ.

ಜನತಾ ಪ್ರಜಾಪ್ರಭುತ್ವದ ದಾರಿಯಲ್ಲಿ

ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕಾರ್ಮಿಕರು ಹಾಗೂ ರೈತರ ದೃಢ ಸಖ್ಯತೆಯ ಆಧಾರದ ಮೇಲೆ ಜನತಾ ಪ್ರಜಾಪ್ರಭುತ್ವದ ಸ್ಥಾಪನೆಯ ಕರ್ತವ್ಯವನ್ನು ಜನತೆಯ ಮುಂದೆ ಅವಿರತವಾಗಿ ಪ್ರಸ್ತುತ ಪಡಿಸುತ್ತಾ, ಜನತೆಗೆ ತಾತ್ಕಾಲಿಕ ಪರಿಹಾರಗಳನ್ನು ನೀಡಲು

(ಕೊನೆಯ ಪುಟಕ್ಕೆ)

ವಿಶೇಷ ಪುರವಣಿ ಕುರಿತು:

ಸಮಗ್ರ ಕೃಷಿ ಕ್ರಾಂತಿಯ ಕಹಳೆ ಮೊಳಗಿಸೋಣ

1936ರಲ್ಲಿ ಜನ್ಮವೆತ್ತಿದ ಅಖಿಲ ಭಾರತ ಕಿಸಾನ್ ಸಭೆ ಕಳೆದ ಐವತ್ತು ವರ್ಷಗಳಲ್ಲಿ ಲಕ್ಷಾವಧಿ ಹೋರಾಟಗಳನ್ನು ನಡೆಸಿ, ರಕ್ತದ ಸುರಿಮಳೆ ಸುರಿಸಿ, ಸಾವಿರಾರು ಜೀವತೆತ್ತು, ನಿರಂತರ ಹೃದ್ರಾನಕವಾದ ದಬ್ಬಾಳಿಕೆಯನ್ನೆದುರಿಸಿ ಇಂದು 80 ಲಕ್ಷ ಸದಸ್ಯತ್ವದ ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಕಾಲಘಟ್ಟದಲ್ಲಿ ನಮ್ಮ ದೇಶದಲ್ಲಿ ಹಲವಾರು ರೈತ ಸಂಘಗಳು ಹುಟ್ಟಿಕೊಂಡಿದ್ದರೂ, ಅಖಿಲ ಭಾರತ ಕಿಸಾನ್ ಸಭಾದಂತೆ ರೈತರ; ಕೃಷಿಕಾರ್ಮಿಕರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಅವರನ್ನು ಸಂಘಟಿಸಿ, ಹೋರಾಟ ನಡೆಸಿ ಅವರ ಬೇಡಿಕೆಗಳನ್ನು ಕೊಡಿಸುವುದರಲ್ಲಿ ಜಯಗಳಿಸಿ ದೇಶದ ರೈತಾಪಿ ಜನತೆಯ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿ ಅವು ಬೆಳೆದು ಬಂದಿರುವುದಿಲ್ಲ. ಆ ಹೆಮ್ಮೆ ಕಿಸಾನ್ ಸಭೆಗೆ ಸಲ್ಲುತ್ತದೆ.

ಕಳೆದ 50 ವರ್ಷಗಳಲ್ಲಿ ನಡೆದು ಬಂದ ಅಖಿಲ ಭಾರತ ಕಿಸಾನ್ ಸಭೆ ತನ್ನ ಅನುಭವಗಳನ್ನು ನೆನಪಿಸಿಕೊಳ್ಳಬೇಕಾಗಿದೆ. 1947ರವರೆಗೆ ಬ್ರಿಟಿಷ್ ಆಡಳಿತೆ ಅನಂತರ 39 ವರ್ಷ ಕಾಂಗ್ರೆಸ್ ರಾಜಕೀಯ ಅದರ ಜೊತೆಯಲ್ಲಿಯೇ ಪ. ಬಂಗಾಲ-ತ್ರಿಪುರಾಗಳಲ್ಲಿ 8 ವರ್ಷ ಸಿ. ಪಿ. ಐ (ಎಂ) ಮುಖಂಡತ್ವದ ಎಡರಂಗ ಸರಕಾರಗಳ ಕಾರ್ಯ.

ಹಿಂದಿನ-ಇಂದಿನ ರೈತರ ಬೇಡಿಕೆಗಳ, ಅವುಗಳಿಗಾಗಿ ನಡೆಸಿದ ಹೋರಾಟಗಳ ಅನುಭವಗಳ ಆಧಾರದಲ್ಲಿ 50 ವರ್ಷ ತುಂಬಿದ ರೈತ ಸಂಘ ತನ್ನ ಮುಂದಿನ ಚಳುವಳಿಯನ್ನು ಯಾವ ರೀತಿ ರೂಪಿಸಬೇಕು ಎಂಬುದರ ಕುರಿತು ಸಮಗ್ರ ಚರ್ಚೆ ನಡೆಸಿ, ಮುಂದಿನ ಹೋರಾಟದ ದಾರಿಯನ್ನು ತಂತ್ರವನ್ನು ಹೋದ ತಿಂಗಳು ಪಾಟ್ನದಲ್ಲಿ ಸೇರಿದ್ದ ಅಖಿಲ ಭಾರತ ಕಿಸಾನ್ ಸಭಾದ ಸ್ವರ್ಣ ಮಹೋತ್ಸವದ ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ. ಆ ಸಮ್ಮೇಳನದ ಧ್ಯೇಯ ನಿರೂಪಣೆ, ಮುಖಂಡರ ಭಾಷಣಗಳು, ಬೇಡಿಕೆಗಳ ಪಟ್ಟಿ, ಪಾಸಾದ ನಿರ್ಣಯಗಳನ್ನೆಲ್ಲ ಕರ್ನಾಟಕದ ರೈತರಿಗೂ ಒದಗಿಸಬೇಕು, ಹೋರಾಟ, ತ್ಯಾಗ, ಬಲಿದಾನದಲ್ಲಿ ಇತರರಿಗಿಂತ ಹಿಂದೆ ಬೀಳದ ಕರ್ನಾಟಕದ ರೈತರನ್ನು ಇವನ್ನು

(ಕೊನೆಯ ಪುಟಕ್ಕೆ)



ಉದ್ಘಾಟನೆ: ರಾಜ್ಯ ಸಿ. ಐ. ಟಿ. ಯು ಅಧ್ಯಕ್ಷ ಕಾಂ. ಸೂರಿಯವರು ಕಾಂ. ಅನಂತರಾಮ್‌ರವರಿಂದ ರೈತರಿಗೆ ರಾಗಿ ಹಂಚಿಕೆ

ಬರಪೀಡಿತ ರೈತರ ನೆರವಿಗೆ ಧಾವಿಸಿದ ಕಾರ್ಮಿಕ ವರ್ಗ

ತಮ್ಮದೇ ಬೇಡಿಕೆಗಳಿಗೆ ಮಾತ್ರವೇ ಅಲ್ಲದೆ ರೈತರ ಇತರ ಜನ ವಿಭಾಗಗಳ ಅವಶ್ಯಕತೆಗಳಿಗೂ, ರಾಜಕೀಯ ಪ್ರಶ್ನೆಗಳ ಬಗೆಗೂ ಹೋರಾಟ ನಡೆಸುತ್ತಿರುವ ಕ್ರಾಂತಿಕಾರಿ ಕಾರ್ಮಿಕ ಸಂಘಟನೆ ಸಿ. ಐ. ಟಿ ಯುವಿನ ಕಾರ್ಮಿಕರು ರಾಜ್ಯಾದ್ಯಂತ ರೈತ ಕಾರ್ಮಿಕರ ಸಖ್ಯತೆಯ ಪ್ರತೀಕವಾಗಿ ಬರಗಾಲ ಪೀಡಿತ ರೈತರು, ಕೃಷಿ ಕಾರ್ಮಿಕರಿಗೆ ಅಲ್ಪ ಪರಿಹಾರ ನೀಡಲು ಸಂಗ್ರಹಿಸಿದ ಹಣವನ್ನು ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ನೀಡಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘ ಈ ಹಣವನ್ನು ಬರಗಾಲ ಪೀಡಿತ ಜಿಲ್ಲೆಗಳಿಗೆ ಪರಿಹಾರ ನೀಡಲು ಒದಗಿಸಿದೆ. ಬೆಂಗಳೂರು ಜಿಲ್ಲೆಯಲ್ಲಿ 25,000 ರೂ.ವೆಚ್ಚದಲ್ಲಿ, ಹಾಗೆಯೇ ಕೋಲಾರ, ರಾಯಚೂರು, ಗುಲ್ಬರ್ಗಾ, ಬಳ್ಳಾರಿ. ಬಿಜಾಪುರ, ಧಾರವಾಡ ಬೆಳಗಾಂ ಜಿಲ್ಲೆಗಳಲ್ಲಿ ಕಿಸಾನ್ ಸಭಾ ವಿವಿಧ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಶಾಲೆಯ ಕೊಠಡಿಗಳನ್ನು ಕಟ್ಟಿಸುವುದು ಒಂದು ಕಡೆ, ಮತ್ತೊಂದೆಡೆ ಕೃಷಿ

(ಕೊನೆಯ ಪುಟಕ್ಕೆ)

ಮಾಸ್ಕೋದಿಂದ ಬರೆದೋಲೆಗಳು

ಇಲ್ಲಿಗೆ ಬಂದು ಹನ್ನೆರಡು ದಿನಗಳು ಉರುಳಿವೆ.

ವಾರದಲ್ಲಿ ಶನಿವಾರ ಒಂದು ಘಂಟೆಯ ನಂತರ ಮತ್ತು ಭಾನುವಾರ ಪೂರ್ಣ ವಿರಾಮದ ಕಾಲ. ಉಳಿದ ದಿನಗಳಲ್ಲಿ ಬೆಳಿಗ್ಗೆ 9-30 ರಿಂದ 1 ರ ವರೆವಿಗೆ ಮಧ್ಯಾಹ್ನ 3 ರಿಂದ 4-30 ರ ವರೆವಿಗೆ ವ್ಯಾಸಂಗ ನಡೆಯುತ್ತದೆ.

ಇಲ್ಲಿಯ ವರೆಗೂ ನಮಗೆ ಗೊತ್ತು ಪಡಿಸಿರುವ ಕಾರ್ಯಕ್ರಮದಂತೆ ನಿಗದಿಯಾದ ವಿಷಯಗಳ ಮೇಲೆ ಪಾಠ ಪ್ರವಚನಗಳು ನಡೆದಿವೆ. ಮುಖ್ಯ ವಿಷಯಗಳು "ರಷ್ಯದ ಸಮಾಜ ಮತ್ತು ಕಾರ್ಮಿಕ ಸಂಘಗಳು", "ರಷ್ಯದ ಪ್ರಭುತ್ವ, ಸಮಾಜ ಮತ್ತು ರಾಜಕೀಯ ರಚನೆ", "ರಷ್ಯದ ಕ್ರಾಂತಿ" "27ನೇ ಅಧಿವೇಶನ ಮತ್ತು ಸೋವಿಯತ್ ಸಮಾಜದ ರಾಜಕೀಯ ಪದ್ಧತಿಯ ಮುಂದುವರಿದ ಬೆಳವಣಿಗೆ". "ರಷ್ಯದ ವಿದೇಶಾಂಗ ನೀತಿ" "ಯುದ್ಧ ಮತ್ತು ಶಾಂತಿ", "ನಿಶಸ್ತ್ರೀಕರಣದ ಕಾರ್ಯಕ್ರಮ'' "1986 ಜನವರಿ 15 ರಂದು ಕಾ. ಗೋರ್ಬಚೇವ್‌ರವರು ಸಾರ್ವತ್ರಿಕ ಭದ್ರತೆಯ ಬಗ್ಗೆ ಮತ್ತು 27 ನೇ ಅಧಿವೇಶನದಲ್ಲಿ ನೀಡಿದ ಹೇಳಿಕೆ" "ಅಕ್ಟೋಬರ್ ಕ್ರಾಂತಿ", ಅದರ ಪ್ರಾಮುಖ್ಯತೆ, ಹೊಸ ವಿಧಾನದ ಪಾರ್ಟಿಯ ಬಗ್ಗೆ ಲೆನಿನರ ನಿರೂಪಣೆಗಳು" "ಕಾರ್ಮಿಕ ಸಂಘಗಳ ಪಾತ್ರದ ಬಗ್ಗೆ ಮಾರ್ಕ್ಸ್‌ವಾದಗಳು ಮತ್ತು ಲೆನಿನ್‌ವಾದ ಹೇಳಿರುವ ನಿರೂಪಣೆಗಳು, ಕಾರ್ಮಿಕ ಸಂಘಗಳ ಸಂಘಟನಾ ರೂಪ ಮತ್ತು ಚಟುವಟಿಕೆಗಳ ಬಗ್ಗೆ ಲೆನಿನರ ನಿಯಮಗಳು''.

ಇನ್ನು ಉಳಿದಿರುವ ದಿನಗಳಲ್ಲಿ "ಸಮಾಜವಾದಿ ಸಮಾಜದಲ್ಲಿ ಕಾರ್ಮಿಕ ಸಂಘಗಳ ಕರ್ತವ್ಯಗಳು" "ಸಾಮೂಹಿಕ ಕೈಗಾರಿಕಾ ಮತ್ತು ಆರ್ಥಿಕ ಚಟುವಟಿಕೆಗಳು" "ಕಾರ್ಮಿಕ ಕಾಯ್ದೆಗಳ ತಳಪಾಯ" "ಕಾರ್ಮಿಕ ಸಂಘಗಳ ರಕ್ಷಣಾಕರ್ತವ್ಯ" "ಸಾಮೂಹಿಕ ಶ್ರಮದ ಬಗ್ಗೆ ಕಾನೂನು" "ಕಾರ್ಮಿಕ ಸಂಘಗಳ ಸೈದ್ಧಾಂತಿಕ-ರಾಜಕೀಯ-ಮತ್ತು ಸಾಂಸ್ಕೃತಿಕ ಕರ್ತವ್ಯಗಳು", ಪ್ರಪಂಚದ ಎರಡು ಸಮಾಜ ಪದ್ಧತಿಗಳ "ಬಂಡವಾಳಶಾಹಿ ಮತ್ತು ಸಮಾಜವಾದ"ದ ನಡುವೆ ಪೈಪೋಟಿ ಮತ್ತು ತಿಕ್ಕಾಟಗಳ ಬಗ್ಗೆ 27ನೇ ಅಧಿವೇಶನ, 'ಅಭಿವೃದ್ಧಿ ಹೊಂದುತ್ತಿರುವದೇಶಗಳಲ್ಲಿ ಸಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು" ಬಹುರಾಷ್ಟ್ರೀಯ ಏಕಸ್ವಾಮ್ಯ ಸಂಸ್ಥೆಗಳು,"ಹೊಸ ಆರ್ಥಿಕ ವ್ಯವಸ್ಥೆಗೆ ಹೋರಾಟ" ಸೋವಿಯತ್ ಕಾರ್ಮಿಕ ಸಂಘಗಳ ಅಂತರಾಷ್ಟ್ರೀಯ ಕರ್ತವ್ಯ ಮತ್ತು ಅಂತರಾಷ್ಟ್ರೀಯ ಕಾರ್ಮಿಕ ಸಂಘಗಳ ಕರ್ತವ್ಯಗಳು. ಹೀಗೆ ಹಲವಾರು ವಿಷಯಗಳ ಮೇಲೆ ಉಪನ್ಯಾಸ ಚರ್ಚೆ ವಿಚಾರ ಸಂಕಿರ್ಣ ನಡೆಯುವುದಿದೆ.

ಬಿಡುವು ದಿನಗಳಲ್ಲಿ ಮತ್ತು ಕೆಲವು ದಿನ ಮಧ್ಯಾಹ್ನದ ವೇಳೆ ಮಾಸ್ಕೊ ನಗರದಲ್ಲಿರುವ ಮುಖ್ಯ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯೂ-ಉಂಟು. ಈಗ ನಾವು ಲೆನಿನ್‌ರ ಮಸಾಲಿಯಮ್, ಇತ್ತರ ಕ್ರಾಂತಿವೀರರ ಸಮಾಧಿಗಳಿಗೆ, ಲೆನಿನ್ ಮ್ಯೂಸಿಯಂ, ಮಾರ್ಕ್ಸ್ ಮೂಸಿಯಂ,ಮತ್ತುಅಕ್ಟೋಬರ್ ರೆವೊಲೂಷನ್ ಮ್ಯೂಸಿಯಂಗೆ ಭೇಟಿಯಿತ್ತಿರುತ್ತೇವೆ. ಈ ಮ್ಯೂಸಿಯಂಗಳು ಇರುವ ಕಟ್ಟಡಗಳೆಲ್ಲವೂ ಮೈಸೂರು ಅರಮನೆ, ಲಲಿತಮಹಲ್, ಬೆಂಗಳೂರಿನಲ್ಲಿರುವ ಅರಮನೆಗಳ ಮಾದರಿಯಲ್ಲಿರುತ್ತವೆ. ಲೆನಿನ್‌ಮ್ಯೂಸಿಯಂನಲ್ಲಂತು ಒಂದು ಮಹಡಿಯಿಂದ ಇನ್ನೊಂದು ಮಹಡಿಗೆ ಹೋಗಲು ಯಂತ್ರದ ಬಳಕೆಯ ಹಂತಗಳಿವೆ. ಅಲ್ಲಿ ಯಾವಾಗಲೂ ಸಾವಿರಾರು ಜನರು ವಸ್ತು ಸಂಗ್ರಹಗಳನ್ನು ವೀಕ್ಷಿಸುತ್ತಿರುತ್ತಾರೆ. ಈ ಕ್ರಾಂತಿವೀರರು ಬರೆದ ಲೇಖನಗಳು, ಪ್ರಕಟಿಸಿದ ಪುಸ್ತಕಗಳು,ಒಬ್ಬೊಬ್ಬರ ನಡುವೆ ಮುಖ್ಯವಿಷಯಗಳಿಗೆ ಸಂಬಂಧಿಸಿದಂತೆ ನಡೆದ ವಿಚಾರ ವಿನಿಮಯದ ದಾಖಲಾತಿಗಳು, ಇವರು ಪ್ರಪಂಚದ ಆಗುಹೋಗುಗಳನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳಲು ಓದುತ್ತಿದ್ದ ಪತ್ರಿಕೆ ಮತ್ತು ಪುಸ್ತಕಗಳು ವಿವಿಧ ಭಾಷೆಗಳಲ್ಲಿರುವ ಪುಸ್ತಕಗಳು, ಛಾಯಾ ಚಿತ್ರಗಳೂ, ಕಲಾವಿದರು ಒಂದೊಂದು ಮುಖ್ಯ ಘಟನೆಗಳ ಬಗ್ಗೆ ನಿರ್ಮಿಸಿದಕಲಾಕೃತಿಗಳು,ಅನೇಕ ಶಿಲ್ಪಿಗಳು ನಿರ್ಮಿಸಿರುವ ಶಿಲೆಗಳಮತ್ತು ಲೋಹದ ಆಕೃತಿಗಳು, ಮಾರ್ಕ್ಸ್ ಲೆನಿನ್, ಎಂಗೆಲ್ಸ್ ಮತ್ತಿತರ ಶಿಲ್ಪಿ ಚಿತ್ರಗಳು ಮುಖ್ಯ ಘಟನೆಗಳ ಚಿತ್ರಗಳು ನಾಯಕರುಗಳ ಜೀವನ, ಅವರು ಉಪಯೋಗಿಸುತ್ತಿದ್ದ ವಸ್ತ್ರಗಳು, ಪ್ರೆಸ್ಸು, ಕಾರು, ಯಂತ್ರಗಳು ತುರಂಗವಾಸದಲ್ಲಿದ್ದಾಗ ನಡೆಸುತ್ತಿದ್ದ ಚಟುವಟಿಕೆ, ಅಜ್ಞಾತವಾಸದಲ್ಲಿದ್ದಾಗ ರಾಜಕೀಯ ಪ್ರಚಾರಕ್ಕಾಗಿ ಉಪಯೋಗಿಸುತ್ತಿದ್ದ ಸಾಧನಗಳು ಹೀಗೆ ಇವೆಲ್ಲವನ್ನು ನೋಡುತ್ತಿದ್ದಾಗ ನಾವು ನಮ್ಮನ್ನೇ ಮರೆತಂತಾಗುತ್ತದೆ.

ದಿನಚರಿ-ಜನಜೀವನ

ನಾನು ಬೇರೆ ಸ್ಥಳಗಳಿಗೆ ಎಲ್ಲಿ ಹೋದರೂ ಅಲ್ಲಿ ಉಳಿದಾಗ ಬೆಳಗಿನ ಹೊತ್ತು ಎದ್ದು ಒಂದು ಘಂಟೆಕಾಲ ಯಾವುದಾದರೂ ಪ್ರದೇಶಗಳಲ್ಲಿ ಸುತ್ತಾಡಿ ಬರುವುದು ವಾಡಿಕೆ. ಇದನ್ನು ಇಲ್ಲೂ ಮುಂದುವರಿಸುತ್ತಿದ್ದೇನೆ. ಈ ಸಮಯದಲ್ಲಿ ಅಲ್ಲಿಯ ಸ್ಥಳೀಯ ಜನರ ಜೀವನ ಕ್ರಮವನ್ನು ಅವರ ನಡೆನುಡಿಗಳನ್ನು ಮತ್ತು ಸ್ಥಳೀಯ ವಾತಾವರಣವನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ಮಾಸ್ಕೋ ನಗರದಲ್ಲಿ ಬೆಳಗಾಗುವುದು ಬೆಳಗ್ಗೆ 4ಘಂಟೆಗೆ. ವಾಹನಗಳು, ಜನರು ಸಂಚಾರ ಮಾಡುವುದಕ್ಕೆ ಪ್ರಾರಂಭವಾಗುವುದು ಬೆಳಿಗ್ಗೆ 5ಗಂಟೆಗೆ ಇಲ್ಲಿ ಕಾರ್ಖಾನೆಗಳಲ್ಲಿ ವಿನಃ ಉಳಿದ ಉದ್ದಿಮೆಗಳಲ್ಲಿ ಕೆಲಸ ಮಾಡುವವರು ಮಹಿಳೆಯರೇ ಹೆಚ್ಚು. ವೃತ್ತ ಪತ್ರಿಕೆಗಳ ಮಾರಾಟ, ಎಲ್ಲ ತರಹದ ಅಂಗಡಿಗಳು, ಹೊಟೇಲುಗಳು, ಮೆಡಿಕಲ್ ಷಾಪು, ತರಕಾರಿ ಮಾರಾಟ, ಮ್ಯೂಸಿಯಂಗಳು, ಪುಸ್ತಕದ ಅಂಗಡಿ ಮುಂತಾದ ಹಗುರವಾದ ಕೆಲಸ ಬೇಕಿರುವ ಉದ್ದಿಮೆಗಳಲ್ಲಿ ಗಂಡಸರು ಕೆಲಸ ಮಾಡುವುದೇ ಇಲ್ಲ. ಎಲ್ಲೆಲ್ಲೂ ಸ್ತ್ರೀಯರೇ ತಮ್ಮ ತಮ್ಮ ಕೆಲಸಗಳಿಗೆ ಹೋಗುತ್ತಿರುವುದು, ಕೆಲವರು ಕಾಲು ನಡಿಗೆಯಲ್ಲಿ, ಕೆಲವರು ಬಸ್ಸುಗಳಲ್ಲಿ, ಟ್ರಾಂಬಸ್ಸುಗಳಲ್ಲಿ, ಮೆಟ್ರೊರೈಲಿನಲ್ಲಿ ಓಡಾಡುವುದನ್ನು ಕಾಣಬಹುದು. ಸದ್ದುಗದ್ದಲವಿಲ್ಲದೆ, ಗಡಿಬಿಡಿಯಿಲ್ಲದೆ, ಯಾವ ಚಿಂತೆಯೂ ಇಲ್ಲದೆ ನಿರಾಳವಾಗಿ ಹಸನ್ಮುಖಿಗಳಾಗಿ ಚುರುಕಾದ ಚಟುವಟಿಕೆಯಿಂದ ತಮ್ಮ ತಮ್ಮ ಕರ್ತವ್ಯ ನಿರತರಾಗಿರುತ್ತಾರೆ.

ಸಂಜೆ ವೇಳೆ ಮಾಸ್ಕೋ ನಗರದಲ್ಲಿ ಎಲ್ಲ ಬೀದಿಗಳು ಜನನಿಬಿಡವಾಗಿರುತ್ತವೆ. ಎಲ್ಲ ಅಂಗಡಿಗಳಲ್ಲೂ ಜನ ಜೇನುಗೂಡಿನಂತೆ ಸೇರಿರುತ್ತಾರೆ. ಪದಾರ್ಥಗಳನ್ನು ಆರಿಸುವಾಗಲೂ ಅದರ ಬೆಲೆಯನ್ನು ಕೊಡುವಲ್ಲಿಯೂ ಮತ್ತು ಕೊಂಡ ಪದಾರ್ಥಗಳನ್ನು ಪಡೆಯುವಲ್ಲೂ ಒಂದು ಶಿಸ್ತು, ನಿಯಮ, ಅನುಸರಿಸುತ್ತಾರೆ. ಕಂಡಕ್ಟರಿಲ್ಲದೆ ಬಸ್ಸು, ಮೆಟ್ರೋರೈಲು ಓಡುವ ವ್ಯವಸ್ಥೆಯನ್ನು ನೋಡಿದರೆ ಬೆರಗಾಗದವರು ಯಾರೂ ಇಲ್ಲ. ಟ್ರಾಂಬಸ್‌ಗಳ ಚಾಲನೆಯ ಕೆಲಸದಲ್ಲೂ ಮಹಿಳೆಯರು ತೊಡಗಿರುತ್ತಾರೆ.

ಯಾವುದೇ ರಸ್ತೆಯಲ್ಲಿ ಕಸ ಬೀಳಿಸುವವರಿಲ್ಲ. ಕಸ ಕಡ್ಡಿಗಳನ್ನು ಅಲ್ಲಲ್ಲಿರುವ ಡಬ್ಬಗಳಲ್ಲೇ ಹಾಕುತ್ತಾರೆ. ರಸ್ತೆಗಳನ್ನು ಸ್ವಚ್ಛವಾಗಿಟ್ಟಿರುತ್ತಾರೆ. ಬೆಳಗ್ಗೆ ಕಸಗುಡಿಸುವವರು ಕೈಚೀಲಗಳನ್ನು ತೊಟ್ಟು ಕಸ ಗುಡಿಸುತ್ತಾರೆ. ಗುಡಿಸಿದ ಕಸವನ್ನು ಎತ್ತುವ, ತಗಡಿನ ಕೈ ಗುಡಿಸಿದ ಕಸವನ್ನು ಹಾಕಿಕೊಳ್ಳುವ ಬಕೆಟ್, ಅವರ ಉಡುಪು ಕೆಲಸದ ಕ್ರಮ ನೋಡಿದರೆ ನಮ್ಮಲ್ಲಿ ಕಸ ಗುಡಿಸುವವರನ್ನು ಕೂಡಲೇ ಗುರ್ತಿಸುವಂತೆ ಇಲ್ಲಿ ಗುರ್ತಿಸಲಾಗುವುದಿಲ್ಲ. ಕಾಲೇಜು ಹುಡುಗಿಯರು ಅಥವಾ ಶ್ರೀಮಂತರ ಹೆಂಗಸರು ಏನೋ ಸಾರ್ವಜನಿಕ ಸೇವೆಯ ಕೆಲಸದಲ್ಲಿ ತೊಡಗಿರುವವರಂತೆ ಭಾಸವಾಗುತ್ತದೆ. ಜನ ತಿರುಗಾಡುವ ಫುಟ್‌ಪಾತ್‌ಗೆ (ಕಾಲು ಹಾದಿಗೆ) ಎಲ್ಲ ಕಡೆಯೂ ಅಾರಿಗಳಲ್ಲಿ ನೀರು ಹೊತ್ತು ತಂದು ಯಂತ್ರದ ಮುಖಾಂತರ ಡ್ರೈವರುಗಳೇ ನೀರನ್ನು ಹಾಯಿಸಿಕೊಂಡು ಹೋಗುತ್ತಾರೆ. ಹೊಟೇಲುಗಳನ್ನು ಸದಾ ಸ್ವಚ್ಛವಾಗಿಡುತ್ತಾರೆ. ಪ್ರತಿಯೊಂದು ಕೊಠಡಿಯನ್ನು ಪ್ರತಿದಿನವೂ ಗಾಳಿಹೀರುವ ಯಂತ್ರದಿಂದ ಗುಡಿಸುತ್ತಾರೆ.

ನಾವು ಒಂದು ಸರ್ಕಸ್‌ಗೆ ಹೋಗಿದ್ದೆವು. ಅದ್ಭುತವಾದ ಕಸರತ್ತುಗಳು, ನೆಗೆತ, ಉಯ್ಯಾಲೆ ಸ್ಕೇಟಿಂಗ್ ಡಂಬಲ್ಸ್ ಎಸೆದಾಟ, ಬಫುನರಿ, ಕುದುರೆ ಸವಾರಿ, ನಾಯಿಗಳಿಂದ ಸರ್ಕಸ್ ಆಟ, ಶಾಂತಿಯ ಬಗ್ಗೆ ಮೂಕದ ಪ್ರದರ್ಶನ, ಒಂದು ತಕ್ಕಡಿಗೆ ಒಂದು ಕಡೆ ರಾಕೆಟ್ ಇಟ್ಟು ಇನ್ನೊಂದು ಕಡೆ ಪಾರಿವಾಳ ಕೂರಿಸಿದಾಗ ಪಾರಿವಾಳದ ಭಾರವೇ ರಾಕೆಟ್ ಭಾರಕ್ಕಿಂತ ಹೆಚ್ಚಾಗಿ ತೋರಿಸುವುದು. ವಿರಾಮದ ವೇಳೆ ಸ್ವಲ್ಪ ಸಮಯ ಹೊರಗೆಹೋಗಿಬರುವುದರಲ್ಲಿ ಸರ್ಕಸ್‌ನ ರಂಗದಲ್ಲಿ ನೀರು ತುಂಬಿ ಅದನ್ನು ಕೊಳವಾಗಿ ಪರಿವರ್ತಿಸಿ ನೀರಿನ ಮೇಲೆ ಓಡಾಟ, ನೀರಿನ ಪ್ರಾಣಿ ಡಾಲ್ಫಿನ್ ಜತೆ ಆಟ ಹೀಗೆ ಒಂದಕ್ಕಿಂತ ಒಂದು ಅದ್ಭುತವಾಗಿತ್ತು. ಸರ್ಕಸ್‌ನಲ್ಲಿ ರಷ್ಯನರು ಎತ್ತಿದ ಕೈ ಎಂಬ ಹೆಸರು ಇದಕ್ಕಾಗಿಯೇ.

ಮಾಸ್ಕೊ ಎಂ. ಎನ್. ಉಗ್ರಪ್ಪ
12-6-86

ತ್ರಿಪುರಾದಲ್ಲಿ ಪ್ರಪ್ರಥಮ ಥರ್ಮಲ್ ಘಟಕ

1978 ರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಎಡರಂಗ ಸರಕಾರ ಅಧಿಕಾರಕ್ಕೆ ಬಂದ ನಂತರ ತ್ರಿಪುರದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ ಹೆಚ್ಚಾಗುತ್ತಿದೆ.ಗ್ರಾಮಾಂತರ ಪ್ರದೇಶದಲ್ಲಿ ಮುಖ್ಯವಾಗಿ ಸಣ್ಣ ನೀರಾವರಿ ಯೋಜನೆಗಳ ಮೂಲಕ ಒಕ್ಕಲತನ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಯಿತು. ಕಳೆದ 8 ವರ್ಷಗಳಲ್ಲಿ ಶೇ 300% ರಷ್ಟು ಹೆಚ್ಚು ವಿದ್ಯುಚ್ಛಕ್ತಿ ವಿತರಣೆ ಮಾಡಲಾಗಿದೆ. ಅಂದರೆ 1760 ಕಿ. ವಾಟ್ಸ್‌ದಿಂದ 5300 ಕಿಲೋವಾಟ್ಸ್‌ವರೆಗೆ (1985 ರಲ್ಲಿ) ವಿಸ್ತರಿಸಲಾಗಿದೆ. ಆರ್ಥಿಕ ಬೆಳವಣಿಗೆ ಸಲುವಾಗಿ ಗುಡ್ಡಗಾಡು ಜನರಿಗೆ 1977 ಡಿಸೆಂಬರಿನಲ್ಲಿ ಬರೀ 29 ಹಳ್ಳಿಗಳಿಗಷ್ಟೆ ವಿದ್ಯುಚ್ಛಕ್ತಿ ಒದಗಿಸಲಾಗಿತ್ತು. ಅಕ್ಟೋಬರ್ 1985 ರಲ್ಲಿ ತ್ರಿಪುರದ ಒಟ್ಟು 4725 ಹಳ್ಳಿಗಳ ಪೈಕಿ 2025 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡಲಾಗಿದೆ. ವಿದ್ಯುದೀಕರಣವನ್ನು ಸುಧಾರಿಸಲು ಸತತ ಪ್ರಯತ್ನ 8 ವರ್ಷಗಳಿಂದಲೂ ನಡೆದಿದೆ. ಈಗ ಬಾರಾಮುರ ಗ್ಯಾಸ್ ಥರ್ಮಲ್ ಘಟಕ, ಸ್ಥಾಪನೆಯಿಂದಾಗಿ ತ್ರಿಪುರದ ಪರಿಸ್ಥಿತಿ ಸುಧಾರಿಸಿದೆ.

ಸರಿಯಾದ ವ್ಯವಸ್ಥೆ ಇಲ್ಲದಿರುವುದರಿಂದ ತ್ರಿಪುರದಲ್ಲಿ ಸಾಕಷ್ಟು ವಿದ್ಯುಚ್ಛಕ್ತಿ ಉತ್ಪಾದಿಸಲು ಅಡ್ಡಿಯಾಗಿತ್ತು. ಈಗ ಗ್ಯಾಸ ಲಭ್ಯವಾಗಿರುವುದರಿಂದ ತೊಂದರೆ ದೂರವಾಗುತ್ತಿದೆ. ಅದನ್ನು ಉಪಯೋಗಿಸಿ ಎಡರಂಗ ಸರಕಾರ ಅಭಿವೃದ್ಧಿಗಾಗಿ ವಿದ್ಯುಚ್ಛಕ್ತಿ ಪೂರೈಸುವ ಯೋಜನೆ ಕೈಗೊಳ್ಳುತ್ತಿದೆ ಇದು ಎಡರಂಗ ಸರಕಾರದ ಸಾಧನೆ.

ಐಕ್ಯರಂಗಕ್ಕೆ ಚಂದಾದಾರರಾಗಿರಿ
ವಾರ್ಷಿಕ ಚಂದಾ ರೂ. 40-00
ಅರ್ಧ ವರ್ಷಕ್ಕೆ ರೂ. 20-00

ನ್ಯಾಯಾಧೀಶರ ನೇಮಕದಲ್ಲಿ ವಿಳಂಬ

ಕರ್ನಾಟಕ ರಾಜ್ಯದ ನ್ಯಾಯಾಧೀಶರ ನೇಮಕದಲ್ಲಿ ವಿಳಂಬ. ಶ್ರೇಷ್ಟ ನ್ಯಾಯಾಧೀಶ ಮಳೀಮಠ ಅವರನ್ನು ಕೇರಳಕ್ಕೆ ಬದ್ಲಿ ಮಾಡಿದ ನಂತರ ನಮ್ಮ ರಾಜ್ಯದಲ್ಲಿ ಮುಖ್ಯನ್ಯಾಯಾಧೀಶರಿಲ್ಲ ರಾಜ್ಯದ ಹೈಕೋರ್ಟಿನಲ್ಲಿ 90 ಸಾವಿರಕ್ಕೂ ಮೇಲ್ಪಟ್ಟು ದಾವೆಗಳು ಖುಲಾಸೆಯಾಗದೆ ಉಳಿದಿರುವುದರಿಂದ ಕಕ್ಷಿದಾರರಿಗೆ ಅನ್ಯಾಯವಾಗಿದೆ "ತಡವಾಗಿ ಲಭ್ಯವಾಗುವ ನ್ಯಾಯ ನ್ಯಾಯವೇ ಅಲ್ಲ" ಎಂಬ ಗಾದೆಯಂತೆ ನ್ಯಾಯಾಧೀಶರ ಅಭಾವದಿಂದಾಗಿ ಜನರಿಗೆ ನ್ಯಾಯ ಸಿಗುತ್ತಿಲ್ಲ. ಕಳೆದ ಹತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲಾವಧಿಯ ಸಾವಿರಾರು ಖಟ್ಲೆಗಳು ಶ್ರೇಷ್ಟ ನ್ಯಾಯಾಲಯದಲ್ಲಿಕೊಳೆಯುತ್ತಿವೆ. ಇವುಗಳ ತುರ್ತು ವಿಚಾರಣೆಗಾಗಿ ಕರ್ನಾಟಕ ಹೈಕೋರ್ಟಿಗೆ 6 ಹೆಚ್ಚಿನ ನ್ಯಾಯಾಧೀಶರನ್ನು ನೇಮಿಸಬೇಕೆಂಬ ಸೂಚನೆ 1983 ರಲ್ಲೇ ಕೇಂದ್ರಕ್ಕೆ ಕಳುಹಿಸಲಾಗಿತ್ತು. 4 ಖಾಯಂ ಶ್ರೇಷ್ಟ ನ್ಯಾಯಾಧೀಶರನ್ನೂ ಇಬ್ಬರು ಅಡಿಶನಲ್ ನ್ಯಾಯಾಧೀಶರನ್ನು ನೇಮಿಸಲು 1984 ಮೇ ತಿಂಗಳಲ್ಲೇ ಕೇಂದ್ರ ಸರಕಾರ ಒಪ್ಪಿಕೊಂಡಿದ್ದರೂ, ಇಂದಿಗೂ ನ್ಯಾಯಮೂರ್ತಿಗಳನ್ನು ನೇಮಿಸಿಲ್ಲ. ಈ ವಿಷಯವನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ಸಮಾವೇಶಗೊಂಡಅಖಿಲ ಭಾರತ ವಕೀಲರ ಸಂಘದ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಎತ್ತಿದ್ದರು. ಕೇಂದ್ರದ ಕಾನೂನು ಮಂತ್ರಿ ಎ. ಕೆ. ಸೇನ್ ಅವರು "ಕರ್ನಾಟಕದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ನೇಮಕವೇ ವಿಳಂಬವಾಗಿದೆ. ಉಳಿದ ನ್ಯಾಯಾಧೀಶರ ನೇಮಕದ ಕುರಿತು ಮುಖ್ಯ ನ್ಯಾಯಾಧೀಶರೇ ಸಲಹೆ ನೀಡಲೆಂಬ ನಿಲುವು ತಾಳಿದ್ದರಿಂದ ನ್ಯಾಯಾಧೀಶರ ನೇಮಕವೂ ತಡವಾಗಿದೆಂದು" ಹೇಳಿದ್ದಾರೆ. ಆದರೆ ಕೇಂದ್ರದ ಕಾನೂನು ರಾಜ್ಯ ಸಚಿವ ಭರದ್ವಾಜ ಅವರು ಮಾತ್ರ ರಾಜೀವ ರಾಜಕೀಯದ ರಾಡಿ ಚೆಲ್ಲಲು ಹೊರಟು ನ್ಯಾಯಾಧೀಶರ ನೇಮಕಾತಿ ಕುರಿತು ತಮ್ಮ ಪಕ್ಷಪಾತ ನೀತಿಯನ್ನು ಬಯಲಿಗೆಳೆದರು. ತನ್ನ ತಪ್ಪನ್ನು ಒಪ್ಪಿಕೊಳ್ಳದೆ ರಾಜ್ಯ ಸರಕಾರ ಮಂತ್ರಿಗಳ "ನೆಂಟರನ್ನೂ, ಸಂಬಂಧಿಕರನ್ನೂ" ಶಿಫಾರಸ್ ಮಾಡಿದೆಂಬ ಆರೋಪ ಹೊರಿಸಿ ತನ್ನ ಜವಾಬ್ದಾರಿಯಿಂದ ಜಾರಿಕೊಳ್ಳಲು ಪ್ರಯತ್ನ ಮಾಡಿದ್ದಾರೆ ಅಷ್ಟೇ ಅಲ್ಲ "ಉತ್ತಮ ನ್ಯಾಯಾಧೀಶರನ್ನು ನೇಮಿಸಿ ಎಂದು ಪ್ರಧಾನಿ ರಾಜೀವ ಗಾಂಧಿ ಸ್ಪಷ್ಟವಾಗಿ ಹೇಳಿದ್ದಾರೆ, ನ್ಯಾಯಾಂಗದ ವಿಚಾರದಲ್ಲಿ ನಮಗಿರುವ ಗೌರವ ಹೆಗಡೆಯವರಿಗಿರುವ ಗೌರವಕ್ಕಿಂತ ಜಾಸ್ತಿ- ನಾವು ಎಲ್ಲವನ್ನೂ ತನಿಖೆ ಮಾಡಿಸಿದ್ದೇವೆ. ನಾನು ಹೇಳಿದ್ದು ಸುಳ್ಳು ಆಂತಾದರೆ ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ನೀವು ಕೊಡುತ್ತೀರಾ" ಎಂದು ಗುಡುಗಿ ಚಿಲ್ಲರೆ ರಾಜಕೀಯಕ್ಕೆ ಇಳಿದಿದ್ದಾರೆ, ತನ್ನ ನಿಜ ಬಣ್ಣ ಬಯಲಿಗೆಳೆದಿದ್ದಾರೆ

ಕಳೆದು ನಾಲ್ಕೈದು ವರ್ಷಗಳಿಂದ ಪಶ್ಚಿಮ ಬಂಗಾಲ, ಆಂಧ್ರಗಳಲ್ಲಿಯೂ ಹೈಕೋರ್ಟು ನ್ಯಾಯಾಧೀಶರ ನೇಮಕಾತಿ ಇಲ್ಲ. ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ನ್ಯಾಯಮೂರ್ತಿಗಳನ್ನು ನೇಮಿಸುವುದರಲ್ಲಿ ಕೇಂದ್ರ ಸರಕಾರ ವಿಳಂಬ ಮಾಡುತ್ತಿರುವುದರ ಅರ್ಥ ಏನು? 1975-76ರ ತುರ್ತು ಪರಿಸ್ಥಿತಿಯ ಕಾಲದಲ್ಲಿ ನ್ಯಾಯಾಂಗ ತಾನು ಹೇಳಿದಂತೆ ನಿರ್ಣಯ ನೀಡಬೇಕೆಂಬ ದುರುದ್ದೇಶದಿಂದ ತನಗೆ ಬೇಕಾದವರನ್ನೇ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಿಸುತ್ತಿದ್ದರು. ಹಾಗೆಯೇ ಈಗ ಈ ಮೂರು ರಾಜ್ಯಗಳಿಂದ ಬಂದ ಪಟ್ಟಿಯಲ್ಲಿ "ತಮ್ಮವರು ಇಲ್ಲ" ಎಂದು ತಿಳಿದಿರುವುದರಿಂದಲೇ ಭರದ್ವಾಜ ಅವರು ನೇಮಕಾತಿಕೆ ಕಂಟು ನೆವ ಮುಂದೆ ಮಾಡುತ್ತಿರಬಹುದೇನೋ ? ನ್ಯಾಯಾಧೀಶರ ಪಟ್ಟಿಯನ್ನು ಮುಖ್ಯ ನ್ಯಾಯಾಧೀಶರ ಮತ್ತು ರಾಜ್ಯಪಾಲರು ಕೇಂದ್ರಕ್ಕೆ ಕಳುಹಿಸುತ್ತಾರಲ್ಲದೆ ಮಂತ್ರಿ ಮಂಡಲವಲ್ಲ. ಹಾಗಿದ್ದರೂ ಕೂಡ ವಕೀಲರ ಸಮಾವೇಶದಲ್ಲಿ ಭರದ್ವಾಜ ಆಡಿದ ಮಾತು ಸಮಂಜಸವಲ್ಲ. ಮುಖ್ಯಮಂತ್ರಿಯವರು ಏರ್ಪಡಿಸಿದ ಭೋಜನ ಕೂಟದಲ್ಲಿ ಭಾಗವಹಿಸದಿರುವುದು ಸರಿಯಲ್ಲ. ವಕೀಲ ಸಂಘದ ಕಾರ್ಯದರ್ಶಿಯವರೇ ಹೇಳಿದಂತೆ ತಮ್ಮ ಕೋರಿಕೆಯ ಮೇರೆಗೆ ರಾಜ್ಯ ಸರಕಾರ ಗಣ್ಯರಿಗೆಲ್ಲ ಸೌಲಭ್ಯ ನೀಡಿ ಭೋಜನ ಕೂಟವನ್ನೂ ಏರ್ಪಡಿಸಿತ್ತು. ದಿಲ್ಲಿಯಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ ನಡೆದಾಗಲೂ ಕೇಂದ್ರ ಸರಕಾರ ನೆರವು ಹಾಗೂ ಸಹಕಾರ ನೀಡಿತ್ತೆಂದು ಪ್ರಧಾನ ಕಾರ್ಯದರ್ಶಿ ಮತ್ತೂರ್ ಸ್ಪಷ್ಟ ಪಡಿಸಿದ್ದಾರೆ.

ಭಾರದ್ವಾಜರ ಸಲ್ಲದ ಅಸಭ್ಯ ವರ್ತನೆ ಖಂಡನೀಯ. ವಿರೋಧ ಪಕ್ಷದ ಸರಕಾರಗಳ ಕುರಿತು ಕೇಂದ್ರದ ಮಲತಾಯಿ ಧೋರಣೆಯ ಪ್ರತೀಕ.

ಬೀದಿ ಕಾಳಗಕ್ಕೆ ತಿವಾರಿ ಕರೆ!

ಬೀದಿಗಿಳಿದು ತೆಲುಗು ದೇಶಂ ಸರ್ಕಾರದ ವಿರುದ್ಧ ವಿಮೋಚನೆಯ ಚಳುವಳಿ ಆರಂಭಿಸುವಂತೆ ಕಾಂಗ್ರೆಸ್ ಕಾರ್ಯಕರ್ತರಿಗೆ ಕೇಂದ್ರ ಸಚಿವ ಕೆ. ಕೆ. ತಿವಾರಿಯವರು ಕರೆಯಿತ್ತಿದ್ದಾರೆ. "ಆಂಧ್ರ ಬಚಾವೊ" ಚಳುವಳಿ ಮೂಲಕ ಜೈಲ್ ಭರೋ ಕಾರ್ಯಕ್ರಮ ನಡೆಸಿರಿ "ನಾನು ಕೂಡ ಈ ಚಳುವಳಿಗಾಗಿ ವೇಳೆ ವ್ಯಯಿಸುತ್ತೇನೆ" ಎಂದು ತಿವಾರಿಯವರ ಅಬ್ಬರ. ರಾಜ್ಯ ಸರಕಾರಕ್ಕೆ ಸುಳಿವು ನೀಡದೆ ಆಂಧ್ರದಲ್ಲಿ ಸಂಚರಿಸುತ್ತಿರುವ ಈ ಕೇಂದ್ರ ಮಂತ್ರಿ ತಿವಾರಿ ಎನ್. ಟಿ. ಆರ್. ಅವರನ್ನು ಮನಬಂದಂತೆ ಜರಿಯುತ್ತ "ಇನ್ನು ತಮ್ಮ ಗಮನ ಜನತಾ ಪಕ್ಷ ಅಧಿಕಾರದಲ್ಲಿರುವ ಕರ್ನಾಟಕದತ್ತ ಹರಿಯುವುದೆಂಬ" ಎಚ್ಚರಿಕೆ ನೀಡಿದ್ದಾರೆ.

ರಾಜೀವ್ ಗಾಂಧಿಯವರ ಆಶೀರ್ವಾದದಿಂದ ಕರ್ನಾಟಕದಲ್ಲಿ ಕೆಲವು ತಿಂಗಳ ಹಿಂದೆ ಪ್ರಾರಂಭವಾಗದ್ದ "ಹೆಗಡೆ ಹಟಾವೊ" ಕಾರ್ಯಕ್ರಮ ಮಣ್ಣು ಮುಕ್ಕಿದೆ. ಅದು ಬರೀ ಧರಣಿ ಸತ್ಯಾಗ್ರಹದಲ್ಲೆ ಮುಕ್ತಾಯವಾಯಿತು. ಅದಕ್ಕೂ ಜನಬೆಂಬಲ ಸಿಗಲಿಲ್ಲ. ಅನುಭವದಿಂದ ಪಾಠ ಕಲಿಯದ ಕಾಂಗ್ರೆಸ್ಸಿನವರು ಬೀದಿ ಕಾಳಗಕ್ಕೆ ಕರೆದಿದ್ದಾರೆ. ಪಂಜಾಬ್-ಅಸ್ಸಾಮಿನ ಭಯೋತ್ಪಾದಕರ ನೆರಳು ತಿವಾರಿ ಮೇಲೆ ಬಿದ್ದಂತೆ ಕಂಡುಬರುತ್ತದೆ.

ಎಂಥ ನಾಚಿಕೆಗೇಡಿ ಹೇಳಿಕೆ! ಇಡೀ ದೇಶದ ಆಡಳಿತೆಯ, ಭದ್ರತೆಯ ಜವಾಬ್ದಾರಿ ಹೊತ್ತಿರುವ ಕಾಂಗ್ರೆಸ್ ಮಂತ್ರಿಗಳಿಂದಲೇ ಹಿಂಸಾಚಾರದ ಪ್ರಚೋದನೆ ಅಂತ್ಯಂತ ಖಂಡನೀಯ ವಿಚಾರ. ದೇಶದ ವಿವಿದೆಡೆಗಳಲ್ಲಿ ಸಂಭವಿಸುತ್ತಿರುವ ಹಿಂಸಾಕೃತ್ಯಗಳನ್ನು ಪ್ರಜಾಪ್ರಭುತ್ವ ಶಕ್ತಿಗಳು ಎದುರಿಸುತ್ತಿರುವಾಗ, ಖಂಡಿಸುತ್ತಿರುವಾಗ ತಿವಾರಿಯವರ ಬೀದಿ ಕಾಳಗದ ಹೇಳಿಕೆ ದೇಶದ್ರೋಹಿಯದ್ದಾಗಿದೆ. ತಮ್ಮ ಆಡಳಿತಕ್ಕೆ ಬೇಸತ್ತು ಜನ ತಮ್ಮನ್ನು ದೂರಸರಿಸುತ್ತಿರುವಾಗ ದಿಕ್ಕೆಟ್ಟ ಕಾಂಗ್ರೆಸ್ ಮುಖಂಡರು ತಮ್ಮ ರಾಜಕೀಯ ದಿವಾಳಿಕೋರತನವನ್ನು ಪ್ರದರ್ಶಿಸುತ್ತಿದ್ದಾರೆ. ತಿವಾರಿಯವರ ಈ ಹೇಳಿಕೆ ಪ್ರಜಾಪ್ರಭುತ್ವ ಪದ್ಧತಿಗೆ ಆಹ್ವಾನವಾಗಿದೆ. ಅಂಥ ಕಾಂಗ್ರೆಸ್ಸಿನವರಿಂದ ಜನತೆ ಎಚ್ಚರದಿಂದಿರಬೇಕು. ಅವರಿಗೆ ಸರಿಯಾದ ಬುದ್ಧಿ ಕಲಿಸಬೇಕು.

ಜೀತಮುಕ್ತರ ಪುನರ್ವಸತಿ

ರಾಜ್ಯದಲ್ಲಿ ಉಳಿದಿರುವ ಜೀತ ವಿಮುಕ್ತರಿಗೆಲ್ಲಾ ಮಾರ್ಚ್ ಅಂತ್ಯದ ವೇಳೆಗೆ ಪುನರ್ ವಸತಿ ಸೌಲಭ್ಯ ಕಲ್ಪಿಸಲು ರಾಜ್ಯ ಸರಕಾರ ನಿರ್ಧರಿಸಿದೆಯಂತೆ. ಇನ್ನೂ 30 ಸಾವಿರ ಜೀತ ವಿಮುಕ್ತರಿಗೆ ಅದು ಲಭ್ಯವಾಗಬೇಕಾಗಿದೆಯೆಂದು ಗ್ರಾಮಾಭಿವೃದ್ಧಿ ಸಚಿವ ಅಬ್ದುಲ್ ನಜೀರಸಾಬ ಹೇಳಿದ್ದಾರೆ.

ಜೀತ ವಿಮೋಚನಾ ಕಾಯಿದೆ ಜ್ಯಾರಿಯಲ್ಲಿ ಬಂದಾಗ 1979 ರಲ್ಲಿ 62 ಸಾವಿರ ಜೀತ ವಿಮುಕ್ತರಿದ್ದರಂತೆ 1983 ರ ವರೆಗೆ 13 ಸಾವಿರ, ಮಂದಿಗೆ, 1983 ರಿಂದ 85 ರ ವರೆಗೆ (ಜನತಾ ಸರಕಾರದ ಅವಧಿಯಲ್ಲಿ) 14 ಸಾವಿರ ಜನರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆಯಂತೆ. ಕಳೆದ ವರ್ಷ ಒಂಭತ್ತು ಸಾವಿರ ಮಂದಿಗೆ ಪುನರ್ವಸತಿ ಕಲ್ಪಿಸುವ ಗುರಿ ಹಾಕಿಕೊಳ್ಳಲಾಗಿತ್ತಂತೆ. ಆದರೆ ಬರೀ 4800 ಮಂದಿಗಷ್ಟೇ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆಯಂತೆ.

ಶಿವಮೊಗ್ಗ - ಮೈಸೂರು ಜಿಲ್ಲೆಗಳೆರಡರಲ್ಲೇ 25 ಸಾವಿರ ಜನ ಪುನರ್ವಸತಿ ಪಡೆಯಬೇಕಾಗಿದೆಯೆಂದೂ ಮಂತ್ರಿಗಳು ಹೇಳಿದ್ದಾರೆ.

ರಾಜ್ಯದಲ್ಲಿಯ ಜೀತದಾಳುಗಳ ಪೂರ್ಣ ಗಣನೆ ಸರಿಯಾಗಿ ನಡೆದಿಲ್ಲ. ಭೂ ಮಾಲಕರ ಒತ್ತಾಯದಿಂದ, ಪುನರ್ವಸತಿಯ ವ್ಯವಸ್ಥೆಯಾಗದಿದ್ದಲ್ಲಿ ಬೀದಿಪಾಲಾಗಿ ಉಪವಾಸ ಬೀಳಬೇಕಾಗುತ್ತದೆಂಬ ಅಂಜಿಕೆಯಿಂದ ಸಾವಿರಾರು ಜನ ತಮ್ಮ ಹೆಸರನ್ನೇ ನೊಂದಾಯಿಸಿಲ್ಲ. ಪುನರ್ವಸತಿ ಕಾರ್ಯದಲ್ಲೂ ಭ್ರಷ್ಟಾಚಾರವಿದೆ, ಆ ಕೆಲಸ ಸರಿಯಾಗಿ ನಡೆಯುತ್ತಿಲ್ಲೆಂಬ ಆರೋಪಗಳನ್ನು ಗುಂಡೂರಾವ್ ಮುಖ್ಯಮಂತ್ರಿಯಾಗಿರುವ ಕಾಲದಿಂದಲೂ ಕೇಳುತ್ತಲಿದ್ದೇವೆ. ಪ್ರಾಂತ ರೈತ ಸಂಘದ ಹಾಗೆಯೇ ಇತರ ರೈತ ಸಂಘಗಳ ಸಹಕಾರದಿಂದ ಮಾತ್ರ ಈ ಸಮಸ್ಯೆ ಬಗೆಹರಿಯಬಹುದಾಗಿದೆಂದೂ ರೈತ ಸಂಘದ ಪ್ರತಿನಿಧಿಗಳನ್ನೊಳಗೊಂಡ ಕಮಿಟಿ ಜೀತ ಮುಕ್ತರನ್ನು ಗುರ್ತಿಸುವ, ಅವರಿಗೆ ಪರಿಹಾರ ಒದಗಿಸುವ ಕೆಲಸದ ಮೇಲ್ವಿಚಾರಣೆ ಮಾಡಬೇಕೆಂದೂ ನಾವು ಒತ್ತಾಯಿಸುತ್ತ ಬಂದಿದ್ದೇವೆ. ಸರಕಾರ ನಮ್ಮ ಸಲಹೆಯನ್ನೊಪ್ಪಿಕೊಂಡು ಈ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಮತ್ತೊಮ್ಮೆ ನಾವು ಸರಕಾರವನ್ನು ನಾವು ಒತ್ತಾಯಿಸುತ್ತೇವೆ.

ಜಾರ್ಜ ಫರ್ನಾಂಡೀಸ್‌ರಿಗೆ ಉತ್ತರ

ವಿದ್ಯಾನಗರದಲ್ಲಿ ಯುವಜನತಾ ಕಾರ್ಯಕರ್ತರ ಶಿಬಿರದಲ್ಲಿ ಭಾಷಣ ಮಾಡುತ್ತ ಜನತಾ ಪಕ್ಷದ ಮುಖಂಡರಾದ ಜಾರ್ಜ್ ಫರ್ನಾಂಡೀಸ್ ಅವರು ಎಂದಿನಂತೆಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷ, ಅದರ ನೇತೃತ್ವದ ಪಶ್ಚಿಮ ಬಂಗಾಲದ ಎಡರಂಗ ಸರಕಾರದ ಸಾರಿಗೆ ಮಂತ್ರಿ ರಬಿನ್ ಮುಖರ್ಜಿಯವರನ್ನು "ಭೂಮಿ ಪುತ್ರನಿಗೆ ಕೆಲಸ" ಎಂಬ ಘೋಷಣೆ ಕೊಟ್ಟಿದ್ದಾರೆಂದು ಆರೋಪಿಸಿದ್ದಾರೆ. ಅದು ಸತ್ಯಕ್ಕೆ ದೂರ.

ಬಂಡವಾಳಶಾಹಿ ಪಕ್ಷಗಳಾದ ಕಾಂಗ್ರೆಸ್, ಕಾಂಗ್ರೆಸ್ (ಎಸ್), ಜನತಾ ಪಕ್ಷಗಳೆಲ್ಲ ಆಯಾ ರಾಜ್ಯದ ಭೂಮಿಪುತ್ರರಿಗೆ ಆಯಾ ರಾಜ್ಯದಲ್ಲಿ ಕೆಲಸ ಎಂಬ ಸಂಕುಚಿತ ಘೋಷಣೆಗೆ ಬಲಿಯಾಗುತ್ತಿದ್ದಾರೆ. ಗಡಿಪ್ರದೇಶಗಳಲ್ಲಿ ಭಾಷೆ ಮತ್ತು ಪ್ರದೇಶಕ್ಕಾಗಿ ಹಿಂಸಾತ್ಮಕ ಚಳುವಳಿಯಲ್ಲಿ ಭಾಗವಹಿಸುತ್ತಿದ್ದಾರೆಂದು, ಆದರೆ ಸಿ.ಪಿ.ಐ.(ಎಂ) ಸಿ.ಪಿ.ಐ. ಪಕ್ಷಗಳು, ಪ್ರತ್ಯೇಕತಾವಾದ ಪ್ರಾದೇಶಿಕವಾದ, ಮಣ್ಣಿನ ಮಕ್ಕಳಿಗೆ ಮಾತ್ರ ಕೆಲಸ, ಭಾಷೆ ಗಡಿ ಸಮಸ್ಯೆಗಳ ಕುರಿತು ಖಚಿತ ನಿಲುವು ತಾಳಿದೆಂದು ಫರ್ನಾಂಡಿಸರು ತಿಳಿಯುವುದು ಅಗತ್ಯ. ಆ ಕಾರಣದಿಂದಲೇ ಕಾಂಗ್ರೆಸ್ (ಎಸ್) ಜನತಾ ಪಕ್ಷಗಳೂ, ಜಾತೀಯ ಪಕ್ಷಗಳಾದ ಶಿವಸೇನೆಯಂತವರ ಜೊತೆಯಲ್ಲಿ ಸೇರಿಕೊಂಡು ಕರ್ನಾಟಕ ಮಹಾರಾಷ್ಟ್ರ ಗಡಿಪ್ರದೇಶದಲ್ಲಿ ದಂಗೆ ಎಬ್ಬಿಸಬಾರದೆಂದು ಹೇಳಿ ಕಮ್ಯುನಿಸ್ಟ ಪಕ್ಷಗಳು, ಸಿ.ಪಿ.ಐ.(ಎಂ) ನೇತೃತ್ವದ ಪ. ಬಂಗಾಲ, ತ್ರಿಪುರಾದ ಎಡರಂಗ ಸರಕಾರಗಳು ಮಾತ್ರ ಸಂಕುಚಿತ ಭಾವನೆಯ "ಮಣ್ಣಿನ ಮಕ್ಕಳ" ವಾದವನ್ನು ವಿರೋಧಿಸುತ್ತಿದ್ದಾರೆ. ಹಾಗೆಯೇ ಪ್ರತ್ಯೇಕತಾವಾದ ಭಾಷೆ-ಗಡಿಗಾಗಿ ಜಗಳಗಳನ್ನು ವಿರೋಧಿಸುತ್ತಿವೆಯೆಂದೂ ಆದ್ದರಿಂದ ಜಾರ್ಜ್ ಫರ್ನಾಂಡೀಸರು ಸಿ. ಪಿ. ಐ. (ಎಂ) ಪ. ಬಂಗಾಲದ ಎಡರಂಗ ಸರಕಾರದ ವಿರುದ್ಧ ಸಲ್ಲದ ಅಪಪ್ರಚಾರ ಮಾಡುತ್ತಿದ್ದಾನೆಂದು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಆರೋಪಿಸುತ್ತದೆ.

ಕರ್ನಾಟಕ ಪ್ರಾಂತ ರೈತ ಸಂಘದ ಚರಿತ್ರೆಯ ಕುರಿತು-ಒಂದು ಇಣುಕು ನೋಟ

—ಪಿ. ರಾಮಚಂದ್ರರಾವ್

1936 ರಲ್ಲಿ ಉತ್ತರ ಪ್ರದೇಶದ ಲಕ್ನೋದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಸ್ಥಾಪಿಸಲ್ಪಟ್ಟಿತು. ರಾಷ್ಟ್ರಕ್ಕೆ ಸ್ವಾತಂತ್ರ್ಯ ಪಡೆಯುವುದು ಮತ್ತು ರೈತರ ಮತ್ತು ಕೃಷಿ ಕೂಲಿಕಾರರ ಸಮಗ್ರ ಉನ್ನತಿಯನ್ನು ಸಾಧಿಸುವುದು ಇವೆರಡು ಈ ರೈತಸಂಘದ ಪ್ರಮುಖ ಗುರಿಗಳಾಗಿತ್ತು. ಕುಡುಗೋಲು ಸುತ್ತಿಗೆ ಇರುವ ಕೆಂಬಾವುಟ ಸಂಘದ ಧ್ವಜವಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ಕರ್ನಾಟಕದಲ್ಲಿ ರೈತ ಸಂಘದ ಚಟುವಟಿಕೆಗಳು 1936 ರಿಂದೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರಂಭವಾಯಿತು. ದಕ್ಷಿಣ ಕನ್ನಡ ಜಿಲ್ಲೆ ಆಗ ಈಗಿನ ಕೇರಳದ "ಕಾಂಜಂಗಾಡ್" ತನಕ ಹಬ್ಬಿತ್ತು. ಮಲಬಾರ್ "ಜಮೀನ್ದಾರ್"ರ ವಿರುದ್ಧದ ಹೋರಾಟವು ಗ್ರಾಮಾಂತರ ಪ್ರದೇಶಗಳಲ್ಲಿ ಕಣ್ಣಾನೂರು ಜಿಲ್ಲೆಯಲ್ಲಿ ವಿಶಾಲವಾಗಿ ಮತ್ತು ವೀರಾವೇಶವಾಗಿ ಹರಡಿದಾಗ, ಅದರ ಕಾವು ದಕ್ಷಿಣ ಕನ್ನಡ ಜಿಲ್ಲೆಗೂ ತಗಲಿ ಅಲ್ಲಿಯೂ ಭೂಮಾಲಕರ ವಿರುದ್ಧ ಚಳವಳಿ, ಹೋರಾಟ ನಡೆಯಿತು. ಬಂಟ್ವಾಳದ ರೈತರ ಸಮ್ಮೇಳನವು 1946 ರಲ್ಲಿ ನಡೆದು ಅದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಮೂರ್ತೆದಾರರ ಸಮಸ್ಯೆಯನ್ನು ಕುರಿತು ತೀರ್ಮಾನಗಳು ಕೈಗೊಳ್ಳಲಾಗಿತ್ತು. ಎಸ್. ಎಸ್. ಹೊಳ್ಳ, ಕೃಷ್ಣಶೆಟ್ಟಿ ಮೊದಲಾದವರು ಅದರ ಮುಖಂಡತ್ವದಲ್ಲಿದ್ದರು. ಮುಂದೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಬಲ ಗೇಣಿದಾರರ ಚಳವಳಿ-ಹೋರಾಟಗಳು ಬೆಳೆದು ಬಂದವು. 1956ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೃಹತ್ ರೈತರ ಮೇಳವು ಮಂಗಳೂರಿನ ನೆಹರೂ ಮೈದಾನಿನಲ್ಲಿ ನಡೆಯಿತು ರೈತರು "ತಮ್ಮ ರೈತ ಸಂಘಕ್ಕೆ" ಆಗಿನ ಕಾಲದಲ್ಲಿ ರೂ 10 ಸಾವಿರಕ್ಕಿಂತಲೂ ಅಧಿಕ ಬೆಲೆಯುಳ್ಳ ದವಸ ಧಾನ್ಯಗಳನ್ನು ಗಾಡಿಗಳಲ್ಲಿ ತುಂಬಿ ಮೆರವಣಿಗೆಗಳಲ್ಲಿ ತಂದು ಕಾಣಿಕೆ ಕೊಟ್ಟಿದ್ದರು. 1956ರ ಈ ಸಮ್ಮೇಳನದಲ್ಲೇ ಆಗ ತಾನೇ ರಚಿಸಲ್ಪಟ್ಟ ಏಕೀಕೃತ ಕರ್ನಾಟಕ ರಾಜ್ಯದಲ್ಲಿ ರೈತ ಸಂಘ ರಚಿಸಲು ಸೂಚನೆ ಬಂತು.

ಪ್ರಾಂತ ರೈತ ಸಮ್ಮೇಳನ

ಈ ಸೂಚನೆಯ ಆಧಾರದಲ್ಲಿ ಬೆಂಗಳೂರಿನಲ್ಲಿ 1957 ರಲ್ಲಿ ಪ್ರಥಮವಾಗಿ ರೈತರ ಸಮ್ಮೇಳನವು ಜರಗಿ "ಕರ್ನಾಟಕ ಪ್ರಾಂತ ರೈತ ಸಂಘ"ವೆಂಬ ಹೆಸರಿನಲ್ಲಿ ಅಖಿಲ ಭಾರತ ಕಿಸಾನ್ ಸಭಾ ಸೇರ್ಪಡೆಯಾಗಿರುವ ಅದರ ರಾಜ್ಯ ಶಾಖೆಯಾಗಿರುವ ರೈತ ಸಂಘವು ಏರ್ಪಟ್ಟಿತು. ಇದರ ಉಲ್ಲೇಖ ಅಖಿಲ ಭಾರತ ಕಿಸಾನ್ ಸಭೆಯ ಕೇಂದ್ರ ಸಮಿತಿಯ ದಾಖಲೆಯಲ್ಲೂ ಇದೆ.

ಈ ಸಮ್ಮೇಳನಕ್ಕೆ ಮೊದಲು ದಕ್ಷಿಣ ಕನ್ನಡದಲ್ಲಲ್ಲದೆ, ಮುಖ್ಯವಾಗಿ ಕಾರವಾರ, ಬಿಜಾಪುರ, ಕೋಲಾರ ಮತ್ತು ಹೈದರಾಬಾದ್ ಕರ್ನಾಟಕದ ಜಿಲ್ಲೆಯಾದ ಗುಲ್ಬರ್ಗಾದಲ್ಲೂ ರೈತ ಸಂಘದ ಚಟುವಟಿಕೆಗಳು ಕೆಂಪುಬಾವುಟದಡಿಯಲ್ಲಿ "ಕಮ್ಯೂನಿಸ್ಟ್ ಪಕ್ಷದ ಮುಂದಾಳುಗಳ" ಪಂಕ್ತಿಮುದಿಂದ ನಡೆದಿದ್ದವು.

ಕಾರವಾರದ ಗೇಣಿ ಹೋರಾಟ

ಕಾಂ. ಎಸ್.ಎಲ್. ಉಪಾಧ್ಯಾಯರನ್ನು ಆಗಿನ ಮೈಸೂರ ಸರಕಾರ ಗಡೀಪಾರು ಮಾಡಿದಾಗ, ಅವರೂ ಅವರಂತೆ ಗಡೀಪಾರು ಮಾಡಲ್ಪಟ್ಟ ಪರುಳೇಕರರೂ (ಈಗ ಮಹಾರಾಷ್ಟ್ರದಲ್ಲಿ ಗೊದೂತಾಯಿ ಎಂದು ಹೆಸರಾಗಿರುವ ರೈತಮುಖಂಡರ ಪತಿ) ಇಬ್ಬರು ಸೇರಿ ಕಾರವಾರ ಜಿಲ್ಲೆಯಲ್ಲಿ (ಆಗ ಅದು ಬೊಂಬಾಯಿ ಪ್ರಾಂತದಲ್ಲಿತ್ತು.) ಗೇಣಿದಾರರ ಪ್ರಶ್ನೆಯನ್ನು ಕೈಗೆತ್ತಿ ಜಿಲ್ಲೆಯಾದ್ಯಂತ ಸಮರಧೀರ ಮತ್ತು ವಿಶಾಲ ಹೋರಾಟ ನಡೆಸಿದರು. ಸಾವಿರಾರು ಮಂದಿ ಜೈಲಿಗೆ ಹೋದರು ನೂರಾರು ರೈತ ಕಾರ್ಯಕರ್ತರು ಹಳ್ಳಿಹಳ್ಳಿಗಳಲ್ಲಿ ತಿರುಗಾಡಿ ರೈತರನ್ನು ಎಚ್ಚರಿಸಿದರು. ಕಿನ್ನರದ 85 ವರ್ಷದ ಮುದುಕ ಶ್ರೀ ಮಾರ್ಕಂಡೇಶ್ವರ ಈಗಲೂ ಅದರ ಪ್ರತೀಕವಾಗಿ ಕರ್ನಾಟಕ ಪ್ರಾಂತ ರೈತಸಂಘದ ಧುರೀಣರಾಗಿ ದುಡಿಯುತ್ತಿದ್ದಾರೆ. ಮುಂಬೈ ಪ್ರಾಂತದ ಮುಖ್ಯ ಮಂತ್ರಿಯಾಗಿದ್ದ ಶ್ರೀ ಮೊರಾರ್ಜಿ ದೇಸಾಯಿಯವರು ಗೇಣಿದಾರರ ಗೇಣಿಯನ್ನು ಆರರಲ್ಲಿ ಒಂದಂಶಕ್ಕೆ ಅಥವಾ ತೀರ್ವೆ ಹದಿನಾರು ಪಾಲಿನಷ್ಟು ಎಂದು ತೀರ್ಮಾನಿಸಿ ಕಾನೂನು ಪಾಸುಮಾಡಿದುದು ಈ ಎಲ್ಲಾ ಹೋರಾಟಗಳ ಫಲವಾಗಿ ಎಂಬುದನ್ನು ಮರೆಯಬಾರದು. ಈ ಹೋರಾಟವು ಕೆಂಪುಬಾವುಟದ ಅಡಿಯಲ್ಲಿ ನಡೆದದ್ದು ಎಂಬುದನ್ನು ಮರೆಯಬಾರದು.

ಮಾತ್ರವಲ್ಲ, ಉತ್ತರ ಕನ್ನಡದ ದಿನಕರ ದೇಸಾಯಿಗೆ ತಮ್ಮ ಕವನಗಳನ್ನು ಬರೆಯಲು ಸ್ಫೂರ್ತಿಕೊಟ್ಟ ಮಹಾ ಚಳವಳಿಯೇ ಈ ರೈತರ ಹೋರಾಟ ಎಂಬುದನ್ನು ಮರೆಯಬಾರದು.

ಬಿಜಾಪುರದಲ್ಲಿ

ಬಿಜಾಪುರದಲ್ಲಿ ಕರ್ನಾಟಕದ ಏಕೀಕರಣ ಹೋರಾಟದಲ್ಲಿ ಕಾಂ. ಎಸ್.ಕೆ. ಉಪಾಧ್ಯಾಯರಂತಹ ಕಮ್ಯುನಿಸ್ಟ್ ಮುಖಂಡರು ಅಹೋರಾತ್ರಿ ದುಡಿಯುತ್ತಿದ್ದಾಗ, ಈ ಹೋರಾಟದಲ್ಲಿ ರೈತರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವ ಉದ್ದೇಶದಿಂದಲೂ, ಸಮಾಜವಾದ, ರೈತ-ಕಾರ್ಮಿಕರ ರಾಜ್ಯ–ಇವುಗಳ ಕನಸು ಕಂಡು ಆ ಬಗ್ಗೆ ನಮ್ಮಲ್ಲೂ ರೈತರನ್ನು ತಯಾರು ಮಾಡುವ ದೃಷ್ಟಿಯಿಂದ ಬಿಜಾಪುರದಲ್ಲೂ ಪ್ರಾಂತ ರೈತ ಸಂಘದ ಚಟುವಟಿಕೆಗಳು ನಡೆದವು. ಅತ್ಯಂತ ಭಯದ ವಾತಾವರಣ ಬಿಜಾಪುರದ ಹಳ್ಳಿಗಳಲ್ಲಿದ್ದ ಆ ಕಾಲದಲ್ಲೂ ಧೈರ್ಯದಿಂದ ರೈತರ ಕೆಂಪುಬಾವುಟದ ಸಂದೇಶವನ್ನು ಬಿಜಾಪುರದ ಅನೇಕ ಹಳ್ಳಿಗಳಲ್ಲಿ ಹರಡಿದ ಸಾಹಸಮಯ ಕತೆ ಕಾಂ. ಎಸ್. ಕೆ. ಯವರದ್ದು.

ತೆಲಂಗಾಣ ಪ್ರಭಾವ

ಹಾಗೆಯೇ, ತೆಲಂಗಾಣದ ಹೋರಾಟ ಹೈದರಾಬಾದ್‌ನಲ್ಲಿ ನಡೆಯಿತು ತಾನೆ ? ಆ ನೈಜಾಮನ ಹೈದರಾಬಾದಿನ ಒಂದು ಜಿಲ್ಲೆಯಾದ ಗುಲ್ಬರ್ಗಾದಲ್ಲೂ ತೆಲಂಗಾಣ ರೈತರ ಹೋರಾಟದ ಅಲೆಗಳು ಹರಡಿ, ಅಲ್ಲಿನ ರೈತರನ್ನು ಜಾಗ್ರಗೊಳಿಸಿತ್ತು. ಕಾಂ ನವೋಶಿಯಂತವರು, ಕಾಂ. ಖಾನ್ ಸಾಹೇಬರಂತವರು ಆ ಸ್ಫೂರ್ತಿಯಿಂದ ಎಚ್ಚರಗೊಂಡು ರೈತರ ಬಗ್ಗೆ ಚಿಂತನೆ ಮಾಡಲು, ಕಮ್ಯೂನಿಸ್ಟ್ ಪಕ್ಷದ ಬೆಳವಣಿಗೆಯ ಅವಶ್ಯಕತೆಯ ಕುರಿತು ತಿಳಿದುಕೊಳ್ಳಲು ಆರಂಭಿಸಿದರು ರೈತರ ಚಳವಳಿಯು ಹಲವು ಹಳ್ಳಿ ಭಾಗಗಳಲ್ಲಿ ನಡೆಯಿತು. "ಕಿರಣಗಿ" ಗ್ರಾಮದ ರೈತ ಸಂಘದ ಚಟುವಟಿಕೆಗಳು ಇಂದಿನ ತನಕ ಅವ್ಯಾಹತವಾಗಿ ನಡೆಯುತ್ತಾ ಬಂದಿದೆ.

ಕೋಲಾರದಲ್ಲಿ

ಇನ್ನು ಕೋಲಾರ ಜಿಲ್ಲೆಯ "ಇನಾಮ್‌ದಾರಿ ವಿರುದ್ಧ ಹೋರಾಟ" ಈ ಹೋರಾಟವನ್ನು ಸಂಘಟಿಸಲು ಅಲ್ಲಿ ನಡೆದ ಹಲವು ಸಮ್ಮೇಳನಗಳು, ಇನಾಮದಾರರ ವಿರುದ್ಧ ರೈತರು ನಡೆಸಿದ ಪ್ರತಿಭಟನೆಗಳು ಇವೆಲ್ಲವೂ ಪ್ರಾಂತ ರೈತ ಸಂಘ ರೂಪುಗೊಳ್ಳುವ ಮುಂಚೆ ನಡೆದ ಹೋರಾಟಗಳು. ಈ ಹೋರಾಟಗಳ ಅನುಭವವೂ ಸೇರಿ "ಪ್ರಾಂತ ರೈತ ಸಂಘವು ಕರ್ನಾಟಕ ರಾಜ್ಯದಲ್ಲಿ ಕೆಂಪು ಬಾವುಟ ದಡಿಯಲ್ಲಿ ರಚಿಸಲ್ಪಟ್ಟಿದ್ದಾಗಿದೆ. ಮಾತ್ರವಲ್ಲ ಕರ್ನಾಟಕ ರಾಜ್ಯದ ಇನಾಮ್‌ದಾರರ ರದ್ದತಿ ಕಾನೂನನ್ನು ಮುಂತರಲು ಕಾರಣವಾಯಿತು.

ಎ. ಕೆ. ಗೋಪಾಲನ್

ಕರ್ನಾಟಕರಾಜ್ಯದಲ್ಲಿ ರೈತ ಚಳುವಳಿಯ ಉದಯದ ಸೂಕ್ಷ್ಮಪರಿಚಯದ ಜೊತೆಯಲ್ಲಿ ಹೋರಾಟ ಬೆಳೆದು ಬರುತ್ತಿದ್ದಂತೆಯೇ ಅಂದು ಅಖಿಲ ಭಾರತ ಕಿಸಾನ ಸಭೆಯ ಅಧ್ಯಕ್ಷರಾಗಿದ್ದ ದಿ. ಎ. ಕೆ. ಗೋಪಾಲನ್ ಅವರು ಕೋಲಾರ, ಧಾರವಾಡ, ಜಿಲ್ಲೆಗಳಲ್ಲಿ ಕೈಗೊಂಡ ಪಾದಯಾತ್ರೆ ಕರ್ನಾಟಕ ರಾಜ್ಯದಲ್ಲಿ ರೈತಸಂಘ ವಿಸ್ತಾರಗೊಂಡು ಭೂಮಿಗಾಗಿ, ಗೇಣಿಯ ಕಡಿತಕ್ಕಾಗಿ, ಭೂಮಾಲಕರ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ಸ್ಫೂರ್ತಿ ನೀಡಿದ್ದವೆಂಬುದನ್ನು ಮರೆಯುವಂತಿಲ್ಲ ಹಾಗೆಯೇ ರೈತ ಸಂಘದ ಬೆಳವಣಿಗೆಯ ಪ್ರಾರಂಭದ ಕಾಲದಲ್ಲೇ ಕಾರವಾರದ ಗಣು ಮಹಾಬಲ ನ್ಯಾಕ, ಬೆಳಗಾವಿಯ ಮಾರುತಿ, ಬಿಜಾಪುರದ ರಾಜೇಸಾಬ ಮೊದಲಾದವರೆಲ್ಲ ಪೋಲೀಸರ ಗುಂಡಿಗೆ ಗೂಂಡಾ ಜನರ ಅತ್ಯಾಚಾರಕ್ಕೆ ಬಲಿಯಾಗಿದ್ದರೆಂಬುದನ್ನೂ ನೆನಪಿಸಿಕೊಳ್ಳಬೇಕಾಗಿದೆ.

ಈ ರಾಜ್ಯಾದ್ಯಂತ ಹಬ್ಬಿರುವ ಕರ್ನಾಟಕ ಪ್ರಾಂತ ರೈತ ಸಂಘ ಆರಂಭದ ದಿನಗಳ ಒಂದು ಇಣುಕು ನೋಟ ಇದು. ○

ಅಖಿಲ ಭಾರತ ಕಿಸಾನ್‌ಸಭಾ

೨೫ ನೇ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿ

ರಾಯಚೂರಿನಲ್ಲಿ ನಡೆದ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನಕ್ಕೆ 28 ಪ್ರತಿನಿಧಿಗಳನ್ನು ಆರಿಸಿತು. ಇದರ ಜೊತೆಗೆ ಸಿ. ಕೆ. ಸಿ. ಸದಸ್ಯರಾದ ಪಿ. ರಾಮಚಂದ್ರರಾವ್ ರವರೂ ಕೂಡ ಸೇರಿ 29 ಜನರು. ಇದರಲ್ಲಿ 27 ಜನರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಕಾಂ. ಶಾಂತಿ ಮಯ್ ಘೋಷ್‌ರವರು ಮಂಡಿಸಿದ ವರದಿಯನ್ನು ಅಂದೇ ರಾತ್ರಿ ಕರ್ನಾಟಕ ರಾಜ್ಯದ ಪ್ರತಿನಿಧಿಗಳು ಚರ್ಚಿಸಿದರು. ಈ ಚರ್ಚೆಯಲ್ಲಿ ಮೂಡಿ ಬಂದ ಅಭಿಪ್ರಾಯಗಳನ್ನು ಕರ್ನಾಟಕದ ಪ್ರತಿನಿಧಿ ಮಾತನಾಡುವಾಗ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.

ವರದಿಯ ಮೇಲೆ ನಡೆದ ಚರ್ಚೆಯಲ್ಲಿ, ಕರ್ನಾಟಕದ ಪ್ರತಿನಿಧಿಗಳ ಪರವಾಗಿ ಭಾಗವಹಿಸಿದ ಕಾಂ. ಜಿ. ವಿ. ಶ್ರೀ ರಾಮರೆಡ್ಡಿಯವರು, ಅಖಿಲ ಭಾರತ ಕಿಸಾನ್ ಸಭಾದ ನಾಯಕತ್ವ ದುರ್ಬಲ ಕಿಸಾನ್ ಸಂಘಟನೆಯುಳ್ಳ ಕರ್ನಾಟಕ ರಾಜ್ಯಕ್ಕೆ ಹೆಚ್ಚು ಗಮನ ಹರಿಸಬೇಕು, ಇಲ್ಲಿಯ ತಪ್ಪುಗಳನ್ನು ಗುರ್ತಿಸಿ ಅದನ್ನು ಪರಿಹರಿಸಲು ರೈತ ಚಳುವಳಿಯನ್ನು ಮುಂದೆ ಕೊಂಡೊಯ್ಯಲು ಸಹಾಯ ಮಾಡಬೇಕು. ಪಶ್ಚಿಮ ಬಂಗಾಳದ ಅಗಾಧ ಸಾಧನೆಯಿಂದ ಬಂದ ಅನುಭವವನ್ನು ಇತರ ರಾಜ್ಯಗಳೊಡನೆ ಹಂಚಿಕೊಳ್ಳಬೇಕು ಎಂದರು,

ಕರ್ನಾಟಕದಲ್ಲಿ 3 ವರ್ಷಗಳಿಂದ ಬರಗಾಲ ಬಂದಡಸಿದೆ. ಈ ಬರಗಾಲ ಪೀಡಿತರಿಗೆ ಪರಿಹಾರ ಒದಗಿಸುವ ಬಗ್ಗೆ ಕರ್ನಾಟಕ ಪ್ರಾಂತ ರೈತ ಸಂಘ ಅನೇಕ ಜಿಲ್ಲೆಗಳಲ್ಲಿ ಹೋರಾಟ ನಡೆಸಿದೆ ಜಾಥಾಗಳನ್ನು ಸಂಘಟಿಸಿದೆ. ಈ ಬರಗಾಲ ಶಾಶ್ವತವಾಗಿ ಪರಿಹಾರವಾಗಬೇಕಾದರೆ ನೀರಾವರಿ ಹೆಚ್ಚಬೇಕು. ಈ ನೀರಾವರಿಯನ್ನು ಈ 12 ಒತ್ತಾಯಗಳ ನಿರ್ಣಯದಲ್ಲಿ ಸೇರಿಸಿಲ್ಲ. ನೀರಾವರಿಯನ್ನು ಅದರಲ್ಲಿ ಸೇರಿಸಬೇಕು. ಕೃಷಿಯಲ್ಲಿ ರಾಷ್ಟ್ರ ವ್ಯಾಪಿಯಾದ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಅದಕ್ಕಾಗಿ ರಾಷ್ಟ್ರವ್ಯಾಪಿ ಹೋರಾಟಗಳನ್ನು ರೂಪಿಸಬೇಕೆಂದರು,

ಕರ್ನಾಟಕ ರಾಜ್ಯದಲ್ಲಿ ಪ್ರಾಂತ ರೈತ ಸಂಘ, ಎನ್. ಟಿ ಆರ್. ರವರ ಸರ್ಕಾರವನ್ನು ಉರುಳಿಸಿದಾಗ ಎದ್ದ ಪ್ರತಿಭಟನೆಯಲ್ಲಿ ರೈತರನ್ನು ನೆರೆಯಿಸಿ ಗ್ರಾಮಾಂತರದಲ್ಲಿ ಈ ಹೋರಾಟದ ಮಂಚೂಣಿಯಲ್ಲಿತ್ತು. ಇಂತಹ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ತನ್ನ ಪಾತ್ರವನ್ನು ಪ್ರಾಂತ ರೈತ ಸಂಘ ನಿರ್ವಹಿಸುತ್ತಿದೆ. ಕೃಷಿ ಕಾರ್ಮಿಕರಿಗಾಗಿ ಕನಿಷ್ಠ ಕೂಲಿ ನಿರ್ಣಯಿಸಲು ಸಿ. ಐ. ಟಿ. ಯು ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದುದುಲ್ಲದೆ, ಕೃಷಿ ಯೋಗ್ಯ ಸರಕಾರಿ ಬಂಜರು ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದ ದರಖಾಸ್ತುದಾರರಿಗೆ ಪಟ್ಟಾ ಕೊಡಿಸಲು ಯಶಸ್ವಿ ಹೋರಾಟ ನಡೆಸಿದೆ. ರೈತ ಸಂಘ ಹತ್ತಿ ಬೆಳೆಗಾರರ ಸಮಾವೇಶ ನಡೆಸಿ ಹತ್ತಿ ಬೆಳೆಯ, ಪ್ರಧಾನವಾಗಿ ಲಾಭದಾಯಕ ಬೆಲೆಗಳ ಬಗ್ಗೆ ರಾಜ್ಯ ಸರ್ಕಾರದ, ರೈತರ, ಇತರ ಜನ ಸಾಮಾನ್ಯರ ಗಮನ ಸೆಳೆದಿದೆ ಎಂದರು.

ವರದಿಯ ಮೂರನೇ ಪುಟದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಹೆಸರಿಸುವಾಗ ಅದರಲ್ಲಿ ಎಡಕ್ರಿಶ್ಚಿಯನ್ ಗುಂಪುಗಳನ್ನು ಹೆಸರಿಸಿಲ್ಲ. ಕರ್ನಾಟಕದಲ್ಲಂತೂ ಈ ಗುಂಪುಗಳು ಗ್ರಾಮೀಣ ಪ್ರದೇಶದಲ್ಲಿ ರೈತರ ಮಧ್ಯೆ ಛಿದ್ರಕಾರಿ ಕೆಲಸಗಳನ್ನು ನಡೆಸಿವೆ. ಅದನ್ನು ಅಲ್ಲಿ ಸೇರಿಸಬೇಕು ಎಂದರು. ○

ಸುವರ್ಣಮಹೋತ್ಸವ ಸಮ್ಮೇಳನದ ಕರೆ

ಶಾಂತಿಗಾಗಿ ಹೋರಾಡಿ, ಸಂಘಟನೆಯನ್ನು ವಿಸ್ತರಿಸಿ

ಬಿಹಾರ ರಾಜ್ಯದ ರಾಜಧಾನಿ ಪಾಟ್ನಾದ ಸಹಜಾನಂದ ನಗರದಲ್ಲಿ ಮೇ 17 ರಿಂದ 19 ರ ವರೆಗೆ ನಡೆದ ಅಖಿಲ ಭಾರತ ಕಿಸಾನ್ ಸಭಾದ 25ನೇ ಸಮ್ಮೇಳನದ ಕರೆ, ಸುವರ್ಣ ಮಹೋತ್ಸವ ಅಧಿವೇಶನದ ಕರೆ ನಮ್ಮೆಲ್ಲರಲ್ಲಿ ರಿಂಗಣಗುಣಿಸಬೇಕು. ನಮ್ಮೆಲ್ಲ ಹಳ್ಳಿ, ಪ್ರತಿಧ್ವನಿ ಮೂಡಿಬರಬೇಕು. ಈ ಸಮ್ಮೇಳನದ ಮುಖ್ಯವಾದ ಕರೆಗಳು ಮೂರು.

1. ಅಣು ಯುದ್ಧದ ವಿರುದ್ಧ ಹೋರಾಟ

ಇಂದು ಜಗತ್ತಿನ ನೆತ್ತಿಯ ಮೇಲೆ ಭೀಕರವಾದ ಆಯುಧವೊಂದು ತೂಗಾಡುತ್ತಿದೆ. ದಿನ ದಿನದ ಬದುಕಿನ ಕಷ್ಟಕಾರ್ಪಣ್ಯದಲ್ಲಿ ಮುಳುಗಿ ಹೋದ ಕೃಷಿಕಾರಿ ಜನತೆಗೆ, ಭಯಾನಕ ವಿಶ್ವಯುದ್ಧಗಳ ಸಾವು ನೋವುಗಳಿಗೆ ತುತ್ತಾಗದ ನಮ್ಮ ಜನತೆಗೆ ಆ ಬಗ್ಗೆ ಅರಿವಿಲ್ಲ. ಕಾಳ ಸರ್ಪದ ನೆರಳಿನಲ್ಲಿ ಸುತ್ತಣ ಪ್ರಪಂಚದ ಅರಿವೇ ಇಲ್ಲದಂತೆ ತನ್ನಲ್ಲೇ ತಾನು ಮಗ್ನನಾಗಿರುವ ಕಪ್ಪೆಯಂತೆ ನಮ್ಮ ಇಂದಿನ ಸ್ಥಿತಿ

ಈ ಸ್ಥಿತಿ ಬದಲಾಗಬೇಕು. ಈ ಹಿಂದೆ ಜಗತ್ತಿನಲ್ಲಿ ಸಾಗಿದ ಎಲ್ಲಾ ಸಾಮ್ರಾಜ್ಯ ಶಾಹಿವಿರೋಧಿಹೋರಾಟಗಳಿಗೆ ತನ್ನ ಬೆಂಬಲವನ್ನು ಸಾರಿದ ಕಿಸಾನ್ ಸಭಾ, ಸಮತಾವಾದಿ ಸೋವಿಯತ್ ಯೂನಿಯನನ್ನು ಜಯಿಸಿ ಇಡೀ ಜಗತ್ತನ್ನೇ ನುಂಗಲು ಹೊರಟಿದ್ದ ಅತ್ಯಂತ ಕ್ರೂರಿನಾಝಿ ಹಿಟ್ಲರ್ ಸೈನ್ಯದ ವಿರುದ್ಧ ಹೋರಾಟ ಸಾರಿದ ಕಿಸಾನ್ ಸಭಾ,

ಇಂದು ವಿಶ್ವ ಶಾಂತಿ ರಕ್ಷಣೆಗಾಗಿ, ಅಣು ಯುದ್ಧದ ಅಪಾಯದ ವಿರುದ್ಧ, ಜಗತ್ತಿನಲ್ಲೆಲ್ಲ ಸ್ವಾತಂತ್ರ್ಯದ ಹೂವು ಅರಳಿದ್ದರೂ ಹೊಸಕಿ ಹಾಕುವೆನೆಂಬ ಜಂಭದ ಅಮೇರಿಕಾದ ವಿರುದ್ಧ ಚಳುವಳಿ ಹೂಡಬೇಕು. ತಮ್ಮ ಊರಿನಲ್ಲಿ ರಸ್ತೆ, ಶಾಲೆ, ಆಸ್ಪತ್ರೆ ಕೆರೆ ಕಟ್ಟೆಗಳು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗಾಗಿ ಬರಗಾಲದ ಬವಣೆ ತೀರಿ ಬದುಕು ಸುಗಮವಾಗುವುದಕ್ಕೆ ಅಮೇರಿಕನ್ ಹಾಗೂ ಇತರ ಸಾಮ್ರಾಜ್ಯ ಶಾಹಿಗಳ ಲಾಭ ಕೋರತನ, ಶೋಷಣೆ, ಅವುಗಳಿಗಾಗಿ ಯುದ್ಧದ ಪ್ರಯತ್ನ ಇವೆಲ್ಲ ಕಾರಣ ಎಂಬುದನ್ನು ರೈತರ ಪ್ರತಿ ಸಭೆಯಲ್ಲಿ ವಿವರಿಸಬೇಕು. ವಿಶ್ವಾದ್ಯಂತ ನಡೆಯುತ್ತಿರುವ ಶಾಂತಿ ಚಳುವಳಿಯ ಪ್ರವಾಹದಲ್ಲಿ ಭಾರತದ ರೈತರೂ ಸೇರಬೇಕು ಎಂದು ಕರೆಕೊಡುತ್ತದೆ.

2. ಸಂಘಟನೆಯನ್ನು ವಿಸ್ತರಿಸಿ

ಕಾಲ ಕಳೆಯಲು ಸಮಯವಿಲ್ಲ. ಇನ್ನೆಷ್ಟೂ ತಡ ಮಾಡಲಾಗದು. ರೈತ ಸಮುದಾಯದ ಬಹಳಷ್ಟು ಭಾಗ ಬಂಡವಾಳ ಶಾಹಿ – ಭೂಮಾಲಕ ಪಕ್ಷಗಳ ಹಿಡಿತದಲ್ಲಿಯೇ ಇದೆ. ಅವರೆಲ್ಲರೂ ಅತೃಪ್ತರಾಗಿದ್ದಾರೆ. ತಳಮಳಗೊಂಡಿದ್ದಾರೆ. ಹೆಚ್ಚು ಹೆಚ್ಚಾಗಿ ವಿಸ್ತಾರವಾದ, ದೊಡ್ಡ ದೊಡ್ಡ ಹೋರಾಟಗಳು ಬೆಳೆದು ಬರುತ್ತಿವೆ. ಆದರೆ ನಮ್ಮ ವರ್ಗ ಶತ್ರುಗಳು ಸುಮ್ಮನೆ ಕುಳಿತಿಲ್ಲ.

ದೇಶವನ್ನು ಹರಿದು ತುಂಡು ಮಾಡಬೇಕೆನ್ನುವ ಜಾತೀಯ ಮತೀಯ ಶಕ್ತಿಗಳು, ಅಮೇರಿಕ, ಬ್ರಿಟನ್, ಮೊದಲಾದ ಸಾಮ್ರಾಜ್ಯ ಶಾಹಿಗಳಿಂದ ಕುಮ್ಮಕ್ಕು ಪಡೆದು, ರೈತರ ಅತೃಪ್ತಿಯನ್ನು ವಿನಾಶಕಾರಿ ಮಾರ್ಗಕ್ಕೆ ಎಳೆಯುವುದರಲ್ಲಿ ಹಗಲಿರುಳೂ ನಿರತರಾಗಿದ್ದಾರೆ. ರೈತರ ಐಕ್ಯತೆಯನ್ನು ಮುರಿದು ದೇಶವನ್ನು ಒಡೆದು ತಮ್ಮ ಸ್ವಾಮ್ಯ, ಶೋಷಣೆ ನಿರಾತಂಕವಾಗುವಂತೆ ಮಾಡಿಕೊಳ್ಳುವ ಪ್ರಯತ್ನ ಅವರದು. ಈ ಷಡ್ಯಂತ್ರವನ್ನು ಮುರಿಯಲು ತಕ್ಷಣವೇ ಬೇಕಾಗಿರುವುದು ಭಾರತದ ಕಾರ್ಷಿಕ ರಚನೆಯ, ಕೃಷಿ ಪರಿಸ್ಥಿತಿಯ ಆಳವಾದ ತಿಳುವಳಿಕೆ ಹಾಗೂ ಸಂಘಟನೆಯನ್ನು ಬಲಪಡಿಸುವುದು. ದೇಶದ ಮೂಲೆ ಮೂಲೆಗೂ ಕಿಸಾನ್ ಸಭಾವನ್ನು ಹಬ್ಬಿಸುವುದು. ಇದಕ್ಕಾಗಿ ಸುವರ್ಣ ಮಹೋತ್ಸವ ವರ್ಷದಲ್ಲಿ ಕೆಲವು ಗುರಿಗಳನ್ನು ಗುರುತಿಸಲಾಗಿದೆ 50,000 ಹೊಸ ಹಳ್ಳಿಗಳನ್ನು ತಲುಪುವುದು, 80 ಲಕ್ಷ ಸದಸ್ಯತ್ವ ಸಾಧಿಸುವುದು, ಪ್ರತಿ ರೆವಿನ್ಯೂ ಹೋಬಳಿ, ಅಥವಾ ಸರ್ಕಲ್ಲಿಗೆ ಕಿಸಾನ್ ಸಭಾ ಸಂದೇಶವನ್ನು ಕೊಂಡೊಯ್ಯುವುದು ಇದು ಈ ವರ್ಷ ನಮ್ಮ ಗುರಿ.

ಈ ಸುವರ್ಣ ಮಹೋತ್ಸವ ಅಧಿವೇಶನದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅಖಿಲ ಭಾರತ ಕಿಸಾನ್ ಸಭಾವನ್ನು ರೈತರ ಐಕ್ಯತೆಯ ಪ್ರತೀಕವಾಗಿ, ಹೆಗ್ಗುರುತಾಗಿ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡೋಣ.

(ಮೂರನೆಯ ಕರೆ 12 ಅಂಶದ ಚಾರ್ಟರ್ ಅನ್ನು ಎಲ್ಲಾ ಕಡೆಯಲ್ಲಿ ಪ್ರಚಾರ ಮಾಡುವುದು, ಈ ಒತ್ತಾಯಗಳಿಗಾಗಿ ಹೋರಾಟ ನಡೆಸುವುದು. ಪುಟ ನಾಲ್ಕು ನೋಡಿ.)

ಕಿಸಾನ್ ಸಭೆಯ ಸುವರ್ಣಮಹೋತ್ಸವ ವಿಶೇಷ ಪುರವಣಿ

ಕೃಷಿ ಕ್ರಾಂತಿ ಸಾಧಿಸಲು ಸರಿಯಾದ ತಂತ್ರ ರೂಪಿಸಿರಿ

— ಕಾ|| ಹರಿಕಿಶನ್‌ಸಿಂಗ್ ಸುರ್ಜಿತ್

1953, ಏಪ್ರಿಲ್ ತಿಂಗಳಲ್ಲಿ ಕಣ್ಣಾನೂರಿನಲ್ಲಿ ನಡೆದ ಎ. ಐ. ಕೆ. ಎಸ್.ನ ಸಮ್ಮೇಳನದಲ್ಲಿ ಕಿಸಾನ್ ಸಭಾದ ನೀತಿ ನಿರೂಪಣೆಯನ್ನು ಸ್ವೀಕರಿಸಲಾಗಿತ್ತು. ಆದರೆ ಬದಲಾವಣೆಯಾಗುತ್ತಿರುವ ಪರಿಸ್ಥಿತಿಯ ಅವಶ್ಯಕತೆಗಳನ್ನು ಅದು ಪೂರೈಸಲಿಲ್ಲ. ಆದ್ದರಿಂದ ಹೊಸ ಬದಲಾವಣೆಗಳಿಗೆ ಸಂಬಂಧ ಪಟ್ಟಂತೆ ಹಲವಾರು ನಿರ್ಣಯಗಳ ಮೂಲಕ ತಂತ್ರಗಳನ್ನು ಬದಲಾಯಿಸಬೇಕಾಗಿ ಬಂತು.

ಈಗ ಮಂಡಿಸಿರುವ ಧೋರಣೆಯ ಕರಡು, ಬದಲಾವಣೆಗಳನ್ನೆಲ್ಲಾ ಸೇರಿಸಿಕೊಂಡಿದೆ. ಹಾಗೆಯೇ ಕೃಷಿ ರಂಗದಲ್ಲಿಯ ಬದಲಾವಣೆಯ ಪರಿಷ್ಕರಣ. ಹಾಗೂ ಕಿಸಾನ್ ಸಭಾದ ಸಂಘಟನೆ ಮತ್ತು ತಂತ್ರದ ಸ್ಥಾನವನ್ನೂ ಅಳವಡಿಸಿ ಕೊಂಡಿದೆ. 1936 ರಲ್ಲಿ ಸೇರಿದ ಕಿಸಾನ್ ಸಭೆಯ ಸ್ಥಾಪನಾ ಸಮ್ಮೇಳನದಲ್ಲಿ ನಿರೂಪಿಸಲ್ಪಟ್ಟ ಗುರಿ ಹಾಗೂ ಉದ್ದೇಶಗಳಿಂದ ಪ್ರಕಟಣೆ ಪ್ರಾರಂಭವಾಗುತ್ತದೆ. ಅಂದರೆ ರೈತರಿಗೆ ಕಾರ್ಮಿಕರಿಗೆ ಮತ್ತು ಇತರ ದುಡಿಯುವ ಜನತೆಗೆ ಯಾವ ತರದ ಸ್ವಾತಂತ್ರ್ಯ ಬೇಕೆಂಬುದನ್ನು ಕಿಸಾನ್ ಸಭಾ ಸ್ಪಷ್ಟ ಪಡಿಸಿದೆ. ಸುಲಿಗೆಯಿಂದ ಸಂಪೂರ್ಣ ಸ್ವಾತಂತ್ರ್ಯ, ದುಡಿಯುವ ಜನರಿಗೆಲ್ಲ ಹೆಚ್ಚಿನ ಆರ್ಥಿಕ ಸ್ವಾತಂತ್ರ್ಯ ಹಕ್ಕುಗಳ ಕುರಿತು ಅದರಲ್ಲಿ ಸ್ಪಷ್ಟ ದೂರ ಗೋಚರತೆ-ನಿರೂಪಣೆ ಇತ್ತು. ರಾಜಕೀಯ ಸ್ವಾತಂತ್ರ್ಯವನ್ನು ನಾವು ಪಡೆದಿದ್ದೇವೆ, ಆದರೆ ಕಿಸಾನ್ ಸಭೆಯ ಸ್ಥಾಪನೆಯಾದಾಗ ನಾವು ಮುಂದಿಟ್ಟು ಕೊಂಡಿದ್ದ ಗುರಿ ಸಾಧಿಸಲು ಹೋರಾಟ ಇನ್ನೂ ಮುಂದುವರಿಯಬೇಕಾಗಿದೆ.

ಈಗ ತಯಾರಿಸಿರುವ ಧೋರಣಾತ್ಮಕ ಪ್ರಕಟಣೆ, ರೈತ ಚಳುವಳಿ ನಡೆಸುವಲ್ಲಿ ಮತ್ತು ಅವರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸುವಲ್ಲಿ ಸಂಘಟನೆಯ ಪಾತ್ರವನ್ನು ಒತ್ತಿ ಹೇಳಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ, ಫ್ಯಾಸಿಸಮಿನ ವಿರುದ್ಧ ಹೋರಾಟದಲ್ಲಿ ಕಿಸಾನ್ ಸಭೆಯ ಪಾತ್ರ ಮತ್ತು ಫೈಸ್‌ಪುರದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ವೀಕರಿಸಿದ ನಿರ್ಣಯದಲ್ಲಿ ಕಿಸಾನ್ ಸಭಾ ನಡೆಸಿದ ಹೋರಾಟಗಳ ಪ್ರಭಾವ ಎಷ್ಟು ಬೀರಿತ್ತೆಂಬುದನ್ನು ಅದು ಸ್ಪಷ್ಟ ಪಡಿಸುತ್ತದೆ.

ಸಂಘಟನಾ ಗುರಿಗಳು

1. **50** ಸಾವಿರ ಹೊಸ ಹಳ್ಳಿಗಳನ್ನು ತಲುಪುವುದು.
2. **80** ಲಕ್ಷ ರೈತ ಸದಸ್ಯತ್ವ ಸಾಧಿಸುವುದು.
3. ದೇಶದ ಎಲ್ಲ ಹೋಬಳಿಗೆ ಕಿಸಾನಾದ ಸಭಾ ಸಂದೇಶ ಒಯ್ಯುವುದು.

ಕಾಂಗ್ರೆಸ್ಸಿನ ದೃಷ್ಟಿಕೋನ

ಸ್ವಾತಂತ್ರ್ಯದ ಪೂರ್ವದಲ್ಲಿ ಮತ್ತು ಅನಂತರ ನಡೆಸಿದ ಹೋರಾಟಗಳೆಲ್ಲ ಏನು ತೋರ್ಪಡಿಸಿವೆಯೆಂದರೆ, ಭೂಸುಧಾರಣೆಯ ಕುರಿತು ಕಾಂಗ್ರೆಸ್ಸಿನ ದೊಡ್ಡ ಮಾತುಗಳೆಲ್ಲ ನಿಜವಾಗಿಯೂ ಭೂಮಾಲಕರ ಹಿತರಕ್ಷಣೆಯ ಪರವಾಗಿದ್ದವು. ಅದರ ಬದಲಾಗಿ, ಕಿಸಾನ್ ಸಭಾ ಬಂಗಾಲದ ತೆಭಾಗ ಚಳುವಳಿ, ಉತ್ಪಾದನೆಯ ಅರ್ಧಪಾಲಿಗಾಗಿ ಪಂಜಾಬಿನ ರೈತರ ಹೋರಾಟ, ಪೆಪ್ಸುವಿನಲ್ಲಿ ಭೂ ಮಾಲಕರ ವಿರುದ್ಧ, ಮಹಾರಾಷ್ಟ್ರದಲ್ಲಿ ವಾರ್ಲಿ ಗುಡ್ಡಗಾಡು ಜನಾಂಗದ ಚಳುವಳಿ, ಕೇರಳದಲ್ಲಿ ಪುನ್ನಪ್ರ–ವಯ್ಯಲಾರ್ ಹೋರಾಟ, ತ್ರಿಪುರಾದ ಗುಡ್ಡಗಾಡು ರೈತರ ವೀರ

(7ನೆಯ ಪುಟಕ್ಕೆ)

ಅಖಿಲ ಭಾರತ ಕಿಸಾನ್ ಸಭಾ

50 ವರ್ಷಗಳ ಹಿಂದೆ ಏಪ್ರಿಲ್ 1936 ರಲ್ಲಿ ಲಖ್ನೋದಲ್ಲಿ, ಅಗ್ಗೆ ಬೇರೆ ಬೇರೆ ಪ್ರಾಂತಗಳಲ್ಲಿ ಕೆಲಸ ಮಾಡುತ್ತಿದ್ದ ರೈತ ಸಂಘಟನೆಗಳ ಪ್ರತಿನಿಧಿಗಳು ಸೇರಿ ಅಖಿಲ ಭಾರತ ಕಿಸಾನ್ ಸಭಾದ ಮೂಲ ಬೀಜ ರೂಪುಗೊಂಡಿತು.

ಅಂದು ರೂಪಿಸಿದ ಈ ಸಂಘಟನೆಯ ಉದ್ದೇಶ, ಎಲ್ಲಾ ರೀತಿಯ ಆರ್ಥಿಕ ಶೋಷಣೆಯಿಂದ ಪೂರ್ಣ ಸ್ವಾತಂತ್ರ್ಯ ಪಡೆಯುವುದು ರೈತರು ಹಾಗೂ ಕಾರ್ಮಿಕರಿಗೆ ಎಲ್ಲ ರಾಜಕೀಯ ಅಧಿಕಾರ ವರ್ಗಾವಣೆಯನ್ನು ಸಾಧಿಸುವುದು ಇದಕ್ಕಾಗಿ ರೈತರನ್ನು ಸಂಘಟಿಸಿ ಅವರ ತಕ್ಷಣದ ಬೇಡಿಕೆಗಳಿಗೆ ಹೋರಾಟ ಮಾಡುವ ಮೂಲಕ ಎಲ್ಲಾ ರೀತಿಯ ಶೋಷಣೆಯಿಂದ ಬಿಡುಗಡೆ ಹೊಂದುವ ಹೋರಾಟಕ್ಕೆ ಸಿದ್ಧಪಡಿಸುವುದು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವ ಮೂಲಕ ರಾಜಕೀಯ ಆರ್ಥಿಕ ಅಧಿಕಾರದ ವರ್ಗಾವಣೆಯನ್ನು ಸಾಧಿಸುವುದಾಗಿತ್ತು.

ಸ್ವಾತಂತ್ರ್ಯ ಪೂರ್ವದ ಹೋರಾಟಗಳು

ಈ ಘೋಷಣೆ ಒಂದೆಡೆ, ಎಲ್ಲಾ ರಾಜಕೀಯ ಪಕ್ಷಗಳ-ಕಾಂಗ್ರೆಸ್ಸಿಗರು, ಸಮಾಜವಾದಿಗಳು, ಕಮ್ಯುನಿಸ್ಟರು, ಇತರರು – ಸಾವಿರಾರು ದೇಶ ಪ್ರೇಮಿಗಳನ್ನು ಹುರಿದುಂಬಿಸಿ ಕಿಸಾನ್ ಸಭಾವನ್ನು ಸಂಘಟಿಸಿ, ಭೂಮಾಲೀಕರು, ಇತರ ಶೋಷಕರ ವಿರುದ್ಧ ನೂರಾರು ಹೋರಾಟಗಳನ್ನು ನಡೆಸುವಂತೆ ಸ್ಫೂರ್ತಿ ನೀಡಿತು. ತಮ್ಮ ತಕ್ಷಣದ, ಅಂತಿಕ ಬೇಡಿಕೆಗಳಿಗಾಗಿ ಹೆಣಗಾಡುತ್ತಿರುವ ರೈತ ಸಮುದಾಯದ ಜೊತೆಗೆ ತಮ್ಮನ್ನು ಗುರುತಿಸಿಕೊಂಡರೆ ಮಾತ್ರ ಸ್ವಾತಂತ್ರ್ಯ ಸಾಧನೆ ಸಾಧ್ಯ ಎಂಬ ಅರಿವನ್ನು ಈ ಪ್ರಜಾಪ್ರೇಮಿಗಳಲ್ಲಿ ಮೂಡಿಸಿತು.

ಮತ್ತೊಂದೆಡೆ ಕಿಸಾನ್ ಸಭಾದ ಪ್ರಾಂತೀಯ, ಜಿಲ್ಲಾ ಮತ್ತಿತರ ಘಟಕಗಳು ರೈತ ಸಮುದಾಯದ ವರ್ಗ ಪ್ರಜ್ಞೆಯನ್ನು ಜಾಗೃತಗೊಳಿಸಿ, ಅವರ ತಕ್ಷಣದ ಅಂತಿಕ ಬೇಡಿಕೆಗಳ ಪೂರೈಕೆ ಬ್ರಿಟಿಷರಿಂದ ಬಿಡುಗಡೆಯ ಹೋರಾಟದೊಂದಿಗೆ ಹೆಣೆದುಕೊಂಡಿದೆ ಎಂಬುದನ್ನು ತೋರಿಸಿದವು. ಇದರಿಂದಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಹಾಗೂ ಅವರ ಜೊತೆಗಾರರಾದ ಭಾರತದ ರಾಜರು, ಭೂ ಮಾಲಕರು ಬಡ್ಡಿ ಸಾಹುಕಾರರ ವಿರುದ್ಧ ಹೋರಾಟದಲ್ಲಿ ರೈತರ ಹೋರಾಟ ಒಂದು ಅಮೂಲ್ಯ ಶಕ್ತಿಯಾಗಿತ್ತು.

ಈ 50 ವರ್ಷಗಳಲ್ಲಿ ಸ್ಥಳೀಯವಾದ ಆಂಶಿಕ ಹೋರಾಟಗಳನ್ನು ಮಾತ್ರವೇ ಅಲ್ಲದೆ ಅಖಿಲ ಭಾರತ ಪ್ರಾಮುಖ್ಯತೆಯ ಅಗಾಧವಾದ ಕ್ರಾಂತಿಕಾರಿ ಹೋರಾಟಗಳನ್ನೂ, ಸೇರಿಸಿ ಅಸಂಖ್ಯ ಹೋರಾಟಗಳನ್ನು ನಡೆಸಿದ. ಹೆಮ್ಮೆ ಅಖಿಲ ಭಾರತಕಿಸಾನ್ ಸಭಾದ್ದಾಗಿದೆ. ಶ್ರೇಷ್ಠ ತೆಲಂಗಾಣ, ಬಂಗಾಲದ ತೇಭಾಗ, ಆಂಧ್ರ ರೈತರ ಹೋರಾಟ, ಉತ್ತರ ಮಲಬಾರ್, ತಮಿಳುನಾಡು, ಪೆಪ್ಸು, ಪಂಜಾಬ್, ಉತ್ತರಪ್ರದೇಶ, ಸುಮಾನ ಕಣಿವೆ, ಮಣಿಪುರ ತ್ರಿಪುರಾ, ವಾರ್ಲಿ ಮೊದಲಾದ ಮಹಾರಾಷ್ಟ್ರದಲ್ಲಿ ನಡೆದ ಹೋರಾಟಗಳು, ಬಿಹಾರದ ಬಕಸ್ತ್ ಹೋರಾಟದ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದು, ಈ ಹೋರಾಟಗಳಲ್ಲಿ ಲಕ್ಷಾಂತರ ರೈತರು ಭಾಗವಹಿಸಿದ್ದಾರೆ, ಸಾವಿರಾರು ಮಂದಿ ಮಡಿದು ಹುತಾತ್ಮರಾಗಿದ್ದಾರೆ.

ಈ ಅಸಂಖ್ಯ ಹುತಾತ್ಮರಿಗೆ ಮಣಿದು ಅವರು ದುಡಿದ ದಾರಿಯಲ್ಲಿಯೇ ದೃಢವಾಗಿ ಮುಂದುವರೆದು ಆ ಉಜ್ವಲ ವೀರ ಪರಂಪರೆಯನ್ನು ಮುಂದೆ ಸಾಗಿಸುತ್ತೇವೆ. ಎಂದು ಕಿಸಾನ್ ಸಭಾ ಘೋಷಿಸುತ್ತದೆ.

ಈ ರಾಷ್ಟ್ರೀಯ ಹೋರಾಟಗಳ ಜೊತೆಗೆ ವಿಶ್ವವ್ಯಾಪಿಯಾದ, ಎರಡನೇ ಮಹಾಯುದ್ಧದ ಮೊದಲು ಫ್ಯಾಸಿಸಂ ನಡೆಸುತ್ತಿದ್ದ ಧಾಳಿಗಳ ವಿರುದ್ಧ ಹೊರಾಡುತ್ತಿದ್ದ ವಿವಿಧ ದೇಶಗಳ ಜನತೆಯನ್ನು ಬೆಂಬಲಿಸುತ್ತಾ ಎರಡನೇ ಮಹಾಯುದ್ಧದ ಫ್ಯಾಸಿಸಂ ವಿರುದ್ಧ ಹೋರಾಟದಲ್ಲಿ ಭಾರತ ರೈತ ಸಮುದಾಯವನ್ನು ನೆರೆಸಿದೆ.

ರೀಗನ್ ಸರಕಾರದ ಧೋರಣೆಯ ಫಲವಾದ ಅಣು ಯುದ್ಧ ಅಪಾಯದ ವಿರುದ್ಧ ಹೋರಾಟದ ಮುಂಚೂಣಿಯಲ್ಲಿದೆ ಕಿಸಾನ್ ಸಭಾ.

ಈ ರೀತಿ ತಕ್ಷಣದ ಬೇಡಿಕೆಗಳ ವಿರುದ್ಧ ಹೋರಾಟದ ಜೊತೆ ಜೊತೆಯಲ್ಲಿಯೇ ಸಾಮ್ರಾಜ್ಯ ಶಾಹಿ ವಿರುದ್ಧ ಹೋರಾಟವನ್ನು, ಫ್ಯಾಸಿಸಂ ವಿರುದ್ಧ ಹೋರಾಟವನ್ನು, ವಿಶ್ವ ಶಾಂತಿಗಾಗಿ ಹೋರಾಟವನ್ನು ಮಾಡುತ್ತಾ ಬಂದುದರಿಂದ ಕಿಸಾನ್ ಸಭಾ, ಭಾರತ ರೈತ ಸಮುದಾಯದ ಬೃಹತ್ ಸಂಘಟನೆಯಾಗಿ ಬೆಳೆಯಲು ಸಾಧ್ಯವಾಯಿತು. ಕಾರ್ಷಿಕ ಸುಧಾರಣೆಯಒತ್ತಾಯವನ್ನು ಸ್ವಾತಂತ್ರ್ಯ ಮತ್ತು ಪ್ರಜಾ ಸತ್ತೆಯ ಘೋಷಣೆಯಲ್ಲಿ ಮಿಳಿತವಾಗುವಂತೆ ಮಾಡಲು ಸಾಧ್ಯವಾಯಿತು.

ಯಾವುದೇ ಪರಿಹಾರ ನೀಡದೆ ಭೂ ಮಾಲಿಕತ್ವವನ್ನು ವಜಾಮಾಡಿ ರೈತರಿಗೆ ಭೂಮಿಯನ್ನು ಹಂಚಬೇಕೆನ್ನುವ ವಿಷಯ ರಾಷ್ಟ್ರೀಯ ಪ್ರಜ್ಞೆಯ ಭಾಗವಾಗಲು ಸಾಧ್ಯವಾಯಿತು, ಪ್ರತಿಯೊಂದು ಪಕ್ಷವೂ ತೀವ್ರ ಭೂ ಸುಧಾರಣೆಯ ಬಗ್ಗೆ ಮಾತನಾಡಲು ಆರಂಭಿಸಿದುವು, ಇದರಿಂದಾಗಿಯೇ ಕಾಂಗ್ರೆಸ್‌ನ ಫೈಜ್ ಪುರ ಕಾರ್ಯಕ್ರಮ ಗೇಣೀ ಹಾಗೂ ಕಂದಾಯ ಇಳಿಸಬೇಕೆಂದು, ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿತು.

ಸ್ವಾತಂತ್ರ್ಯಾನಂತರದ ಬದಲಾವಣೆಗಳು

ಆದರೆ ಕಾಂಗ್ರೆಸ್ ನಾಯಕತ್ವ ಅಧಿಕಾರಕ್ಕೆ ಬಂದ ಮೇಲೆ ಈ ಆಶ್ವಾಸನೆಯನ್ನು ಜಾರಿ ಮಾಡಲಿಲ್ಲ ಅದಕ್ಕೆ ಬದಲಾಗಿ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸುತ್ತಿದ್ದ ರೈತಾಪಿ ಜನತೆಯ ಮೇಲೆ ಹಿಂದೆಂದೂ ಕಾಣದ ದಬ್ಬಾಳಿಕೆಯನ್ನು ಆರಂಭಿಸಿತು. ಭೂಮಿಗಾಗಿ, ಸರಕಾರದ ದಬ್ಬಾಳಿಕೆ, ಭಯಾನಕ ಕೃತ್ಯದ ವಿರುದ್ದ ಭಾರತದ ರೈತರ ಚಳುವಳಿ ಹಾಗೂ ಚೀನಾ ಜನತಾ ಕ್ರಾಂತಿಯ ಐತಿಹಾಸಿಕ ವಿಜಯದಿಂದ ಈ ಹೋರಾಟಗಳಿಗೆ ದೊರೆತ ಸ್ಫೂರ್ತಿ, ಕಾಂಗ್ರೆಸ್ ಸರಕಾರವನ್ನು ರೈತಾಪಿ ಜನತೆಯ ಕೆಲವು ವಿಭಾಗಕ್ಕೆ ರಿಯಾಯಿತಿ ನೀಡಬೇಕಾದ ಕೃಷಿ ಸಂಬಂಧಗಳಲ್ಲಿ ಕೆಲವು ಬದಲಾಣೆಮಾಡುವ ಕಾನೂನುಗಳನ್ನು ತರಬೇಕಾದ ಒತ್ತಾಯಕ್ಕೆ ಒಳಪಡಿಸಿತು.

ಈ ಕಾನೂನುಗಳು ಈ ಜಮೀನುದಾರರಿಗೆ ದೊಡ್ಡ ಮೊತ್ತದ ಹಣವನ್ನು ಪರಿಹಾರ ಕೊಟ್ಟು ಹಾಗೂ ವಿಸ್ತಾರವಾದ ಹೊಲಗಳನ್ನು ಸ್ವಂತ ಸಾಗುವಳಿಗೆಂದು ಉಳಿಸಿಕೊಳ್ಳಲು ಅವಕಾಶ ನೀಡಿ ಜಮೀನುದಾರಿ, ಜಾಗೀರುದಾರಿ ಮೊದಲಾದ ಕಾನೂನು ಬದ್ಧ ಭೂಮಾಲೀಕತ್ವನ್ನು ಕೊನೆಗೊಳಿಸಿದುವು. ಭೂಪರಿಮಿತಿ ಕಾನೂನಿನ ಲೋಪದೋಷಗಳ ಪ್ರಯೋಜನ ಪಡೆದು ಲಕ್ಷಾಂತರ ಗೇಣಿ ರೈತರನ್ನು ಒಕ್ಕಲೆಬ್ಬಿಸಿ ಭೂಮಾಲೀಕರು ಭೂಮಿ ಮೇಲೆ ತಮ್ಮ ಹಿತವನ್ನುಳಿಸಿಕೊಳ್ಳುವುದನ್ನು ಸಾಧ್ಯಮಾಡಲಾಯಿತು.

ತೀವ್ರ ಭೂಸುಧಾರಣೆ ತರುವ ಬದಲು ಕಾಂಗ್ರೆಸ್ ಸರಕಾರ 60 ರ ದಶಕದ ಮಧ್ಯಭಾಗದಲ್ಲಿ ಹಸಿರು ಕ್ರಾಂತಿಯ ಹೊಸತಂತ್ರ ಜ್ಞಾನವನ್ನು ಬಳಸಿ ನಗರಗಳಿಗೆ ಆಹಾರ ಪೂರೈಕೆ ಹಾಗೂ ಕೈಗಾರಿಕೆಗಳಿಗೆ ಕಚ್ಚಾ ಮಾಲು ಪೂರೈಕೆಯನ್ನು ಸಾಧಿಸಿಕೊಳ್ಳಲು ಬಯಸಿತು. ಈ ತಂತ್ರಜ್ಞಾನ ಹೆಚ್ಚು ಇಳುವರಿ ತಳಿಗಳು, ನೀರಾವರಿ ಹೆಚ್ಚಿಸುವುದು, ರಾಸಾಯನಿಕ ಗೊಬ್ಬರಗಳ ಉಪಯೋಗದ ಮೇಲೆ ಅವಲಂಬಿತವಾಗಿದೆ, ಇದರಿಂದ ಕೃಷಿ ಉತ್ಪಾದನೆ ಹೆಚ್ಚಿದರೂ ಕೆಲವೇ ಪ್ರದೇಶಕ್ಕೆ ಸೀಮಿತವಾಗಿ, ಅಸಮಾನತೆ ಹೆಚ್ಚಾಗಿದೆ. ಶ್ರೀಮಂತರಿಗೇ ಲಾಭವಾಗಿದೆ.

ಈಗ ಸದ್ಯನೇ ಬೇಕಾಗಿರುವುದು ಭಾರತದ ಕೃಷಿ ಪರಿಸ್ಥಿತಿಯ ಆಳವಾದ ತಿಳುವಳಿಕೆ ಹಾಗೂ ಸಂಘಟನೆಯನ್ನು ಬಲಪಡಿಸುವುದು.

ಸ್ವಾತಂತ್ರ್ಯಾನಂತರದ ನಾಲ್ಕು ದಶಕಗಳ ಕಾಲದ ಬಂಡವಾಳಶಾಹಿ ಕೃಷಿ ಕಾರ್ಯಕ್ರಮ ಭೂಮಾಲೀಕರು ಬೃಹತ್ ಹಿಡುವಳಿಗಳನ್ನು ತಮ್ಮ ಆಪ್ತೇಷ್ಟರಿಗೆ ಹಂಚಿಕೊಡುವುದರ ಮೂಲಕ, ಕೆಲವು ಹೆಚ್ಚುವರಿ ಭೂಮಿಯನ್ನು ರೈತರಿಗೆ ಮಾರುವ ಮೂಲಕ ತಾವೇ ಸ್ವತಃ ಕೃಷಿ ಉಸ್ತುವಾರಿ ಕೈಗೊಳ್ಳುವುದು ಅನಿವಾರ್ಯವಾಗುವಂತೆ ಮಾಡುವ ಮೂಲಕ ಹಳೆಯ ಭೂಮಾಲಿಕತ್ವವನ್ನು ಅಷ್ಟಿಷ್ಟು ರಿಪೇರಿ ಮಾಡುವ ಉದ್ದೇಶವನ್ನು ಹೊಂದಿದೆಯೇ ಹೊರತು ಕೃಷಿಯನ್ನು ಆಧುನಿಕ ಕೃಷಿ ಉದ್ದೇಶವನ್ನಾಗಿ ಪರಿವರ್ತಿಸಿ ಕಾರ್ಮಿಕ ಸಂಬಂಧಗಳ ಮೇಲಿರುವ ಪಾಳೆಯಗಾರಿ, ಅರೆಪಾಳೆಯಗಾರಿ ಸಂಬಂಧಗಳನ್ನು ನಾಶಮಾಡುವ ಉತ್ಪಾದಕ ಶಕ್ತಿಗಳನ್ನು ಬೃಹತ್ ಪ್ರಮಾಣದಲ್ಲಿ ಬಿಡುಗಡೆ ಮಾಡುವ ಉದ್ದೇಶ ಹೊಂದಿಲ್ಲ ಬಂಡವಾಳಶಾಹಿ ವರ್ಗ ಗ್ರಾಮಾಂತರ ಪ್ರದೇಶದಲ್ಲಿ ತಮಗೆ

ಹೊಸ ರಾಜಕೀಯ ಆಧಾರವಾಗ
ದಾದ ಹೊಸ ರೀತಿಯ ಭೂ ಮಾ
ರನ್ನು ಸೃಷ್ಟಿಸಲು ಪ್ರಯತ್ನಿ
ತಕಾವಿ ಸಾಲಗಳು, ಕೊಳವೆ
ಗಳನ್ನು ತೆಗೆಸುವುದು, ಬೀಜ ಗೊ
ಒದಗಿಸುವುದು, ಹೊಸ ಪಂಚಾಯಿ
ಅಧೀನದ ಅನೇಕ ಕಾರ್ಯ ಕ್ರಮ
ಇವೆಲ್ಲಾ ಈ ಭೂ ಮಾಲಕ ಶ್ರೀಮ
ರೈತರಿಗಾಗಿ ಕೈಗೊಂಡವುಗಳು.

ಸಾಮ್ರಾಜ್ಯ ಶಾಹಿಯ, ಪಾ
ಗಾರಿಯ ಜೊತೆ ಸೇರಿ ಕೊಂಡು ಭ
ಬಂಡವಾಳ ಶಾಹಿ ಪಥದಲ್ಲಿ ಹೊ
ತ್ತಿರುವುದರಿಂದ ಭಾರತದ ಮೇ
ವಿದೇಶಿ ಸಾಲ 1985 ರಲ್ಲಿ 10
ಕೋಟಿ ಡಾಲರುಗಳು (ರು. 10,0
ಕೋಟಿ ರೂಪಾಯಿಗಳು) ಗಳಿಗೆ ಏ
ಮುಂದಿನ ವರ್ಷದಿಂದ ಭಾರತದ
ನಲ್ಲಿ ಶೇ.23 ಭಾಗ ಈ ಸಾಲ ಪೂ
ಗಾಗಿ ತೆರಬೇಕಾಗಿರುವುದರಿಂದ ರೈ
ಸಂಕಷ್ಟ ಮತ್ತಷ್ಟು ಹೆಚ್ಚುತ್ತದೆ.

ಕೃಷಿಯಲ್ಲಿ ಅರೆ ಪಾಳೆಯಗಾರಿ
ಸಂಬಂಧಗಳ ಉಳಿಸಿಕೊಂಡೇ ಬ
ವಾಳಶಾಹಿಯ ಪ್ರವೇಶವಾಗುತ್ತಿ
ರಾಜ್ಯದಿಂದ ರಾಜ್ಯಕ್ಕೆ, ಪ್ರದೇಶದಿ
ಪ್ರದೇಶಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ ಬ
ವಾಳಶಾಹಿಯ ಪ್ರಮಾಣ ವ್ಯತ
ವಾಗುತ್ತದೆ. ಇಡೀ ಕೃಷಿ ಆ
ನಾಣ್ಯೀಕರಣಗೊಂಡಿದೆ (ಹಣ
ಮೂಲಕವೇ ಎಲ್ಲ ವ್ಯವಹಾರ
ಸಾಗುತ್ತಿದೆ, ಧಾನ್ಯ ರೂಪದ ಕ
ಮಾಯವಾಗುತ್ತಿದೆ) ಈ ದಿನ ಮಾ
ಕಟ್ಟೆಗೆ ಹೋಗುವವರು ಹೆಚ್ಚು
ಉತ್ಪಾದನೆ ಇರುವವರು ಮಾತ್ರ
ಅಲ್ಲಿ ಸಣ್ಣ ರೈತನೂ ಕೂಡ
ಉತ್ಪಾದನೆಯನ್ನು ಸುಗ್ಗಿಯ
ಕೂಡಲೇ ಮಾರುಕಟ್ಟೆಯಲ್ಲಿ ಮ
ನಂತರ ಆಹಾರ ಧಾನ್ಯಗಳನ್ನು ಕ
ಮತ್ತೆ ಕೊಳ್ಳ ಬೇಕಾಗುತ್ತದೆ. ಸ
ವ್ಯಾಪಾರಿಗಳು ಗುತ್ತೇದಾರರ ವಿರ
ಹೋರಾಟ ಮಾಡ ಬೇಕಾದರೆ,
ಬದಲಾವಣೆಯನ್ನು ಚೆನ್ನಾಗಿ ಅ
ಮಾಡಿಕೊಂಡರೆ ಮಾತ್ರ ಸಾಧ್ಯ.

ವಾಣಿಜ್ಯ ಬೆಳೆಗಳಾದ ಸಣ
ಹತ್ತಿ, ಕಬ್ಬು, ತೆಂಗು ಮೊದಲಾ
ಗಳಿಗೆ ಹಾಗೂ ಆಹಾರ ಧಾನ್ಯಗಳ
ಲಾಭದಾಯಕ ಬೆಲೆಗಳನ್ನು ನೀ
ಸರಕಾರ ನಿರಾಕರಿಸುತ್ತಿದೆ.

ನೀತಿ ನಿರೂಪಣೆಯ ಕರಡು

ೂಲಕ ರೈತರ ಮೇಲೆ ಹೊಸ ಧಾಳಿ ನ್ನು ಆರಂಭಿಸಿದೆ. ಇದು ಕಳೆದ ವು ವರ್ಷಗಳಿಂದ ಅನೇಕಹೋರಾಟ ಗೆ ಹಾದಿ ಮಾಡಿಕೊಟ್ಟಿತು. ಎಲ್ಲ ವಿಭಾಗಗಳನ್ನೂ ಸೆಳೆಯಿತು.

ಕಾನೂನು ಬದ್ಧ ಭೂ ಮಾಲೀ ್ವವನ್ನು ಕೊನೆಗಾಣಿಸಿದರೂ ಬೇರೆ ೀಕ ಭೂ ಸುಧಾರಣೆಗಳನ್ನು ರಿಗೆ ತಂದರೂ ಕೂಡ ಭೂ ಮಾಲಿ ಬಳಿ ಇನ್ನೂ ಶೇ. 26.5 ರಷ್ಟು ಮಿ ಇರುವುದನ್ನು ಕಾಣುತ್ತೇವೆ. ರಲ್ಲಿ ಭೂ ಮಾಲೀಕರು ಬೇಕಾ ಯದೇಶೀರ ಹಿಡಿದ ಬೇನಾಮಿ ಭೂಮಿ ಸೇರುವುದಿಲ್ಲ.

ಆದುದರಿಂದ ಭೂಹೀನರಿಗೆ ಭೂಮಿ ಕೊಡಿ ಎಂಬುದು ಈಗಲೂ ಕೇಂದ್ರ ಘೋಷಣೆಯಾಗಿಯೇ ಉಳಿಯುತ್ತದೆ.

ಈ ಘೋಷಣೆಗೆ ಜಯ ಸಿಗದೆ ಗ್ರಾಮೀಣ ಬಡತನ, ನಿರುದ್ಯೋಗ, ಈ ಸಮಸ್ಯೆಗಳು ಬಗೆ ಹರಿಯುವುದಾಗಲೀ ದೇಶದ ಸಮತೋಲನ ಬೆಳವಣಿಗೆ ಯಾಗಲೀ ಸಾಧ್ಯವಿಲ್ಲ.

ರೈತರ ಐಕ್ಯತೆ ಒಡೆಯಿತು

ಆದರೆ ಕಿಸಾನ್ ಸಭಾ ಸ್ಥಾಪನೆ ಾದ ಸಮಯದ ವರ್ಗಶಕ್ತಿಗಳ ಂಬಂಧ, ಸಮೀಕರಣ ಈಗ ಉಳಿ ್ಲ ಈ ಬದಲಾವಣೆಯನ್ನು ್ನಾಗಿ ಅರ್ಥ ಮಾಡಿ ಕೊಂಡರೆ ಾತ್ರ ತಕ್ಷಣದ ಘೋಷಣೆಗಳನ್ನು ಪಿಸುವುದು ಸಾಧ್ಯ.

ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಾಮಾಲೀಕರ ಹೊಲವನ್ನು ್ವಧೀನ ಪಡಿಸಿ ಹಂಚಿ ಕೊಳ್ಳುವ ೋಷಣೆಯ ಹಿಂದೆ ಎಲ್ಲ ರೈತರೂ ರೆಯುತ್ತಿದ್ದ ಪರಿಸ್ಥಿತಿ ಬದಲಾಗಿ ದು ಕಾಲು ಭಾಗದಷ್ಟು (ಶೇ. 25) ೀಮಂತ ಹಾಗೂ ಮಧ್ಯಮ ರ್ಗದ ರೈತರು ಈ ಕರೆಗೆ ಓಗೊಡುವು ್ಲ. ಇದೊಂದು ಕಡೆಯಾದರೆ ತ್ತೊಂದು ಕಡೆ ಶೇ. 70 ಭಾಗ ರುವ ಭೂಹೀನರು ಹಾಗೂ ಸಣ್ಣ ತರು ಈ ಬಗ್ಗೆ ಸಾಕಷ್ಟು ಪ್ರಜ್ಞಾ ಂತರಾಗಿಲ್ಲ, ಸಂಘಟಿತರಾಗಿಲ್ಲ. ಅವರು ೋರಾಟಕ್ಕಿಳಿದಾಗಲೂ ಅದು ಕೇವಲ ರ್ಕಾರಿ ಬಂಜರು ಭೂಮಿಗಾಗಿ, ಸಾಗು ಳಿಗೆ ಯೋಗ್ಯವಾದ ಅರಣ್ಯ ಭೂಮಿ ಾಗಿ ಮಾತ್ರ. ಭೂ ಪರಿಮಿತಿ ಯಿದೆ ವಿರುದ್ಧವಾಗಿ ಭೂ ಮಾಲಿ ರು ಉಳಿಸಿಕೊಂಡಿರುವ ಭೂಮಿಯ ಷಯದಲ್ಲಿಯೂ, – ಕೇರಳ, ಆಂಧ್ರ ್ರದೇಶದಲ್ಲಿ ಕೂಡ – ಹೋರಾಟ, ಿತಿಗೆ ಮೀರಿದ ಭೂಮಿಯನ್ನು ಗುರು ಸುವುದು ಹಾಗೂ ಸರ್ಕಾರದ ಸುಳ್ಳು ್ರಚಾರವನ್ನು ಬಯಲಿಗೆಳೆಯುವುದ ್ತಂತ ಮುಂದೆ ಹೋಗಲಾಗಲಿಲ್ಲ. ಶ್ಚಿಮ ಬಂಗಾಳದಲ್ಲಿ 1969 ರ ಂಯುಕ್ತ ರಂಗ ಸರಕಾರದಡಿಯಲ್ಲಿ ಾತ್ರವೇ ಈ ಹೆಚ್ಚುವರಿ ಭೂಮಿ ನ್ನು ಆಕ್ರಮಿಸಲು ಸಾಧ್ಯವಾಯಿತು. ದನ್ನು ನಾವು ತಕ್ಷಣದ ಕರ್ತವ್ಯ ಳನ್ನು ರೂಪಿಸುವಾಗ ಗಣನೆಗೆ ೆಗೆದು ಕೊಳ್ಳಬೇಕು.

40 ವರ್ಷಗಳಿಂದ ನಮ್ಮ ದೇಶ ವನ್ನಾಳಿದ ಕಾಂಗ್ರೆಸ್ ಪಕ್ಷ ಭೂ ಮಾಲೀಕತ್ವವನ್ನು, ಭೂ ಕೇಂದ್ರೀ ಕರಣವನ್ನು, ಹೆಚ್ಚುತ್ತಿರುವ ಭೂ ಹೀನತೆಯನ್ನು ಕೊನೆಗಾಣಿಸಲು ವಿಫಲವಾದರೂ ಸ್ವಾತಂತ್ರ್ಯ ಪೂರ್ವ ದಲ್ಲಿದ್ದ ಎಲ್ಲಾ ರೈತರ ಸಮಗ್ರ ಐಕ್ಯತೆ ಯನ್ನು ಒಡೆಯುವುದರಲ್ಲಿ ಯಶಸ್ವಿ ಯಾಯಿತು. ಆ ಐಕ್ಯತೆ ಶ್ರೀಮಂತ, ಮಧ್ಯಮ ರೈತರ ಮೇಲೆ ಅವಲಂಬಿತ ವಾಗಿತ್ತು ನಿಜ ಈಗ ನಾವು ಕೃಷಿ ಕೂಲಿಗಾರರು ಹಾಗೂ ಭೂಮಾಲೀಕರ ಮೇಲೆ ಅವಲಂಬಿತವಾದ ರೈತರ ಐಕ್ಯತೆಯನ್ನು ಕಟ್ಟುವುದಕ್ಕೆ ಪ್ರಯತ್ನಿಸುತ್ತಿದ್ದೇವೆ.

ಆಳುವ ಪಕ್ಷಗಳು–ಅದು ಕಾಂಗ್ರೆಸ್ ಆಗಲಿ, ಜನತಾ ಆಗಲಿ–ಪಂಚಾಯತಿ, ತಾಲ್ಲೂಕಾ ಬೋರ್ಡ್, ಜಿಲ್ಲಾ ಪರಿ ಷತ್, ಸಹಕಾರಿ ಸಂಘಗಳು, ಗ್ರಾಮೀಣ ಬ್ಯಾಂಕ್‌ಗಳ ಮೇಲಿರುವ ತಮ್ಮ ಹಕೋಟಿಯನ್ನು ರೈತರಲ್ಲಿರುವ ವಿಭ ಜನೆಯನ್ನು ಮುಂದುವರಿಸುವುದಕ್ಕೆ ಅವರ ಐಕ್ಯತೆಯನ್ನು ಒಡೆಯುವುದಕ್ಕೆ ಉಪಯೋಗಿಸುತ್ತಿದ್ದಾರೆ. ಜನತಾ ಪಕ್ಷದ ಎರಡು ವರ್ಷದ ಆಡಳಿತವೂ ಕೂಡ ಭೂ ಸುಧಾರಣೆಯ ವಿಷಯದಲ್ಲಿ ಅದರ ಧೋರಣೆಗಳು ಭಿನ್ನವಾಗಿಲ್ಲ ಎಂಬುದನ್ನು ತೋರಿಸಿತು. ಕೆಲವು ಜನತಾ ರಾಜ್ಯ ಸರ್ಕಾರಗಳೂ ಕಾಂಗ್ರೆಸ್‌ನ ಭೂಸುಧಾರಣಾ ಕಾನೂ ನನ್ನು ಮತ್ತೆ ಭೂಮಾಲೀಕರ ಪರ ವಾಗಿ ತಿದ್ದಬೇಕೆಂದು ಸೂಚಿಸಿದವು.

ಕೇಂದ್ರ ಸರ್ಕಾರದ ಜನವಿರೋಧಿ ಧೋರಣೆಗಳಿಗೆ ಬದಲಾಗಿ ಪಶ್ಚಿಮ ಬಂಗಾಳ, ತ್ರಿಪುರಾಗಳ ಎಡರಂಗ ಸರ್ಕಾರಗಳು ತಮ್ಮಲ್ಲಿರುವ ಬಹಳ ಸೀಮಿತ ಅಧಿಕಾರದ ಪರಿಮಿತಿಯಲ್ಲಿ ರೈತರಿಗೆ, ಕೃಷಿ ಕಾರ್ಮಿಕರಿಗೆ ಪರಿಹಾರ ನೀಡಲು ಎಲ್ಲಾ ಪ್ರಯತ್ನ ಮಾಡಿವೆ. ಇದು ಆ ರಾಜ್ಯಗಳಲ್ಲಿ ಕಿಸಾನ್ ಸಭಾ ವಿಸ್ತಾರಗೊಳ್ಳುವುದಕ್ಕೆ ಮಾತ್ರವೇ ಅಲ್ಲ, ಇಡೀ ದೇಶದ ರೈತರ ಚಳು ವಳಿಯ ಮೇಲೆ ಅಗಾಧ ಪರಿಣಾಮ ಬೀರಿವೆ.

ಗ್ರಾಮೀಣ ಸಮಾಜದ ರಚನೆಯಲ್ಲಿ ಉಂಟಾದ ಈ ಬದಲಾವಣೆಗಳನ್ನು ಅದರ ವಿವಿಧ ಮುಖವಾದ ಪರಿಣಾಮ ಗಳನ್ನು ಗಮನಕ್ಕೆ ತೆಗೆದುಕೊಂಡು ನಾವು ಭೂಮಾಲೀಕತ್ವದ ನಾಶ, ಭೂಹೀನರಿಗೆ, ಬಡರೈತರಿಗೆ ಭೂಮಿ ಹಂಚಿಕೆ ಎಂಬ ಘೋಷಣೆಯನ್ನು ಕಾರ್ಷಿಕ ಕ್ರಾಂತಿಯ ಕೇಂದ್ರ ಘೋಷಣೆಯನ್ನಾಗಿ, ನಾವು ಪ್ರಚಾರ ಮಾಡುತ್ತಾ, ಹೋಗಬೇಕಾದ ಘೋಷಣೆಯನ್ನಾಗಿ ಮುಂದುವರಿಸ ಬೇಕು. ಆದರೆ, ದೇಶದ ಬಹಳ ಭಾಗ ಗಳಲ್ಲಿ ಈ ಘೋಷಣೆಯ ಮೇಲೆ ತಕ್ಷಣದ ಹೋರಾಟಕ್ಕಿಳಿಯುವುದು ಸಾಧ್ಯವಿಲ್ಲ. ಅದು ಮುಖ್ಯವಾದ ಪ್ರಚಾರದ ಘೋಷಯಾಗಿಯೇ ಉಳಿ ಯುತ್ತದೆ ಎಂಬ ತೀರ್ಮಾನಕ್ಕೆ ಬರಬೇಕಾಗಿದೆ.

ಈ ಕೇಂದ್ರ ಘೋಷಣೆಯನ್ನು ಪ್ರಚಾರ ಮಾಡುತ್ತಿರುವಾಗಲೇ ಹೆಚ್ಚುವರಿ ಭೂಮಿಯನ್ನು, ಬೇನಾಮಿ ಭೂಮಿ, ಬಂಜರು ಭೂಮಿ ಇತ್ಯಾದಿ ಗಳನ್ನೂ ಆಕ್ರಮಿಸುವ ಘೋಷಣೆ ಹಾಕಬೇಕು. ತಕ್ಷಣದ ಹೋರಾಟಕ್ಕೆ ಕೃಷಿ ಕಾರ್ಮಿಕರ ಕೂಲಿ, ವಸತಿ ನಿವೇ ಶನ, ಗೇಣಿ ಇಳಿಕೆ, ಬರ್ಗಾದಾರರಿಗೆ (ಪ. ಬಂಗಾಳದಲ್ಲಿ) ಶೇ. 75 ಭಾಗ ಫಸಲು, ಒಕ್ಕಲೆಬ್ಬಿಸುವುದರ ವಿರೋಧ ವಾಗಿ, ಗ್ರಾಮೀಣ ಋಣಭಾರ ಮನ್ನಾ ಮಾಡುವುದು, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಾಗಿ, ಕಡಿಮೆ ಬಡ್ಡಿಯ ಸಾಲಕ್ಕಾಗಿ ತೆರಿಗೆ ಇಳಿಕೆ ಗಾಗಿ, ನೀರು, ವಿದ್ಯುತ್, ಭೂಮಾಲೀ ಕರ ಗೂಂಡಾಗಳ ಧಾಳಿಯ ವಿರುದ್ಧ, ಗಿರಿಜನ–ಹರಿಜನರ ಮೇಲೆ ಸಾಮಾ ಜಿಕ ದಬ್ಬಾಳಿಕೆ ವಿರುದ್ಧ, ಆಡಳಿತದಲ್ಲಿ ಭ್ರಷ್ಟಾಚಾರ ಮೊದಲಾದ ತಕ್ಷಣದ ಒತ್ತಾಯಗಳನ್ನು ತೆಗೆದುಕೊಳ್ಳಬೇಕು.

ಈ ಸಮಸ್ಯೆಗಳು ರೈತರ ಎಲ್ಲಾ ವಿಭಾಗಗಳನ್ನು ಬಾಧಿಸುತ್ತವೆ. ಬಡ, ಮಧ್ಯಮ, ಶ್ರೀಮಂತ ರೈತರೆಲ್ಲರನ್ನೂ ಈ ಸಮಸ್ಯೆಗಳಿಗೆ ಇಳಿಸಬಹುದು. ಕೃಷಿ ಕಾರ್ಮಿಕರು ಸಣ್ಣ ರೈತರನ್ನು ಕೇಂದ್ರ ವಾಗಿಟ್ಟುಕೊಂಡು ರೈತರ ಅತಿ ಬಲಿಷ್ಠ ಐಕ್ಯತೆಯನ್ನು ಕಟ್ಟುವುದಕ್ಕೆ, ಭೂ– ಮಾಲೀಕರೆಂಬ ಅಲ್ಪಸಂಖ್ಯಾತ ಶೋಷಕ ವರ್ಗವನ್ನು ಮೂಲೆಗುಂಪು ಮಾಡುವುದಕ್ಕೆ ರೈತರ ಈ ಎಲ್ಲಾ ವಿಭಾಗಗಳನ್ನು ಒಟ್ಟಿಗೆ ಸೆಳೆಯಬೇಕು.

ಇದೆಲ್ಲವೂ ಕೃಷಿಕಾರ್ಮಿಕ ಬಡ ರೈತ ರನ್ನು ಅವರದೇ ಬೇಡಿಕೆಗಳ ಆಧಾರ ದಲ್ಲಿ ಹಾಗೂ ಎಲ್ಲರಿಗೂ ಸೇರಿದ ಬೇಡಿಕೆ ಗಳ ಮೇಲೆ ಹೋರಾಟಕ್ಕೆ ಎಳೆಯು ತ್ತೇವೆ ಎಂಬುದರ ಮೇಲೆ ಅವಲಂಬಿತ ವಾಗಿದೆ. ಮಧ್ಯಮ ಹಾಗೂ ಶ್ರೀಮಂತ ರೈತರನ್ನು ಈ ಸಮಸ್ಯೆಗಳ ಮೇಲೆ ಹೋರಾಟಕ್ಕೆಳೆಯಬಹುದೆಂಬುದರಲ್ಲಿ ಸಂದೇಹವೇ ಇಲ್ಲ. ಕೃಷಿ ಕಾರ್ಮಿಕರ ಬೇಡಿಕೆಗಳಿಗೆ ಇತರ ರೈತ ವಿಭಾಗಗಳು ಬೆಂಬಲಿಸುವಂತೆ ಹಾಗೂ ಇವರು ಇತರ ರೈತರ ಬೇಡಿಕೆಗಳ ಹೋರಾಟವನ್ನು ಬೆಂಬಲಿಸುವಂತೆ ಈ ಮೂಲಕ ರೈತರ ಐಕ್ಯತೆಯನ್ನು ಸಾಧಿಸುವಂತೆ ಮಾಡ ಬೇಕಾದುದು ನಮ್ಮ ಕರ್ತವ್ಯ.

ಕೃಷಿಯ ಬಿಕ್ಕಟ್ಟು ತೀವ್ರವಾಗು ತ್ತಿದ್ದಂತೆ ರೈತರ ನಡುವೆ ಅಸಹನೆ, ಅತೃಪ್ತಿ ಹೆಚ್ಚುತ್ತದೆ. ಈ ಅತೃಪ್ತಿ ಯನ್ನು ಜಾತೀಯತೆ, ಮತಾಂಧತೆ, ದೇಶಾಂಧತೆಯನ್ನು ಹರಡುವ ಪ್ರತ್ಯೇಕ ವಾದಿ, ಛಿದ್ರಕಾರಿ ಶಕ್ತಿಗಳು ದುರುಪ ಯೋಗ ಮಾಡಿಕೊಳ್ಳ ಬಯಸುತ್ತಾರೆ. ಈ ಶಕ್ತಿಗಳ ಸಾಮ್ರಾಜ್ಯ ಶಾಹಿಗಳ ಬೆಂಬಲದಿಂದ ರಾಷ್ಟ್ರದ ಐಕ್ಯತೆಗೆ ಆತಂಕವನ್ನೊಡ್ಡುತ್ತವೆ. ರೈತರ ಐಕ್ಯತೆಯನ್ನು ಒಡೆಯುವುದು, ಅತೃಪ್ತಿಯನ್ನು ಛಿದ್ರಕಾರಿ ದಾರಿಗಳಲ್ಲಿ ಹರಿ ಬಿಡುವುದು ಅವರ ಗುರಿ. ಈ ಶಕ್ತಿ ಗಳ ವಿರುದ್ಧ ಹೋರಾಟ ಮಾಡಿದರೆ ಮಾತ್ರ ಕಿಸಾನ್ ಸಭಾ ಬೆಳೆಯಲು ಸಾಧ್ಯ.

ಆದುದರಿಂದ ಕಿಸಾನ್ ಸಭಾ ಈ ಸಂಘಟನೆಯ ಮೂಲಾಧಾರ ವಾದ ಮೂರು ರೀತಿಯ ಹೋರಾ ಟಕ್ಕೆ ತನ್ನನ್ನು ಅರ್ಪಿಸಿಕೊಳ್ಳ ಬೇಕು. ರೈತರ ತಕ್ಷಣದ ಆಂಶಿಕ ಬೇಡಿಕೆಗಳು ಹಾಗೂ ಮೂಲ ಬೇಡಿಕೆಗಳಿಗಾಗಿ ಹೋರಾಟ, ದೇಶದ ಐಕ್ಯತೆ ಹಾಗೂ ಕಿಸಾನ್ ಸಭಾದ ಐಕ್ಯತೆಗೆ ಆತಂಕವಾದ ಛಿದ್ರಕಾರಿ–ಪ್ರತ್ಯೇಕವಾದಿ ಶಕ್ತಿಗಳ ವಿರುದ್ಧ ಹೋರಾಟ, ವಿಶ್ವಶಾಂತಿ ಗಾಗಿ ಹೋರಾಟ. ಆದುದರಿಂದ ಕಿಸಾನ್ ಸಭಾ ಐಕ್ಯ ಹೋರಾಟ ವನ್ನು ಮುಂದುವರಿಸಲು ಪಣ ತೊಡು ತ್ತದೆ :

1. ರೀಗನ್ ಆಡಳಿತದ ನಾಯ ಕತ್ವದಲ್ಲಿ ಸಾಮ್ರಾಜ್ಯಶಾಹಿ ಜಗತ್ತನ್ನು ಅಣು ಯುದ್ಧದ ಬಾಯಿಗಿಡಲು ನಡೆ ಸಿದ ಮಿತಿಯಿಲ್ಲದ ಪ್ರಯತ್ನಗಳವಿರುದ್ಧ ಹಾಗು ಶಾಂತಿಯ ಹೋರಾಟದಲ್ಲಿ ಭಾರತದ ರೈತಾಪಿ ಜನತೆಯ ವಿಶಾಲ ಸಮುದಾಯವನ್ನು ನೆರೆಯಿಸಲು ತಮ್ಮ ಆರ್ಥಿಕ ವಿಮೋಚನೆಗಾಗಿ ಹೋರಾ ಡುತ್ತಿರುವ, ಸಾಮ್ರಾಜ್ಯ ಶಾಹಿಯ ಮಧ್ಯ ಪ್ರವೇಶದ ವಿರುದ್ಧ ತಮ್ಮ ಸ್ವಾತಂತ್ರ್ಯ, ಸಾರ್ವಭೌಮತ್ವದ ರಕ್ಷಣೆಗಾಗಿ ಹೋರಾಡುತ್ತಿರುವ ದಕ್ಷಿಣ ಆಫ್ರಿಕಾ, ಅಮೇರಿಕಾ, ಏಷ್ಯಾಗಳ ಜನತೆಯ ಜೊತೆ ಸೌಹಾರ್ದ ಬೆಂಬಲ ವನ್ನು ವ್ಯಕ್ತಪಡಿಸುವುದಕ್ಕಾಗಿ.

2. ಪರಿಹಾರವಿಲ್ಲದೆ ಭೂಮಾಲಿ ಕತ್ವದ ನಾಶ ಹಾಗೂ ಕೃಷಿ ಕಾರ್ಮಿ ಕರು ಹಾಗೂ ಸಣ್ಣ ರೈತರಿಗೂ ಭೂ ಹಂಚಿಕೆ ಎಂಬ ಕೇಂದ್ರ ಘೋಷಣೆಯ ಅಡಿಯಲ್ಲಿ ರೈತ ಸಮೂಹದ ಎಲ್ಲ

(5ನೇ ಪುಟಕ್ಕೆ)

ಸಹಜಾನಂದ ನಗರದ ಸ್ವಾಮಿ ಸಹಜಾನಂದರು

ಅಖಿಲ ಭಾರತ ಕಿಸಾನ್ ಸಭಾದ ಸುವರ್ಣ ಮಹೋತ್ಸವ ಅಧಿ ವೇಶನ ನಡೆದ ನಗರಕ್ಕೆ ಸ್ವಾಮಿ ಸಹಜಾನಂದ ನಗರ ಎಂದುಹೆಸರಿಸ ಲಾಗಿತ್ತು. ಈ ಸಹಜಾನಂದರು ಯಾರು ?

1936ರಲ್ಲಿ ಅಖಿಲ ಭಾರತ ಕಿಸಾನ್ ಸಭಾ ರೂಪುಗೊಂಡಾಗ ಪ್ರಥಮ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದವರು ಸ್ವಾಮಿ ಸಹಜಾನಂದರು. ಅಲ್ಲಿಂದ 1945ರ ವರೆಗೆ 9 ವರ್ಷಗಳ ಕಾಲ ಕಿಸಾನ್ ಸಭಾ ಅಧ್ಯಕ್ಷರಾಗಿದ್ದ ಸಹಜಾನಂದರು ಬಿಹಾರದಲ್ಲಿ ಬಕಸ್ತ್ (ಜಮೀ ನುದಾರರ ಸ್ವಂತ ಹೊಲ)ಗಳಿಂದ ಗೇಣಿದಾರರನ್ನು ಹೊರದಬ್ಬುವುದರ ವಿರುದ್ಧ ಮತ್ತಿತರ ಅನೇಕ ಹೋರಾಟಗಳಿಗೆ ನೇತೃತ್ವ ನೀಡಿದವರು. 1930ರ ದಶಕದಲ್ಲಿಯೇ ಅಖಿಲ ಭಾರತ ಕಿಸಾನ್ ಸಭಾ ಪ್ರಕಟಿಸಿದ "ಕಿಸಾನ್ ಚಳುವಳಿ"ಯ ಇತಿಹಾಸ (History of Kisan Movement) ಎಂಬ ಪುಸ್ತಕವನ್ನು ಜಿ ಎಸ್ ರಂಗಾರವರ ಜೊತೆ ಸೇರಿ ಬರೆದಿದ್ದಾರೆ. ಬಿಹಾರದ ಈ ಧೀರ ರೈತ ಹೋರಾಟಗಾರ ನಿಗೆ ವಂದನೆಯನ್ನು ಸಲ್ಲಿಸಲು ಅಧಿವೇಶನದ ಸ್ಥಳಕ್ಕೆ ಅವರ ಹೆಸರಿಡ ಲಾಯಿತು.

ಹನ್ನೆರಡು ಒತ್ತಾಯದ ಘೋಷಣೆ

ಕೃಷಿವಲಯದ ಸ್ಥಿತಿಗತಿಗಳನ್ನು ಪರಾಮರ್ಶಿಸಿದ ಅಖಿಲ ಭಾರತ ಕಿಸಾನ್ ಸಭಾದ 25 ನೇ ಸಮ್ಮೇಳನ, ಸ್ವಾತಂತ್ರ್ಯ ನಂತರ ಕಂಡ ನಾಲ್ಕು ದಶಕಗಳ ದೀರ್ಘ ಕಾಲದ ಅನುಭವ ರೈತಾಪಿ ಜನತೆಯ, ಇತರ ದುಡಿವ ಜನತೆಯ ನಿರೀಕ್ಷೆಗಳನ್ನು ಹುಸಿಗೊಳಿಸಿದೆ ಎಂದು ನಿರ್ಣಯಿಸಿತು. ಭೂಸುಧಾರಣೆಯ ತುತ್ತೂರಿ ಜೋರಾಗಿ ಊದಿದರೂ ಸಾಧಿಸಿದುದೇನೂ ಇಲ್ಲ. ರೈತರ ಅಲ್ಪ ಆದಾಯವನ್ನು ಲಾಭದಾಯಕ ಬೆಲೆ ನೀಡಿಕೆ, ಇತ್ಯಾದಿಗಳ ಮೂಲಕ ರಕ್ಷಿಸಲು ಏನೂ ಮಾಡಲಾಗುತ್ತಿಲ್ಲ.

ಕೃಷಿ ಬಿಕ್ಕಟ್ಟು ತೀವ್ರಗೊಂಡಿದೆ ಸರಕಾರ ಪ್ರಜಾಪ್ರಭುತ್ವ ಮಾರ್ಗದಲ್ಲಿ ನಡೆಯುವ ಹೋರಾಟಗಳ ಮೇಲೆ ಧಾಳಿ ಎಸಗುತ್ತಿದೆ.

ಈ ಸವಾಲನ್ನು, ಸರಕಾರ ಹಾಗೂ ಭೂಮಾಲಕರ ಧಾಳಿಯನ್ನು ಈ ಕೆಳಗಿನ ತುರ್ತು ಒತ್ತಾಯಗಳಿಗಾಗಿ ದೇಶ ವ್ಯಾಪಿಯಾದ ಚಳುವಳಿ ರೂಪಿಸುವ ಮೂಲಕ ಎದುರಿಸ ಬೇಕಾಗಿದೆ.

1) ಆಹಾರ ಧಾನ್ಯಗಳು, ಬೇಳೆಗಳು, ಅಡಿಗೆ ಎಣ್ಣೆ, ಉಪ್ಪು, ಸಕ್ಕರೆ, ಕಲ್ಲಿದ್ದಲು, ಸೀಮೆಎಣ್ಣೆ, ಸಾಮಾನ್ಯ ಬಟ್ಟೆ, ಜೀವ ಉಳಿಸುವ ಔಷಧಿಗಳು, ಬೆಂಕಿ ಪೊಟ್ಟಣ, ಮುಂತಾದವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒಂದುಸಾರ್ವಜನಿಕ ವಿತರಣೆಯ ಸಮಗ್ರ ವ್ಯವಸ್ಥೆಯ ಮೂಲಕ ನಗರ–ಗ್ರಾಮಗಳೆಂಬ ಭೇದ ಭಾವವಿಲ್ಲದೆ ಒದಗಿಸಬೇಕು. ಸಗಟು ವ್ಯಾಪಾರಿಗಳ ಲಾಭದ ಮೇಲೆ ಮಿತಿ ಹೇರಿ, ಸುಂಕವನ್ನು ಬಹಳಷ್ಟು ಕಡಿಮೆ ಮಾಡಿ, ಸರಕಾರ ನೆರವು ಧನ ನೀಡಿ ಕಡಿಮೆ ಮಾಡಿದ ಹಾಗೂ ಹತೋಟಿ ಬೆಲೆಗಳಲ್ಲಿ ಈ ವಸ್ತುಗಳನ್ನು ಪೂರೈಸಲು ಕೇಂದ್ರ ಸರಕಾರ ಉಚಿತವಾದ ಕ್ರಮ ಕೈಗೊಳ್ಳಬೇಕು

2) ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗುವಂತೆ ನೋಡಿಕೊಳ್ಳಬೇಕು. ಕಟಾವು ಆರಂಭವಾಗಿ ಉತ್ಪನ್ನಗಳು ಮಾರುಕಟ್ಟೆಗೆ ಬರಲಾರಂಭಿಸುತ್ತಲೇ ಸರಕಾರಿ ಸಂಸ್ಥೆಗಳು ಸಾಕಷ್ಟು ಖರೀದಿ ಮಾಡುವಂತೆ,ರೈತರು ಕಂಗಾಲಾಗಿ ನಿಕೃಷ್ಟ ಬೆಲೆಗೆ ಮಾರಲೇಬೇಕಾದ ಪರಿಸ್ಥಿತಿ ಬರದಂತೆ ಅವರನ್ನು ರಕ್ಷಿಸಬೇಕು. ದೊಡ್ಡ ಕೈಗಾರಿಕೋದ್ಯಮಿಗಳ ಹಿತಕ್ಕಾಗಿ ರೈತರನ್ನು ನ್ಯಾಯಬದ್ಧ ಲಾಭದಾಯಕ ಬೆಲೆಯಿಂದ ವಂಚಿಸುವ ಕೃಷಿ ಉತ್ಪನ್ನಗಳ ಆಮದು ಧೋರಣೆಯನ್ನು ತಕ್ಷಣ ನಿಲ್ಲಿಸಬೇಕು.

3) ಕೃಷಿ ಸಲಕರಣೆಗಳ ಮೇಲಿನ ಸುಂಕ ಕಡಿತಮಾಡಿ, ವಿಪರೀತ ಲಾಭದ ಮೇಲೆ ಮಿತಿ ಹೇರಿ ಅವುಗಳ ಬೆಲೆಯನ್ನು ಇಳಿಸಬೇಕು. ವಿದ್ಯುತ್ ದರ, ನೀರಾವರಿ ತೆರಿಗೆ ಹಾಗೂ ಇತರ ತೆರಿಗೆಗಳನ್ನು ದೊಡ್ಡ ಪ್ರಮಾಣದಲ್ಲಿ ಇಳಿಸಿ ವಿಶೇಷವಾಗಿ ಕೆಳಸ್ತರದ ರೈತಾಪಿ ವಿಭಾಗಗಳಿಗೆ ಪರಿಹಾರ ನೀಡಬೇಕು.

4) ಸದ್ಯದ ಭೂಸುಧಾರಣಾ ಶಾಸನಗಳ ಕುಂದುಕೊರತೆಗಳನ್ನು ಪಶ್ಚಿಮ ಬಂಗಾಲದ ಶಾಸನದ ಮಾದರಿಯಲ್ಲಿ ನೀಗಿಸಿ ಅವನ್ನು ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಪಶ್ಚಿಮ ಬಂಗಾಲದ ಬರ್ಗಾದಾರರೂ ಸೇರಿದಂತೆ ಎಲ್ಲಾ ಗೇಣಿದಾರರನ್ನು ಒಂದು ವರ್ಷದೊಳಗಾಗಿ ದಾಖಲೆ ಮಾಡಬೇಕು ಒಕ್ಕಲೆಬ್ಬಿಸುವುದನ್ನು ನಿರ್ಬಂಧಿಸಬೇಕು ಬೇಸಾಯಗಾರನೊಬ್ಬ ಗೇಣಿದಾರನಲ್ಲ ಎಂದು ಸಿದ್ಧಪಡಿಸುವ ಹೊಣೆ ಭೂಮಾಲೀಕರ ಮೇಲಿರಬೇಕು. ಭೂಅಭಿವೃದ್ಧಿ ಮಾಡಿ ಅಥವಾ ಹಾಗೇ ಆದರೂ ಬೇಸಾಯಕ್ಕೆ ಯೋಗ್ಯವಿರುವ ಎಲ್ಲಾ ಬಂಜರು ಭೂಮಿಯನ್ನು ನಿಗದಿ ಮಾಡಿದ ಸಮಯದೊಳಗೆ ಭೂಹೀನ ಕೃಷಿ ಕಾರ್ಮಿಕರಿಗೆ ಪುಕ್ಕಟೆಯಾಗಿ ಹಂಚಬೇಕು, ದೀರ್ಘ ಕಾಲದಿಂದ ಬೇಸಾಯ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸವುದನ್ನು ನಿಷೇಧಿಸಬೇಕು. ಆದಿವಾಸಿ ಜನಾಂಗಗಳ ಜಮೀನಿನ ಪರಭಾರೆ ಮತ್ತು ತಲೆತಲಾಂತರದಿಂದ ಅರಣ್ಯವನ್ನು ಭೋಗಿಸುತ್ತಿದ್ದ ಹಕ್ಕಿನ ಉಲ್ಲಂಘನೆಯನ್ನು ತಕ್ಷಣ ನಿಲ್ಲಿಸಬೇಕು.

5) ರೈತರಲ್ಲಿ ಬಡವಿಭಾಗಗಳಿಗೆ ಪರಿಹಾರ ದೊರೆಯುವಂತೆ ಸುಲಭ ಸಾಲ ಹಾಗೂ ಕೃಷಿಗೆ ಬೇಕಾದ ಸಾಮಗ್ರಿಗಳ ಪೂರೈಕೆ ಮಾಡಬೇಕು. ಗ್ರಾಮೀಣ ಸಾಲ ಸಂಸ್ಥೆಗಳು ತಮಗಾಗಿಯೇ ಮಾಡುವ ಖರ್ಚಿನಲ್ಲಿ ಕಡಿತ ಮಾಡಿ ಕೆಲಸದ ದಕ್ಷತೆಯನ್ನು ಹೆಚ್ಚಿಸಿ ಕೃಷಿಕರಿಗೆ ನೀಡುವ ಸಾಲದ ದರವನ್ನು ಇಳಿಸಲು ಕ್ರಮ ಕೈಗೊಳ್ಳಬೇಕು.

6) ಪ್ರವಾಹ ಮತ್ತು ಬರ ಮುಂತಾದ ಪ್ರಕೃತಿಯ ವಿಪತ್ತುಗಳಿಗೆ ಈಡಾದಜನಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ದೊರಕಿಸಬೇಕು, ಸಾಲ ಮರುಪಾವತಿಯನ್ನು ಮುಂದೆ ಹಾಕಬೇಕು ಮತ್ತು ರೈತಾಪಿ ವರ್ಗವನ್ನು ಕೀಟ, ಆಲಿಕಲ್ಲು ಮಳೆ, ಇತ್ಯಾದಿಗಳಿಂದ ಬೆಳೆನಾಶ ಮುಂತಾದ ಸಂಕಷ್ಟಗಳಿಂದ ರಕ್ಷಿಸಲು ದೇಶಾದ್ಯಂತ ಸಮಗ್ರ ಬೆಳೆ ವಿಮೆಯ ಒಂದು ಯೋಜನೆಯನ್ನು ಜಾರಿಗೆ ತರಬೇಕು.

ಗ್ರಾಮಾಂತರ ಜನಸಮೂಹಗಳಿಗೆ ಆರೋಗ್ಯ ಮತ್ತು ಶಿಕ್ಷಣ ಸೌಲಭ್ಯಗಳನ್ನು ಒದಗಿಸಬೇಕು. ಮುಖ್ಯವಾಗಿ ಎಲ್ಲರಿಗೂ ಅಕ್ಷರಾಭ್ಯಾಸ ಹಾಗೂ ಕುಡಿಯುವ ನೀರಿನ ಸೌಲಭ್ಯಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಬೇಕು.

ನೀರಾವರಿ ಸೌಲಭ್ಯಗಳನ್ನು ತ್ವರಿತವಾಗಿ ವಿಸ್ತರಿಸಬೇಕು. ಮುಖ್ಯತಃ ದೀರ್ಘಕಾಲದಿಂದ ಜಾರಿಯಾಗದೆ ಉಳಿದಿರುವ ದೊಡ್ಡ, ಮಧ್ಯಮ ಹಾಗೂ ಸಣ್ಣ ಪ್ರಮಾಣದ ನೀರಾವರಿಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಬೇಕು ಕೇಂದ್ರಸರಕಾರದ ಬಳಿ ಅನುಮತಿಗಾಗಿ ಕಾದು ಕುಳಿತಿರುವ ಯೋಜನೆಗಳಿಗೆ ಅನುಮತಿ ನೀಡಿ ಅಗತ್ಯವಾದ ಹಣಕಾಸು ನೆರವನ್ನು ಕೇಂದ್ರ ಸರಕಾರ ನೀಡಬೇಕು.

7) ಕೃಷಿ ಕಾರ್ಮಿಕರಿಗೆ ಉದ್ಯೋಗ ಮತ್ತು ಖಾತ್ರಿಯಾದ ಕನಿಷ್ಠ ಕೂಲಿ, ದೊರೆಯಲು ನೆರವಾಗುವಂತೆ NREP ಗೆ ಹಣ ಮಂಜೂರಿಯನ್ನು ಹೆಚ್ಚಿಸಬೇಕು. NREP, RLEGS ಯೋಜನೆಗಳಲ್ಲಿ ಕೃಷಿ ಕಾರ್ಮಿಕರಿಗೆ ಕೊಡುವ ಕೂಲಿ, ಎಲ್ಲಿಯೂ ದಿನಕ್ಕೆ 10ರೂ ಗಿಂತ ಕಮ್ಮಿಯಾಗಬಾರದು ಮತ್ತು ಯಾವ ಸಂದರ್ಭದಲ್ಲೂ ಸಂಬಂಧಪಟ್ಟ ರಾಜ್ಯದಲ್ಲಿ ಕಾನೂನು ಪ್ರಕಾರ ನಿಗದಿಗೊಳಿಸಿದ ಕನಿಷ್ಠ ಕೂಲಿಗಿಂತ ಕಡಮೆಯಾಗಬಾರದು.

8) ಕೃಷಿಕಾರ್ಮಿಕರಿಗೆ ಕನಿಷ್ಠ ಕೂಲಿ ಹಾಗೂ ಉತ್ತಮ ದುಡಿಮೆಯ ಪರಿಸ್ಥಿತಿ ದೊರೆಯುವಂತಾಗಲು ರಾಷ್ಟ್ರ ಮಟ್ಟದಲ್ಲಿ ಒಂದು ಕೇಂದ್ರೀಯ ಶಾಸನವನ್ನು ತುರ್ತಾಗಿ ರಚಿಸಬೇಕು. ಮತ್ತು ಗ್ರಾಮೀಣ ಬಡಜನತೆಯ ಜೀವನದ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಅಗತ್ಯವಾದ ಇತರ ಕ್ರಮಗಳನ್ನು ಕೈಗೊಳ್ಳಬೇಕು.

9) ದೇಶದ ಐಕ್ಯತೆಗೆ ಬೆದರಿಕೆಯನ್ನೊಡ್ಡಿರುವ ರೈತಾಪಿ ವರ್ಗದ, ಐಕ್ಯತೆಯನ್ನು ಮುರಿಯುವ ಕೋಮುವಾದಿ ಹಾಗೂ ವಿಚ್ಛಿದ್ರಕಾರೀ ಶಕ್ತಿಗಳ ಆಟವನ್ನು ವಿಫಲಗೊಳಿಸಬೇಕು.

10) ಪರಿಶಿಷ್ಟ ಜಾತಿಗಳು ಪರಿಶಿಷ್ಟ ಜನಾಂಗಗಳು, ಧಾರ್ಮಿಕ ಅಲ್ಪ ಸಂಖ್ಯಾತರು, ಹೆಂಗಸರು ಮತ್ತು ಸಮಾಜದ ಇತರ ದುರ್ಬಲ ವಿಭಾಗಗಳ ಮೇಲೆ ನಡೆಯುತ್ತಿರುವ ಹೈಹಿಕ ಹಲ್ಲೆಗಳನ್ನು ಕೊನೆಗೊಳಿಸಲು ಕಠಿಣ ಕ್ರಮ ಕೈಗೊಳ್ಳಬೇಕು.

11) ರಾಜ್ಯಗಳು ಸಾಮಾಜಿಕ, ಆರ್ಥಿಕ ಹಾಗೂ ಕೃಷಿ ಮುನ್ನಡೆಯ ತಮ್ಮ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಾಧ್ಯವಾಗುವಂತೆ ಅವುಗಳಿಗೆ ಸಾಕಷ್ಟು ಅಧಿಕಾರಗಳನ್ನು ನೀಡಿ ಕೇಂದ್ರ ರಾಜ್ಯ ಸಂಬಂಧಗಳನ್ನು ಪುನರೂಪಿಸಬೇಕು. ಪಂಚಾಯತುಗಳು ಬ್ಲಾಕ್ ಸಮಿತಿಗಳು, ಜಿಲ್ಲಾ ಪರಿಷತ್ತುಗಳು ಮೊದಲಾದ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಪ್ರಜಾಪ್ರಭುತ್ವೀಕರಣ ನಡೆಯಬೇಕು.

12) NSA, ESMA ಗಳನ್ನು ವಾಪಸು ಪಡೆಯಬೇಕು.

ಈ ಒತ್ತಾಯಗಳಿಗಾಗಿ ರೈತಾಪಿ ವರ್ಗವನ್ನು ಒಟ್ಟುಗೂಡಿಸಿ ಇತರ ಪಕ್ಷಗಳು ಹಾಗೂ ರೈತಸಂಘಟನೆಗಳೊಂದಿಗೆ ಐಕ್ಯ ಹೋರಾಟಗಳನ್ನು ಸಂಘಟಿಸಬೇಕೆಂದುAiKS ನ ಎಲ್ಲಾ ಘಟಕಗಳಿಗೆ ಸಮ್ಮೇಳನ ಮನವಿ ಮಾಡುತ್ತದೆ. ರೈತರ ಐಕ್ಯ ಕಾರ್ಯಾಚರಣೆಯಿಂದ ಮಾತ್ರವೇ ಸರಕಾರ ತನ್ನ ಜನ ವಿರೋಧಿಧೋರಣೆಗಳನ್ನು ಬದಲಿಸುವಂತೆ ಅದರ ಮೇಲೆ ಒತ್ತಡ ತರಲು ಸಾಧ್ಯ.

ಕೇಂದ್ರ ಕಿಸಾನ್ ಮಂಡಳಿ

ಅಖಿಲ ಭಾರತ ಕಿಸಾನ್‌ಸಭಾದ 25ನೇ ಸಮ್ಮೇಳನ 125 ಸದಸ್ಯರ ಅಖಿಲ ಭಾರತ ಕಿಸಾನ್ ಸಮಿತಿಯನ್ನು ಚುನಾಯಿಸಿತು ಈ ಮಂಡಳಿ ಸಭಾದ ಪದಾಧಿಕಾರಿಗಳನ್ನು ಹಾಗೂ ಕೇಂದ್ರ ಕಿಸಾನ್ ಮಂಡಳಿಯನ್ನು ಚುನಾಯಿಸಿತು. ಅವರ ಹೆಸರುಗಳು ಹೀಗಿವೆ :

ಅಧ್ಯಕ್ಷರು : ಗೋದಾವರಿ ಪರುಳೇಕರ್

ಉಪಾಧ್ಯಕ್ಷರು : ಉದ್ದರಾಜು ರಾಮಂ
ಬಿನೊಯ್ ಚೌಧುರಿ
ಎಂ. ಎ. ರಸೂಲ್
ಹೆಚ್. ಎಸ್. ಸುರ್ಜಿತ್

ಪ್ರಧಾನಕಾರ್ಯದರ್ಶಿ :
ಎನ್. ಶಂಕರಯ್ಯ

ಜೊತೆ ಕಾರ್ಯದರ್ಶಿಗಳು :
ಪಿ. ಕೆ. ಟಂಡನ್
ಟಿ. ಕೆ. ರಾಮಕೃಷ್ಣ
ವಿಪ್ಲವ್ ದಾಸಗುಪ್ತಾ

ಕೇಂದ್ರ- ಎಂ. ಬಸವಪುನ್ನಯ್ಯ, ಪಶ್ಚಿಮಬಂಗಾಳ- ಶಾಂತಿಮಯ್ ಘೋಷ್, ಪರಿತೋಷ್ ಚಟರ್ಜಿ, ಬಿನೊಯ್ ಕೋನಾರ್, ಹರನಾಥ್ ಚಂದ್ರ, ಖುದೀರಾಂ ಭಟ್ಟಾಚಾರ್ಯ, ಮನೀಂದ್ರ ಗೋಪೆ, ಆಂಧ್ರ-ಬಿ. ಎನ್. ರೆಡ್ಡಿ, ಕೋರಟಾಲ ಸತ್ಯನಾರಾಯಣ, ಪಿ. ಮಧು, ಕೇರಳ-ಎಂ. ಪಿ. ನಾರಾಯಣನ್ ನಂಬಿಯಾರ್, ಕೆ. ಪಿ. ಅರವಿಂದ ಕಿಶನ್, ಎ. ಪಿ ಕುರಿಯನ್, ಯು. ಕುಂಜುರಾಮನ್, ಉತ್ತರ ಪ್ರದೇಶ- ರಾಜ್‌ಕಿಶೋರ್‌ಸಿಂಗ್, ರಾಮ್ ಸುಮೇರ್ ಯಾದವ್, ತಮಿಳುನಾಡು- ಜಿ. ವೀರಯ್ಯನ್, ಕೆ. ವರದರಾಜನ್, ಅಸ್ಸಾಂ-ಅಚಿಂತ ಭಟ್ಟಾಚಾರ್ಯ, ಹೇಮೆನ್ ದಾಸ್ ಪಂಜಾಬ್-ಜಿ. ಎಸ್. ರಂಧಾವಾ, ಸರವನ್ ಸಿಂಗ್ ಚೀಮಾ, ಮೋಹನ್ ಸಿಂಗ್ ಜಾಂಡಿಯಾಲಾ, ಡಿ. ಎಸ್, ಜೋಹಲ್, ಒರಿಸ್ಸಾ- ಜಗನ್ನಾಥ ಮಿಶ್ರಾ, ರಾಜಸ್ಥಾನ- ಸೋಪತ್ ಸಿಂಗ್, ತ್ರಿಪುರಾ-ಸಮರ್ ಚೌಧುರಿ, ಕರ್ನಾಟಕ-ಪಿ. ರಾಮಚಂದ್ರರಾವ್, ಜಮ್ಮು-ಕಾಶ್ಮೀರ- ಗುಲಾಂನಬೀ ಮಲಿಕ್, ಮಹಾರಾಷ್ಟ್ರ – ಗಂಗಾಧರಪ್ಪ ಬರುಂಜೆ, ಬಿಹಾರ್ - ಕೆ. ಕೆ. ಸಿಂಗ್, ಸುಭೋದ್‌ರಾಯ್.

ಕಿಸಾನ್ ಮಂಡಳಿಯಲ್ಲಿ ಕರ್ನಾಟಕದ ಸದಸ್ಯರು

1. ಪಿ. ರಾಮಚಂದ್ರರಾವ್
2. ಎಂ ಎನ್. ಉಗ್ರಪ್ಪ
3. ಸಿ. ಎಸ್. ಬಾಳೆ

ಕಿಸಾನ್ ಸಭಾ ಸಮ್ಮೇಳನದ ನಿರ್ಣಯಗಳು

ಎ ಐ ಕೆ ಎಸ್. ನ ಈ ಸುವರ್ಣ ಮಹೋತ್ಸವ ವರ್ಷದ ಸಮ್ಮೇಳನ ಇನ್ನೂ ಹಲವು ಅಂತರಾಷ್ಟ್ರೀಯ ಹಾಗೂ ಇದರ ಮಹತ್ವದ ವಿಷಯಗಳ ಬಗ್ಗೆ ಠರಾವುಗಳನ್ನು ಅಂಗೀಕರಿಸಿತು. ವಿಶ್ವಶಾಂತಿಯ ಹೋರಾಟದಲ್ಲಿ ಭಾರತದ ರೈತಾಪಿ ಜನತೆ ಪಾಲುಗೊಳ್ಳುವಂತೆ ಪ್ರಯತ್ನಿಸಲು, ಏಶ್ಯಾದಲ್ಲಿ ಸಾಮ್ರಾಜ್ಯಶಾಹೀ ಕುತಂತ್ರಗಳ ವಿರುದ್ಧ ಹೋರಾಡುತ್ತಿರುವ ಶಕ್ತಿಗಳೊಂದಿಗೆ ಸೌಹಾರ್ದ ವ್ಯಕ್ತಪಡಿಸಿ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಮತ್ತು ನಮ್ಮ ನೆರೆಹೊರೆಯ ದೇಶಗಳ ಜನತೆಯ ಸಾಮ್ರಾಜ್ಯಶಾಹೀ ವಿರೋಧಿ ವಿಮೋಚನಾ ಹಾಗೂ ಪ್ರಜಾಪ್ರಭುತ್ವವಾದೀ ಹೋರಾಟಗಳಿಗೆ ಬೆಂಬಲ ವ್ಯಕ್ತಪಡಿಸಿ ಪ್ರತ್ಯೇಕ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಕಿಸಾನ್ ಸಭಾ ಸಮ್ಮೇಳನಕ್ಕೆ ಸ್ವಲ್ಪ ಮೊದಲು ಬಿಹಾರದ ರಾಜ್ಯ ಸರಕಾರದ ಗೋಲಿಬಾರ್‌ನಿಂದ 50 ಜನರ ಅಮಾನುಷ ಹತ್ಯೆಯನ್ನು ಸ್ವಾತಂತ್ರ್ಯ ನಂತರ ನಡೆದ ಅತಿ ಘೋರ ಹತ್ಯೆ ಎಂದು ಬಣ್ಣಿಸಿತು. ಈ ಘಟನೆ ನಡೆದ ಸ್ಥಳಕ್ಕೆ ಕಿಸಾನ್ ಕಮಿಟಿಯ ಒಂದು ಮಂಡಲ ಭೇಟಿ ಕೊಟ್ಟಿತು.

ಒಂದೆಡೆ ರಾಷ್ಟ್ರೀಯ ಐಕ್ಯತೆಯ ಆವಶ್ಯಕತೆಯನ್ನು, ಇನ್ನೊಂಡೆಡೆ ಸಾಂಸ್ಕೃತಿಕ ಭಿನ್ನ ಚಾರಿತ್ರಿಕ ಅನುಭವವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ರಾಜ್ಯಗಳ ಸಂಬಂಧವನ್ನು ಪುನರ್‍ರೂಪಿಸಬೇಕೆಂದು ಒತ್ತಾಯಿಸಿ, ಜನತೆಯ ಆಕಾಂಕ್ಷೆಗಳನ್ನು ಈಡೇರಿಸಲಾರದ ಸರಕಾರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಸುತ್ತಿರುವ ಹಲ್ಲೆಗಳನ್ನು ಎದುರಿಸಲು ಐಕ್ಯತೆ ದೃಢಗೊಳಿಸಬೇಕೆಂದು ಹಾಗೂ ರೈತ ಮತ್ತು ಇತರ ಪ್ರಜಾಪ್ರಭುತ್ವ ಆಂದೋಲನಗಳನ್ನು ಒಡೆಯುವ ಕೋಮುವಾದಿ, ವಿಚ್ಛಿದ್ರಕಾರಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಹೋರಾಡಲು ನಿರ್ಧರಿಸುವ ನಿರ್ಣಯಗಳನ್ನು 25ನೇ ಸಮ್ಮೇಳನ ಅಂಗೀಕರಿಸಿತು.

ಖಂಡನೆ-ಒತ್ತಾಯ

ಇವಲ್ಲದೆ ಕಾಂಗ್ರೆಸ್ (ಐ) ನ ಭೂಮಾಲೀಕ ಪರ ಧೋರಣೆಗಳಿಂದಾಗಿ ಹರಿಜನ-ಗಿರಿಜನರ ಮೇಲೆ ಈಗಲೂ ನಡೆಯುತ್ತಿರುವ ಅತ್ಯಾಚಾರಗಳನ್ನು ಖಂಡಿಸಿ, ಸಾಕ್ಷರತೆಯ ಗುರಿಸಾಧಿಸದೆ ಉಚ್ಚ ತಂತ್ರಜ್ಞಾನದ ಮೂಲಕ ಆಧುನೀಕರಣದ ಪ್ರಚಾರ ಮಾಡುವ ಹೊಸ ಶಿಕ್ಷಣನೀತಿಯನ್ನು ಸಮ್ಮೇಳನ ತೀವ್ರವಾಗಿ ಖಂಡಿಸಿ ಆಕ್ರಮಣಕಾರೀ ಭೂಮಾಲೀಕರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಲು ಹಾಗೂ ಶಿಕ್ಷಣವನ್ನು ಮೂಲಭೂತ ನಾಗರೀಕ ಹಕ್ಕೆಂದು ಪರಿಗಣಿಸುವ ಶಿಕ್ಷಣ ನೀತಿ ನಿರೂಪಿಸಬೇಕೆಂದು ಒತ್ತಾಯಿಸಿತು.

ಅಭಿನಂದನೆ-ಸ್ವಾಗತ

ಅಧಿಕಾರಗಳು ಸೀಮಿತವಾಗಿದ್ದರೂ ರೈತರು, ಕೃಷಿ ಕೂಲಿಕಾರರು ಹಾಗೂ ಇತರ ದುಡಿಯುವ ಜನಸಮೂಹಗಳಿಗೆ ಬಹಳಷ್ಟು ಪರಿಹಾರ ನೀಡಿ ಅವರಲ್ಲಿ ಆತ್ಮ ವಿಶ್ವಾಸ ಮೂಡಿಸಿರುವ ಪಶ್ಚಿಮ ಬಂಗಾಳ ಹಾಗೂ ತ್ರಿಪುರದ ಎಡರಂಗ ಸರಕಾರಗಳನ್ನು ಸಮ್ಮೇಳನ ಅಭಿನಂದಿಸಿತು.

ಸ್ವಾತಂತ್ರ್ಯದ ನಾಲ್ಕು ದಶಕಗಳ ನಂತರವೂ ಶೋಷಣೆಯ ಸರಪಳಿಯಲ್ಲಿರುವ ಕೃಷಿ ಕಾರ್ಮಿಕರು ಹೆಚ್ಚೆಚ್ಚು ಜಾಗೃತರಾಗಿ ಸಂಘಟಿತ ಹಾಗೂ ಹೋರಾಟದ ಅಗತ್ಯವನ್ನು ಮನಗಂಡು "ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ" ರಚಿಸಿಕೊಂಡದ್ದನ್ನು ಸಮ್ಮೇಳನ ಇನ್ನೊಂದು ಠರಾವು ಅಂಗೀಕರಿಸಿ ಸ್ವಾಗತಿಸಿತು. ಹಾಗೂ ಕೃಷಿ ಕ್ರಾಂತಿಯ ಈ ಎರಡು ಪ್ರಮುಖ ಪ್ರವಾಹಗಳಲ್ಲಿ ಐಕ್ಯತೆ ಬೆಸೆಯಲು ಜತೆಗೂಡಿ ಕೆಲಸಮಾಡಬೇಕೆಂದು ಮನವಿ ಮಾಡಿಕೊಂಡಿತು. ಅದೇ ರೀತಿ ಕಾರ್ಮಿಕ ವರ್ಗದೊಂದಿಗೆ ತನ್ನ ಸಖ್ಯತೆಯ ಪ್ರತಿಜ್ಞೆಯನ್ನು ಪುನರುಚ್ಚರಿಸಿ ಬಂಡವಾಳಶಾಹೀ ಶೋಷಣೆಯ ವಿರುದ್ಧ ಹಾಗೂ ಸಾಮಾಜಿಕ ಪರಿವರ್ತನೆಗಾಗಿ ಅದರ ಹೋರಾಟಗಳಿಗೆ ಬೆಂಬಲ ವ್ಯಕ್ತಪಡಿಸುವ ಇನ್ನೊಂದು ನಿರ್ಣಯವನ್ನು ಅಂಗೀಕರಿಸಿತು.

ಅಖಿಲ ಭಾರತ ಕಿಸಾನ್ ಸಭಾ ನೀತಿ ನಿರೂಪಣೆಯ ಕರಡು

[ಮುಂದುವರಿದ 3ನೆಯ ಪುಟದಿಂದ]

ದಳಗಳನ್ನು ನೆರೆಯಿಸುವುದಕ್ಕಾಗಿ ಪಣ ತೊಡುತ್ತೇವೆ.

ಈ ಘೋಷಣೆಗಳಿಗಾಗಿ ದುಡಿಯುವಾಗಲೇ 12 ತಕ್ಷಣದ ಒತ್ತಾಯಗಳ (ನೋಡಿ ಪು. 4) ಬೆಂಬಲಕ್ಕಾಗಿ ಎಲ್ಲ ರೈತ ಸಮೂಹವನ್ನು ನೆರೆಯಿಸಲು, ಇತರ ಎಲ್ಲಾ ರೈತ ಸಂಘಟನೆಗಳೊಡನೆ ಸೇರಿ ಐಕ್ಯ ಹೋರಾಟಗಳನ್ನು ಸಂಘಟಿಸಲು ಕಿಸಾನ್‌ಸಭಾ ಕರೆ ನೀಡುತ್ತದೆ. ರೈತರ ಐಕ್ಯ ಹೋರಾಟ ಮಾತ್ರ ಸರ್ಕಾರ ತನ್ನ ಜನ ವಿರೋಧಿ ಧೋರಣೆಗಳನ್ನು ಬದಲಾಯಿಸುವಂತೆ ಮಾಡಬಲ್ಲುದು.

ನಮ್ಮ ಆರ್ಥಿಕತೆಯ ಬೆಳವಣಿಗೆಯ ಕೀಲಿಕೈಯಾದದು ಕೃಷಿ ಸುಧಾರಣೆಗಳ ಕೇಂದ್ರಪಾತ್ರ. ರೈತರ ತಕ್ಷಣದ ಮತ್ತು ಅಂತಿಮ ಒತ್ತಾಯಗಳ ಈಡೇರಿಕೆ, ಕಾರ್ಮಿಕರ, ನೌಕರರ, ವ್ಯಾಪಾರಗಾರರ, ಕೈಗಾರಿಕೋದ್ಯಮಿಗಳ ಬೇಡಿಕೆಗಳ ಈಡೇರಿಕೆಯ ಜೊತೆ ಹೆಣೆದುಕೊಂಡಿದೆ ಆದ್ದರಿಂದಲೇ ನಮ್ಮ ಜನಸಮುದಾಯದ ಬಹುಭಾಗವನ್ನು ರೈತಾಪಿ ಜನತೆಯ ಅಂಶಿಕ ಹಾಗೂ ರಾಜಕೀಯ ಬೇಡಿಕೆಗಳ ಈಡೇರಿಕೆಯಲ್ಲಿ ನೆರೆಯಿಸಬಹುದು.

ಆದುದರಿಂದಲೇ ಕಿಸಾನ್ ಸಭಾ ಆದಷ್ಟು ಬೇಗ ರೈತರ ಎಲ್ಲ ವಿಭಾಗಗಳನ್ನು ತನ್ನಲ್ಲಿಗೆ ಸೆಳೆದುಕೊಂಡು ರೈತರ ಹಾಗೂ ಇಡೀ ಜನತೆಯ ಹೋರಾಟದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುವಂತೆ ಬೃಹತ್ ಸಂಘಟನೆಯಾಗಿ ಬೆಳೆಯಬೇಕು.

ಎಲ್ಲಾ ರೈತ ಹೋರಾಟಗಾರರು ಬಂದು ಸೇರಿ

ಕಿಸಾನ್ ಸಭಾ ಇಂದಿಗಿಂತ ಹೆಚ್ಚು ಸಂಘಟಿತವಾಗಿ, ಸಮರ್ಥವಾಗಿ ಬೆಳೆದರೆ ಮಾತ್ರ ಈ ಗುರಿ ಸಾಧನೆ ಸಾಧ್ಯ. ಪ್ರತಿಯೊಬ್ಬ ರೈತನನ್ನೂ ಕಿಸಾನ್‌ಸಭಾದೊಳಕ್ಕೆ ತಂದು, ಪ್ರತಿಹಳ್ಳಿಯಲ್ಲಿ ಕಿಸಾನ್ ಸಭಾದ ಘಟಕಗಳನ್ನು ರಚಿಸಿ ಗ್ರಾಮದ ಕಿಸಾನ್ ಘಟಕ, ರೈತರ ಎಲ್ಲ ಸಮಸ್ಯೆಗಳನ್ನೂ ಎದುರಿಸಲು ಸಾಧ್ಯವಾದರೆ ಮಾತ್ರ, ಈ ಲಕ್ಷಾಂತರ ಹಳ್ಳಿಗಳಲ್ಲಿ ಕಿಸಾನ್ ಘಟಕಗಳ ಚಟುವಟಿಕೆಗಳನ್ನು ಕಿಸಾನ್ ಸಭಾದ ಮೇಲಿನ ಘಟಕಗಳು ಕ್ರೋಢಿಕರಿಸಿದರೆ ಮಾತ್ರ ಎಲ್ಲಾ ಜನರನ್ನೂ ಈ ಹೋರಾಟಗಳಲ್ಲಿ ನೆರೆಯಿಸಬಹುದು ಹಾಗೂ ಜನಸಮುದಾಯದ ವಿಶಾಲ ಹೋರಾಟವನ್ನಾಗಿ ಪರಿವರ್ತಿಸಬಹುದು.

ಕಿಸಾನ್‌ಸಭಾ, ಈ ಸಂಘಟನೆಯನ್ನು ಕಟ್ಟುವಲ್ಲಿ, ಅನೇಕ ರಾಜ್ಯ, ಜಿಲ್ಲೆ ಹಾಗೂ ಸ್ಥಳಗಳಲ್ಲಿ ಹೋರಾಟಗಳನ್ನು ಹೂಡುವಲ್ಲಿ ಐತಿಹಾಸಿಕವಾದ ಪಾತ್ರವಹಿಸಿದ್ದರೂ ಕಿಸಾನ್‌ಸಭಾ ಸಂಘಟನೆ ಆವರಿಸದ ದೊಡ್ಡ ಪ್ರದೇಶಗಳು ಉಳಿದಿವೆ. ರೈತಾಪಿ ಜನತೆಯ ಹೊಸ ಹೊಸ ವಿಭಾಗಗಳು ಹೋರಾಟಕ್ಕಿಳಿಯುತ್ತಿದ್ದರೂ, ರೈತರ ಚಳುವಳಿಯಲ್ಲಿ ಹಿಂದುಳಿದ ಪ್ರದೇಶಗಳು ಎಂದು ಇಲ್ಲಿಯವರೆಗೂ ಪರಿಗಣಿತವಾದ ಪ್ರದೇಶಗಳಲ್ಲಿ ಭೂಮಾಲಿಕರ, ಲೇವಾದೇವಿಗಾರರ, ಸರಕಾರದ ವಿರುದ್ಧ ಹೊಸ ಹೊಸ ಚಳುವಳಿಗಳು ಸ್ಫೋಟನೆಗೊಂಡರೂ ಈ ಹೊಸ ಪ್ರದೇಶಗಳು ಹೊಸ ರೈತ ವಿಭಾಗಗಳನ್ನು ಕಿಸಾನ್ ಸಭಾದ ಪರಿಧಿಯೊಳಕ್ಕೆ ತರಲಾಗಿಲ್ಲ. ಕೆಲವು ರಾಜ್ಯಗಳಲ್ಲಿ ಕೆಲವು ಜಿಲ್ಲೆಗಳಲ್ಲಿ ಇತರ ರೈತ ಸಂಘಟನೆಗಳು ಕೆಲಸ ಮಾಡುತ್ತಿರುವೆಡೆಗಳಲ್ಲಿ, ಈ ಎಲ್ಲಾ ಶಕ್ತಿಗಳನ್ನೂ ಒಟ್ಟಾಗಿ ಸೇರಿಸಿದರೇ ಹೋರಾಟ ಪರಿಣಾಮಕಾರಿಯಾಗಲು ಸಾಧ್ಯ ಎಂದು ಅಭಿಪ್ರಾಯ ಪಡುತ್ತದೆ.

ಇಂದು ಕಿಸಾನ್ ಸಭಾದ ಹೊರಗಡೆ ಇದ್ದು ರೈತರ ಹಿತಾಸಕ್ತಿಗಳಿಗಾಗಿ ಹೋರಾಡುತ್ತಿರುವ ಎಲ್ಲರಿಗೆ, ಎಲ್ಲ ರೈತ ಸಂಘಟನೆಗಳಿಗೆ ಅಖಿಲಭಾರತ ಕಿಸಾನ್‌ಸಭಾವನ್ನು ಅತ್ಯಂತ ದೀರ್ಘಕಾಲ ಅತ್ಯಂತ ಹೆಚ್ಚು ರೈತ ಹೋರಾಟಗಳನ್ನು ಸಂಘಟಿಸಿದ, ಅತಿ ಹೆಚ್ಚು ಸದಸ್ಯರನ್ನುಳ್ಳ, ದೇಶದಲ್ಲಿಯೇ ಅತಿವ್ಯಾಪಕವಾದ ಸಂಘಟನೆಯನ್ನುಳ್ಳ ಕಿಸಾನ್ ಸಭಾವನ್ನು ಸೇರಿಕೊಳ್ಳಿರಿ ಎಂದು ಮನವಿ ಮಾಡುತ್ತದೆ.

ಇದರ ಬಹಳಷ್ಟು ನಾಯಕರು ಕಮ್ಯುನಿಸ್ಟರಾದರೂ ಕೂಡ ಈ ಕಿಸಾನ್‌ಸಭಾ ಕಿಸಾನರದೇ ಆದ ಸಂಘಟನೆ.

ಪ್ರಾಥಮಿಕ ಕಿಸಾನ್ ಸಭಾದಲ್ಲಿರುವ ನೂರಾರು, ಸಾವಿರಾರು ರೈತರೇ ಆ ಸಭಾದ, ಅಖಿಲ ಭಾರತ ಕಿಸಾನ್ ಸಮಿತಿ, ಹಾಗೂ ಕೇಂದ್ರ ಕಿಸಾನ್ ಕೌನ್ಸಿಲ್‌ನ ವರೆಗೂ ಎಲ್ಲಾ ಮೇಲಿನ ಘಟಕಗಳ ಪ್ರತಿನಿಧಿಗಳನ್ನು ಆರಿಸುತ್ತಾರೆ. ಈ ಆಯ್ಕೆಯಲ್ಲಿ ಒಬ್ಬ ಕಮ್ಯುನಿಸ್ಟ್, ಸಮಾಜವಾದಿ ಅಥವಾ ಕಾಂಗ್ರೆಸ್ಸಿಗ ಅಥವಾ ಬೇರೆ ಪಕ್ಷದ ಸದಸ್ಯನಾಗಿದ್ದಾನೆಯೆ ಎಂಬುದನ್ನು ಗಣಿಸದೇ ಅವಿರತ ಶ್ರಮ ಹಾಗೂ ಸ್ವಾರ್ಥರಹಿತ ತ್ಯಾಗದ ಮೂಲ ನಂಬಿಕೆಯನ್ನು ಗಳಿಸಿದ್ದಾನೆಯೇ ಎಂಬುದು ಮಾತ್ರ ಪರಿಗಣಿತವಾಗುತ್ತದೆ.

ಅದುದರಿಂದಲೇ ಸ್ವಾಮಿ ಸಹಜಾನಂದ ಸರಸ್ವತಿ, ರಾಹುಲ್ ಸಾಂಕೃತ್ಯಾಯನ, ಇಂದೂ ಲಾಲ್‌ಯಾಜ್ಞಿಕ್, ಇವರು ಕಮ್ಯುನಿಸ್ಟರಾದ ಬಂಕಿಂ ಮುಖರ್ಜಿ, ಕಾರ್ಯಾನಂದ ಶರ್ಮ, ಎ. ಕೆ ಗೋಪಾಲನ್, ಮುಜಾಫರ್ ಅಹಮದ್ ಇವರ ಜೊತೆ ಜೊತೆಯಲ್ಲಿಯೇ ಕಿಸಾನ್ ಸಭಾದ ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಇತರ ಪದಾಧಿಕಾರಿಗಳಾಗಿದ್ದರು. ಕಿಸಾನ್ ಸಭಾದ ಲಕ್ಷಾಂತರ ಸದಸ್ಯರು ಕಮ್ಯುನಿಸ್ಟರು ಕಮ್ಯುನಿಸ್ಟರಲ್ಲದವರ ನಡುವೆ ಬೇಧ ಮಾಡುವುದಿಲ್ಲವೆಂದು ಎಲ್ಲ ಪ್ರಾಮಾಣಿಕ ರೈತ ಹೋರಾಟಗಾರರಲ್ಲಿ ತನ್ನ ನೆಚ್ಚಿಕೆಯನ್ನು ವ್ಯಕ್ತಪಡಿಸುತ್ತದೆ. ಈ ಎಲ್ಲ ಸಂಘಟನೆಗಳಿಗೆ ತನ್ನೊಡನೆ ಸಂಯುಕ್ತ ಹೋರಾಟದಲ್ಲಿ ಜೊತೆಗೂಡಬೇಕೆಂದು ಕಿಸಾನ್ ಸಭಾ ಕರೆ ಕೊಡುತ್ತದೆ. ಸಭಾ ಈ ನಾಯಕರಲ್ಲಿ ಒಕ್ಕಲೆಬ್ಬಿಸುವುದರ ವಿರುದ್ಧ, ತೆರಿಗೆಗಳ ಹೇರಿಕೆ ವಿರುದ್ಧ, ಗೇಣಿ, ಕಂದಾಯ ಇಳಿಕೆಗಾಗಿ ಸಂಯುಕ್ತ ಹೋರಾಟಗಳನ್ನು ನಡೆಸಬೇಕೆಂದು ತನ್ನೆಲ್ಲಾ ಕೆಳಘಟಕಗಳಿಗೆ ಈಗ ಇರುವ ಎಲ್ಲ ರೈತ ಸಂಘಟನೆಗಳೊಡನೆ ನಿರ್ದಿಷ್ಟ ಸಮಸ್ಯೆಗಾಗಿ ಹೋರಾಡಲು ಸಂಯುಕ್ತ ಸಮಿತಿಗಳನ್ನು ರಚಿಸಲು ನಿರಂತರ ಪ್ರಯತ್ನ ಮಾಡಬೇಕೆಂದೂ, ಕಿಸಾನ್ ಸಭಾವನ್ನ ಬಲಿಷ್ಟಗೊಳಿಸಲು ಪ್ರಯತ್ನ ಮಾಡಬೇಕೆಂದು ಮನವಿ ಮಾಡುತ್ತದೆ. ಇತ್ತೀಚಿನ ತಿಂಗಳುಗಳಲ್ಲಿ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಯಾವ ರಾಜಕೀಯ ಪಕ್ಷಕ್ಕೂ ಸೇರದ ಅಸಂಖ್ಯ ಜನ ರೈತರ ಹಿತಾಸಕ್ತಿ ಹಿತಾಸಕ್ತಿಗಳಿಗಾಗಿ ಹೋರಾಡಲು ಮುಂದೆ ಬಂದಿದ್ದಾರೆ.

ಈ ಎಲ್ಲಾ ರೈತರ ಪ್ರಾಮಾಣಿಕ ಸೇವಕರನ್ನು ರೈತರ ಐಕ್ಯ ಹೋರಾಟಗಳಿಗೆ ಸೆಳೆದು, ಕಿಸಾನ್ ಸಭಾವನ್ನು ಜಾತಿ, ಧರ್ಮ, ರಾಜಕೀಯ, ಲಿಂಗಬೇಧವನ್ನು ಗಣಿಸದ, ಪಕ್ಷಾದಿಗಳನ್ನು ಮೀರದ ಲಕ್ಷಾಂತರ ರೈತ ಸಂಘಟನೆಯಾಗಿ ಬೆಳೆಸುವ ಕರ್ತವ್ಯದಲ್ಲಿ ತೊಡಗುವುದು ಕಿಸಾನ್ ಸಭಾದ ಪ್ರಾಥಮಿಕ ಹಾಗೂ ಮೇಲಿನ ಘಟಕಗಳಿಗೆ ಸೇರಿದ ಕರ್ತವ್ಯ.

ಅತಿ ಬಲಿಷ್ಟವಾದ, ಎಲ್ಲವನ್ನೂ ಒಳಗೊಂಡ ಐಕ್ಯ ಕಿಸಾನ್ ಚಳುವಳಿಯನ್ನು ರೂಪಿಸಬೇಕಾದ ತುರ್ತುಕರ್ತವ್ಯವನ್ನು ಎಲ್ಲಾ ಕಿಸಾನ್ ಕಾರ್ಯಕರ್ತರೂ ಮನಗಂಡು ನಮ್ಮ ರೈತಾಪಿ ಜನತೆಗೆ ಮಾತ್ರವಲ್ಲ, ಇಡೀ ದೇಶಕ್ಕೆ ಬೆದರಿಕೆ ಮಾಡುತ್ತಿರುವ ಆರ್ಥಿಕ ಸರ್ವನಾಶದ ಭಯಾನಕ ಪರಿಣಾಮವನ್ನು ತಪ್ಪಿಸಬೇಕೆಂದು ಮನವಿ ಮಾಡುತ್ತದೆ.

ಭೂಮಾಲೀಕತ್ವದ ವಿನಾಶಕ್ಕಾಗಿ, ದೇಶದ ಐಕ್ಯತೆಗಾಗಿ, ಶಾಂತಿಯ ರಕ್ಷಣೆಗಾಗಿ, ನಮ್ಮ ದೇಶದಲ್ಲಿ ಜನತಾ ಪ್ರಜಾಪ್ರಭುತ್ವವನ್ನು ತರುವುದಕ್ಕಾಗಿ ನಡೆಸುವ ಹೋರಾಟದಲ್ಲಿ ಜಯಗಳಿಸಲು

(6ನೆಯ ಪುಟಕ್ಕೆ)

ಲಕ್ಷ್ಮೀಸಾಗರ್ ಅವರ ಎಚ್ಚರಿಕೆ

ಜನರ ಸಮಸ್ಯೆಗಳಿಗೆ ಗಮನ ಕೊಡದ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಅಧಿಕಾರಿಗಳನ್ನು ಗಡ್ಡಾಯವಾಗಿ ನಿವೃತ್ತಿಗೊಳಿಸಲು ಹಿಂಜರಿಯುವುದಿಲ್ಲೆಂದು ನಗರಾಭಿವೃದ್ಧಿ ಸಚಿವ ಲಕ್ಷ್ಮೀಸಾಗರ್ ಎಚ್ಚರಿಕೆ ನೀಡಿದ್ದಾರೆ.

ಅವರು ಈ ಖಾತೆಯ ಮಂತ್ರಿಗಳಾದಂದಿನಿಂದ ಹಲವಾರುಸಲ ಅಂಥ ಅಬ್ಬರ ಕೇಳಿಬರುತ್ತಿತ್ತು. ಆದರೆ ಅದು ಬರೇ ಬೆದರಿಕೆಯ ಅಬ್ಬರವಾಗಿಯೇ ಉಳಿಯಿತಲ್ಲದೆ ಯಾರನ್ನೂ ನಿವೃತ್ತಿಗೊಳಿಸಲಿಲ್ಲ. ಬಿಜಾಪುರ, ಹೊಸಪೇಟೆ ಹಾಗೆಯೇ ರಾಜ್ಯದ ಹಲವಾರು ನಗರಗಳಲ್ಲಿಯ ಕಮಿಶನರ-ಚೀಫಆಪೀಸರಗಳ ಕುರಿತು ಸಾರ್ವಜನಿಕರಿಂದ ಸಾಕಷ್ಟು ಆರೋಪಗಳು ಬಂದು, ಅವರ ಸೆಸ್ಪೆಂಡ ಆದರೂ ಕೂಡ, ಗಂಭೀರ ಆರೋಪಗಳೆಲ್ಲ-ಮೇಲ್ಪಟ್ಟ ತಲ್ಪಿದಾಗ ಶಿಫಾರಸ ಪತ್ರಗಳಾಗಿ ಪರಿವರ್ತನೆಗೊಂಡು ಅಧಿಕಾರದಲ್ಲುಳಿಯಲು ನಾಲಾಯಕರಾದವರೆಲ್ಲ ಹೆಮ್ಮೆಯಿಂದ ಮೆರೆಯುತ್ತಿದ್ದಾರಲ್ಲ ಮಂತ್ರಿಯವರು ಎಚ್ಚರಿಕೆ ನೀಡಿದ ಸಭೆಯಲ್ಲೇ ಅಂಥ ಕೆಲವು ಅಧಿಕಾರಿಗಳು ಮಂತ್ರಿಯವರ ಎಚ್ಚರಿಕೆ ಮಾತುಗಳಿಗೆ "ಮುಗುಳು ನಗೆಯ" ಸ್ವಾಗತ ನೀಡಿದರಲ್ಲ. ಅದರ ಅರ್ಥವೇನು ? ಮಂತ್ರಿಗಳ ಬೆದರಿಕೆಯ ಬೆಲೆ ಎಷ್ಟೆಂಬುದು ಮುಗುಳು ನಗೆಯಲ್ಲಿ ಮುಚ್ಚಿಹೋಯಿತೇ ? ಲಕ್ಷ್ಮೀಸಾಗರ ಅವರೇ ಬೆದರಿಕೆಯ ಮಾತು ಬೇಡ, ನಿಮಗೆ ಧೈರ್ಯವಿದ್ದರೆ ಒಬ್ಬನಿಗಾದರೂ ಮನೆಗಪ್ಪಣೆ ಕೊಡಿ. ಅಧಿಕಾರಿಗಳ ಹೆಸರುಗಳನ್ನು ನಾವೇ ಗುರ್ತಿಸಿಕೊಡುತ್ತೇವೆ ತಿಳಿಯಿತಾ.

ಸರಿಯಾದ ತಂತ್ರ ರೂಪಿಸಿರಿ

(೧ನೆಯ ಪುಟದಿಂದ)

ಸರಕಾರದ ಇಂದಿನ ನೀತಿಗಳ ವಿರುದ್ಧ ದೃಢನಿರ್ಧಾರದ ವೀರ ಹೋರಾಟವನ್ನು ಹೂಡಲು ಅಂತಹುದೊಂದು ಕಿಸಾನ್ ಸಂಘಟನೆಗೆ ಮಾತ್ರ ಸಾಧ್ಯ.

ಕಿಸಾನ್ ಸಭಾದ ಸಂಘಟನಾ ಕೆಲಸವನ್ನು ಈ ರೀತಿಯಾಗಿ ತೀವ್ರಗೊಳಿಸುತ್ತಲೇ ಎಲ್ಲೆಲ್ಲಿ ಅವಶ್ಯವಿದೆಯೊ ಅಲ್ಲಿ ಸ್ವತಂತ್ರ ಕೃಷಿ ಕಾರ್ಮಿಕ ಸಂಘಟನೆಗಳ ರಚನೆಗೆ ಸಹಾಯ ಮಾಡಬೇಕು. ಎಲ್ಲಿ ಇವು ಇಲ್ಲದೆ ಅಲ್ಲಿ ಈ ಕೃಷಿ ಹಾಗೂ ಗ್ರಾಮೀಣ ಕಾರ್ಮಿಕರನ್ನು ಕಿಸಾನ್ ಸಭಾ ಸೆಳೆಯಬೇಕು. ಈ ಸಂಘಟನೆಗಳೊಂದಿಗೆ ಹತ್ತಿರದ ಸಂಬಂಧವನ್ನು ಸ್ಥಾಪಿಸಬೇಕು. ಕಿಸಾನ್ ಸಭಾದ ಮೂಲ ಧ್ಯೇಯಗಳನ್ನು ಸಾಧಿಸಬೇಕಾದರೆ ಗ್ರಾಮೀಣ ಜನತೆಯನ್ನೆಲ್ಲಾ ಒಂದು ಬಲಯುತವಾದ ಪರಸ್ಪರ ಹೆಣೆದುಕೊಂಡ ಐಕ್ಯರಂಗದಲ್ಲಿ ಸಂಯುಕ್ತಗೊಳಿಸಿದರೆ ಮಾತ್ರ ಸಾಧ್ಯ.

ಸರಕಾರದ ಪ್ರತಿಗಾಮಿಯತೆ,ತೆರಿಗೆ ಹೊರೆಯ ಧಾಳಿಯಿಂದ ಪೀಡಿತರಾದ ನಗರಗಳಲ್ಲಿನ ಮಿತ್ರರ ಜೊತೆ ಕಾರ್ಮಿಕ ಸಂಘಗಳಲ್ಲಿ ಸಂಘಟಿತರಾದ ಕಾರ್ಮಿಕ ವರ್ಗ, ಮಧ್ಯಮ ವರ್ಗದ ನೌಕರರು ಇತರ ನಗರಗಳ ಬಡವರು, ಸಣ್ಣ, ಮಧ್ಯಮ ಅಂಗಡಿಕಾರರು ಹಾಗೂ ಕೈಗಾರಿಕೋದ್ಯಮಿಗಳು ಇವರೊಡನೆ ದೃಢ ಐಕ್ಯತೆಯನ್ನು ಬೆಸೆಯಬೇಕು. ಇದರಿಂದ ಮಾತ್ರವೇ ದೇಶದ ಒಳಗಿನ ವಿದೇಶಿ ಶತ್ರುಗಳಿಂದ ಜನಪರ ಪ್ರಜಾಸತ್ತಾತ್ಮಕ ಚಳುವಳಿಗಳ ಸಾಧನೆಗಳನ್ನು ರಕ್ಷಿಸಲು ಹಾಗೂ ವಿಸ್ತರಿಸಲು ಸಾಧ್ಯ, ರೈತರ ಮೂಲಭೂತ ಬೇಡಿಕೆಗಳು ಈಡೇರಲು ಸಾಧ್ಯ.

ಕಿಸಾನ್ ಸಭಾದ ಸದಸ್ಯರಾದ ೬0 ಲಕ್ಷ ಸದಸ್ಯರು ಹಾಗೂ ಸಭಾದ ಪರಿಮಿತಿಯಿಂದೀಚೆ ಇರುವ ದಶಲಕ್ಷಾಂತರ ರೈತರು ಕಿಸಾನ್ ಸಭಾದ ಕರೆಗೆ ಓಗೊಡುವರೆಂಬ ಭಾರತದ ರೈತರ ಧ್ವನಿಗೆ ಎದುರಿಲ್ಲದಂತೆ ಮಾಡುವರೆಂಬ ದೃಢ ನಂಬಿಕೆಯಿದೆ.

ಕನಿಷ್ಠ ಕೂಲಿ ಮತ್ತು ಉದ್ಯೋಗಕ್ಕಾಗಿ, ಶಾಂತಿ ಮತ್ತು ಪ್ರಜಾಸತ್ತೆಗಾಗಿ ಕಿಸಾನ್ ಸಭಾ ಅವರ ಮುಂದಿಡುವ ಕಾರ್ಯಕ್ರಮದಲ್ಲಿ ರೈತರಲ್ಲದ ದೇಶ ಪ್ರೇಮಿಗಳೂ ಸಾವಿರ ಸಾವಿರ ಸಂಖ್ಯೆಯಲ್ಲಿ ನೆರೆಯುವರೆಂದು ಕಿಸಾನ್ ಸಭಾಕ್ಕೆ ದೃಢ ನಂಬಿಕೆಯಿದೆ.

ಭದ್ರಾವತಿಯಲ್ಲಿ ಬಸ್ಸಿಗಾಗಿ ವಿದ್ಯಾರ್ಥಿಗಳ ಪರದಾಟ

ಭದ್ರಾವತಿ – ಶಿವಮೊಗ್ಗ ನಡುವೆ ನೂರಾರು ವಿದ್ಯಾರ್ಥಿಗಳು ಪ್ರತಿದಿವಸ ಸಂಚರಿಸುತ್ತಿದ್ದಾರೆ. ಆದರೆ ಬಸ್ಸುಗಳನ್ನು ನಿರ್ದಿಷ್ಟ ಬಸ್‌ಸ್ಟ್ಯಾಂಡಿನಲ್ಲಿ ನಿಲ್ಲಿಸುವುದಿಲ್ಲ. ಮುಂದೆ ನಿಂತ ಬಸ್ಸಿಗಾಗಿ ಮಕ್ಕಳು ಪುಸ್ತಕಗಳ ಹೊರೆ ಬೆನ್ನ ಮೇಲೆ ಹೊತ್ತುಕೊಂಡು ಓಡಿದರೂ ಬಸ್ಸು ನಿಲ್ಲಿಸುವುದಿಲ್ಲ. ಕೆ ಎಸ್.ಆರ್. ಟಿ. ಸಿ. ಪಾಸ್ ತೋರಿಸಿದರೂ ಕೂಡ ಹಣಕ್ಕಾಗಿ ಒತ್ತಾಯಿಸುತ್ತಾರೆ. ಶಾಲಾ ಮಕ್ಕಳಿಗಾಗುವ ಈ ಕಿರುಕುಳವನ್ನು ಕೂಡಲೇ ನಿಲ್ಲಿಸಬೇಕೆಂದೂ ಇಲ್ಲವಾದರೆ ಹೋರಾಡಬೇಕಾದೀತೆಂದೂ ಭದ್ರಾವತಿಯ ಎಸ್. ಎಫ್. ಐ ಘಟಕ ಎಚ್ಚರಿಕೆ ನೀಡಿದೆ.

ಕಾ॥ ಮಾಧವನ್‌ರವರು ಇನ್ನಿಲ್ಲ !

ಮಂಗಳೂರಿನಲ್ಲಿ ಮುನಿಸಿಪಲ್ ಚುನಾವಣೆಯಲ್ಲಿ ಸಂಯುಕ್ತ ಕಮ್ಯುನಿಸ್ಟ ಪಕ್ಷದ ಉಮೇದಾರರಾಗಿ ಸ್ಪರ್ಧಿಸಿ ಅತ್ಯಂತ ಶ್ರೀಮಂತ ಬಂಡವಾಳಶಾಹಿ ಪ್ರತಿನಿಧಿಯನ್ನು ಒಬ್ಬ ಬೀಡಿ ಕಾರ್ಮಿಕರಾಗಿ ಹಿಂದೂ ಮತ್ತು ಮುಸ್ಲಿಂ ಬಂಧುಗಳ ಪ್ರೀತಿಯ ಮತಗಳನ್ನು ಗಳಿಸಿ ವಿಜಯ ದಾಖಲೆ ಮಾಡಿ "ಚರಿತ್ರೆ" ಸೃಷ್ಟಿಸಿದ್ಧ ಕಾ॥ ಮಾಧವನವರು ಇದೇ ಜೂನ್ 24 ರಂದು ಸಂಜೆ 7-30ಕ್ಕೆ ಮೃತರಾದರು ಎಂದು ಹೇಳುವುದಕ್ಕೆ ಐಕ್ಯರಂಗ ತೀವ್ರ ವಿಷಾದ ಪಡುತ್ತದೆ.

ಸಾಯುವವರೆಗೂ ಜನ ಸಾಮಾನ್ಯರ ಸಂಪರ್ಕದಲ್ಲಿದ್ದ ವ್ಯಕ್ತಿ ಕಾ॥ ಮಾದವನವರು ಎಂದು ಹೇಳಲು ನಾವು ಹೆಮ್ಮೆ ಪಡುತ್ತೇವೆ.

ಮಾರ್ಕ್ಸವಾದಿ ಐಕ್ಯದ ಪರವಾಗಿ ಕಾಂ. ಟಿ. ರಾಮಚಂದ್ರರಾವ್ ಇವರು ಶವ ಯಾತ್ರೆಯಲ್ಲಿ ಭಾಗವಹಿಸಿ ರಾಜ್ಯ ಸಮಿತಿ ಪರವಾಗಿ ಸಂತಾಪ ವ್ಯಕ್ತ ಮಾಡಿದರು.

ಐಕ್ಯರಂಗದ ಸಂಪಾದಕ ಮಂಡಳಿ ಅಗಲಿದ ಮಾಧವನವರ ಕುಟುಂಬದವರ ದುಃಖದಲ್ಲಿ ಸಹಭಾಗಿಯಾಗಿದೆ.

ಕಾ॥ ಜಿಕ್ರಿಯಾಸಾಬ ಕಾಲೇಬಾಗ

ಕಳೆದ 25 ವರ್ಷಕ್ಕಿಂತಲೂ ಹೆಚ್ಚು ಕಾಲ ಕಮ್ಯುನಿಸ್ಟ ಪಕ್ಷದ ನಿಷ್ಠ ಕಾರ್ಯಕರ್ತನಾಗಿ, 1964 ರಲ್ಲಿ ಪರಿಷ್ಕರಣವಾದವನ್ನು ತ್ಯಜಿಸಿ ಸಿ. ಪಿ ಐ (ಎಂ) ಜೊತೆಯಲ್ಲಿದ್ದು ರೈತ – ಕಾರ್ಮಿಕರ ಪ್ರತಿಯೊಂದುಚಳುವಳಿಯಲ್ಲಿಯೂ ಭಾಗವಹಿಸಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಕೂಡ ಕೆಂಬಾವುಟವನ್ನು ಎತ್ತಿಹಿಡಿದ ಸಿ.ಪಿ.ಐ (ಎಂ) ಪಕ್ಷದ ಬಿಜಾಪುರ ನಗರ ಸಮಿತಿ ಸದಸ್ಯರಾದ ಜಿಕ್ರಿಯಾ ಸಾಬ ಕಾಲೇಬಾಗ ಅವರು ಅಲ್ಪಕಾಲದ ಅನಾರೋಗ್ಯಕ್ಕೊಳಗಾಗಿ ತನ್ನ 70ನೇ ವಯಸ್ಸಿನಲ್ಲಿ ಮರಣವನ್ನಪ್ಪಿದ್ದಾರೆ. ಅವರ ಆಕಸ್ಮಿಕ ಮರಣದಿಂದ ಪಕ್ಷಕ್ಕೆ ಅಪಾರ ಹಾನಿಯಾಗಿದೆ. ಸಿ.ಪಿ.ಐ(ಎಂ) ಅವರ ಅಗಲುವಿಕೆಗೆ ಸಂತಾಪ ವ್ಯಕ್ತ ಮಾಡುತ್ತದೆ. ತನ್ನ ಕುಟುಂಬದಲ್ಲಿ 30ಕ್ಕೂ ಹೆಚ್ಚು ಮೊಮ್ಮಕ್ಕಳನ್ನು ಹೊಂದಿದ ಅವರ ಕುಟುಂಬದ ದುಃಖದಲ್ಲಿ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಮತ್ತು ಐಕ್ಯರಂಗ ಸಹಭಾಗಿಯಾಗಿರುತ್ತದೆ.

ಕಳ್ಳ ಸಾಗಾಣಿಕೆಯ ಬಂಗಾರ ಎಷ್ಟು ಗೊತ್ತೆ ?

ಸುಮಾರು ರೂ. 3000 ಕೋಟಿ ಬೆಲೆಯ 140 ಟನ್ ಬಂಗಾರ ಹೋದ ವರ್ಷ ಭಾರತ ದೇಶದೊಳಗೆ ಕಳ್ಳ ಮಾರ್ಗದಿಂದ ಬಂದು ಸೇರಿಕೊಂಡಿದೆ. 1968ರಲ್ಲಿ ಚಿನ್ನ ನಿಯಂತ್ರಣ ಕಾನೂನು ಪಾಸಾದ ನಂತರ 1982 ರವರೆಗೆ 1066 ಟನ್ ಚಿನ್ನ ದೇಶದೊಳಗೆ ಕಳ್ಳ ರೀತಿಯಿಂದ ಬಂದಿದೆ. ಲಂಡನ್ನಿನಲ್ಲಿರುವ ಕನ್‌ಸಾಲಿಡೇಟೆಡ್ ಗೋಲ್ಡ ಫಿಲ್ಡ ಒದಗಿಸಿದ ಅಂಕೆ ಸಂಖ್ಯೆಯನ್ನು ಜುವೆಲರ್ಸ್ ಮತ್ತು ಬಂಗಾರ ವ್ಯಾಪಾರಸ್ಥ ಸಂಘದ ಕಾರ್ಯದರ್ಶಿಯವರು ಬಯಲಿಗೆಳೆದಿದ್ದಾರೆ.

ನಮ್ಮ ದೇಶದಲ್ಲಿ 16,000 ಲೆಸೆನ್ಸ್ ಪಡೆದ ಬಂಗಾರದ ವ್ಯಾಪಾರಸ್ಥರೂ, ಮೂರುವರೆ ಲಕ್ಷ ಅಕ್ಕಸಾಲಿಗರೂ ಇದ್ದಾರೆ.

ಬಂಗಾರದ ಕಳ್ಳ ಸಾಗಾಣಿಕೆಯನ್ನು ತಪ್ಪಿಸಲು ಪ್ರತಿ ವರ್ಷ 100 ಗ್ರಾಮ್ ಚಿನ್ನ ಆಮದು ಮಾಡಲು ಸರಕಾರ ಅವಕಾಶ ಮಾಡಿಕೊಡಬೇಕೆಂದು ಕಸ್ಟಂ ಡ್ಯೂಟಿಯನ್ನು 10 ಗ್ರಾಮಿಗೆ ರೂ 200 ನಿರ್ಧರಿಸಬೇಕೆಂದೂ, ಆ ರೀತಿ ಮಾಡಿದರೆ ಈಗ ಕಳ್ಳ ವ್ಯಾಪಾರಸ್ಥರು ಲೆಕ್ಕಕ್ಕಿಲ್ಲದೆ ಕಾಯ್ದೆಗೆ ವಿರುದ್ಧವಾಗಿ ಸಂಗ್ರಹಿಸುತ್ತಿರುವ ರೂ 3000 ಕೋಟಿ ವಿದೇಶಿ ವಿನಿಮಯವನ್ನು ಅಳಿದು ಹಾಕಬಹುದೆಂದು ವ್ಯಾಪಾರಿ ಸಂಘದ ಕಾರ್ಯದರ್ಶಿಯವರ ಅನಿಸಿಕೆ. ಮೊರಾರ್ಜಿ ದೇಸಾಯಿಯವರು ಆರ್ಥಿಕ ಮಂತ್ರಿಯಾಗಿದ್ದಾಗ ಜಾರಿಯಲ್ಲಿ ತಂದ ಈ ಕಾಯ್ದೆ "ಮೇಲ್ಮಟ್ಟದಲ್ಲಿ" "ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶಮಾಡಿಕೊಟ್ಟಿದೆಂದು ಆರೋಪಿಸಿದ್ದಾರೆ. 1983 ರಲ್ಲಿ 10 ಗ್ರಾಮಿಗೆ ರೂ 97 ಇತ್ತು. ಈಗದು ೬5ರಲ್ಲಿ ರೂ. 2200 ರಷ್ಟು ಅಂದರೆ 22 ಪಟ್ಟು ಹೆಚ್ಚಾಗಿದೆ. ಸರಾಸರಿ 5 ಟನ್ ಚಿನ್ನ ಕಳ್ಳ ಸಾಗಾಣಿಕೆಯಿಂದ ನಮ್ಮ ದೇಶ ಸೋರುತ್ತಿದೆ. ಜನಜೀವನದ ಮೇಲೆ ಅದರ ಪರಿಣಾಮ ಗಂಡಾಂತರಕಾರಿಯಾಗುವುದರಲ್ಲಿ ಸಂಶಯವಿಲ್ಲ.

ತೋಟ ಕಾರ್ಮಿಕರ ಕೂಲಿ ಪುನರ್ ವಿಮರ್ಶೆಗೆ ಒತ್ತಾಯ

ಕರ್ನಾಟಕ ಪ್ರೊವೆನ್ಸಿಯಲ್ ಪ್ಲಾಂಟೇಶನ್ ವರ್ಕಸ್ ಯುನಿಯನ್‌ನ ಮಹಾಸಭೆಯು 26-6-1986 ರಂದು ಮೂಡಿಗೆರೆಯಲ್ಲಿ ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ನಮ್ಮ ರಾಜ್ಯದಲ್ಲಿ ಈಗ ತೋಟ ಕಾರ್ಮಿಕರಿಗೆ ನಿಗದಿ ಮಾಡಿರುವ ಕನಿಷ್ಟ ಕೂಲಿಯ ಕಾಲಾವಧಿಯು ಮುಗಿದಿರುವುದರಿಂದ ಕೂಡಲೆ ಕೂಲಿಯ ಪುನರ್ ವಿಮರ್ಶೆ ಮಾಡಿ ಹೆಚ್ಚಿಸಿ ಪ್ರಕಟಿಸಬೇಕೆಂದೂ, ತುಟ್ಟಿ ಬತ್ತೆಯನ್ನು ಬಳಕೆದಾರರ ಬೆಲೆ ಸೂಚ್ಯಾಂಕ 470 ಅಂಶಕ್ಕೆ ನಿಗದಿ ಮಾಡಿ ಹೆಚ್ಚಾದ ಪ್ರತಿ ಅಂಶಕ್ಕೆ ಐದು ಪೈಸೆ ನಿಗದಿ ಮಾಡಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸುವ, ಪ್ಲಾಂಟೇಶನ್ ಕಾರ್ಮಿಕರ 1981 ರ ತಿದ್ದುಪಡಿ ಕಾಯಿದೆ ಇಲ್ಲಿಯವರೆವಿಗೆ ರಾಜ್ಯ ಸರಕಾರ ಕಾನೂನು ರಚಿಸದೆ ವಿಳಂಬ ಮಾಡುತ್ತಿರುವುದನ್ನು ಖಂಡಿಸಿ, ಕೂಡಲೇ ಕಾನೂನು ರಚಿಸಲು ಒತ್ತಾಯಿಸುವ ನಿರ್ಣಯಗಳನ್ನು ಮಹಾಸಭೆ ಕೈಗೊಂಡಿದೆ. ತಮ್ಮ ಬೇಡಿಕೆಗಳನ್ನು ಪಡೆಯಲು ತೋಟ ಕಾರ್ಮಿಕರು ಸಿಐಟಿಯು ಸಂಘಟನೆಯಡಿಯಲ್ಲಿ ಸಂಘಟಿತರಾಗಿ ನಿರಂತರ ಹೋರಾಟಕ್ಕೆ ಮುಂದಾಗಬೇಕೆಂದು ತೋಟ ಕಾರ್ಮಿಕರಿಗೆ ಮಹಾ ಸಭೆ ಕರೆ ಕೊಟ್ಟಿದೆ.

ಮುಂದಿನ ಕಾಲಾವದಿಗೆ ಸಂಘದ ಅಧ್ಯಕ್ಷರಾಗಿ ಸಿ. ನಂಜುಂಡಪ್ಪ ಉಪಾಧ್ಯಕ್ಷರುಗಳಾಗಿ ಎ ಸಿ. ಕೇಶವ ಮತ್ತು ಎ. ಕೆ. ವಿಶ್ವನಾಥ ಕಾರ್ಯದರ್ಶಿಯನ್ನಾಗಿ ವಿ. ಸುಕುಮಾರ್, ಉಪಕಾರ್ಯದರ್ಶಿಗಳನ್ನಾಗಿ, ಕೆ. ಸುಕುಮಾರ್ ಮತ್ತು ಬಿ. ಎಸ್. ರಾಘವೇಂದ್ರ, ಖಜಾಂಜಿಯನ್ನಾಗಿ ಕೆ. ವೇಲಾಯುಧರವರನ್ನು, ಸಂಘಟಿತರನ್ನಾಗಿ ಅಣ್ಣಯವರನ್ನು ಹಾಗೂ 20 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಕಲಾಟಿಗೆ ಆಯ್ಕೆ ಮಾಡಿದೆ.

ಎದೆಯಲ್ಲಿ ಮುದ್ರೆಗೆ ವಿರೋಧ

ರಾಜ್ಯ ಸಾರಿಗೆ ಪ್ರಾಧಿಕಾರವು (ಎಸ್. ಟಿ. ಎ.) ಆಟೋರಿಕ್ಷಾ ಚಾಲಕರು ಮತ್ತು ಮಾಲಕರು ತಮ್ಮ ರಿಕ್ಷಾವನ್ನು ಓಡಿಸುವಾಗ ತಮ್ಮ ನಾಮಾಂಕಿತ ಮುದ್ರೆಯನ್ನು ಎದೆಯಲ್ಲಿ ಧರಿಸಬೇಕೆಂದು ಆದೇಶಿಸಿರುವುದನ್ನು ದ. ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘವು ವಿರೋಧಿಸುತ್ತದೆ. ಪ್ರತೀ ರಿಕ್ಷಾದಲ್ಲೂ 6 ಇಂಚು ಅಗಲದ ನಂಬರ ಪ್ಲೇಟ್ ಇರುವಾಗ ಡ್ರೈವರ್ ತನ್ನ ಹೆಸರನ್ನು ಎದೆಯಲ್ಲಿ ಬರೆಸುವದು ಅಗತ್ಯವಿಲ್ಲ. ಅಲ್ಲದೆ, ಇದರಿಂದ ಅನೇಕ ಸಲ ಇದು ಜಾತೀಯವಾದಿ ಹಿತಾಸಕ್ತಿಗಳಿಂದ ಘರ್ಷಣೆಗೂ ಎಡೆ ಮಾಡುತ್ತದೆ. ಆದುದರಿಂದ ಈ ಕಾನೂನನ್ನು ರದ್ದುಗೊಳಿಸಬೇಕೆಂದು ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಮನವಿ ಅರ್ಪಿಸಿದೆ ಎಂದು ಕೆ. ಅಬೂಬಕರ ತಿಳಿಸಿದ್ದಾರೆ.

ಸರಿಯಾದ ತಂತ್ರ ರೂಪಿಸಿರಿ

(ಪುರವಣಿ 1ನೆಯ ಪುಟದಿಂದ)

ಹೋರಾಟ, ಬೆಳೆಯಲ್ಲಿ ಪಾಲಿಗಾಗಿ ದೇಶಾದ್ಯಂತ ನಡೆಸಿದ ರೈತರ ಹೋರಾಟಕ್ಕೆ ಬೆಂಬಲಾರ್ಥವಾಗಿ ಮಾಡಿದ ಚಳುವಳಿ, ಅಷ್ಟೇ ಅಲ್ಲದೆ ತೆಲಂಗಾಣದ ಚರಿತ್ರಾರ್ಹ ಸಶಸ್ತ್ರ ಚಳುವಳಿಗಳನ್ನೆಲ್ಲ ಸಂಘಟಿಸಿ ಅವುಗಳಿಗೆ ಮಾರ್ಗದರ್ಶನ ನೀಡಿದಂತಹ ಸ್ವಾಭಿಮಾನದ ಪರಂಪರೆಯನ್ನು ಹೊಂದಿದೆ. ಕಿಸಾನ್‌ಸಭೆ ಇಂಥ ಹಲವಾರು ಹೋರಾಟಗಳು ಅದರಲ್ಲೂ ಮುಖ್ಯವಾಗಿ ತೆಲಂಗಾಣ ಚಳುವಳಿ, ರೈತರ ಕುರಿತು ಕಾಂಗ್ರೆಸ್ಸಿನ ಸರಕಾರಗಳ ಧೋರಣೆಗಳನ್ನು ಬಯಲುಗೊಳಿಸಿವೆ. ತೆಲಂಗಾಣದಲ್ಲಿ ನಾವು ನಿಜಾಮನ ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಟ ನಡೆಸಬೇಕಾಗಿ ಬಂದುದಲ್ಲದೆ, ಅದೇ ಸಮಯದಲ್ಲಿ ಕಾಂಗ್ರೆಸ್ ಸರಕಾರದ ಸಶಸ್ತ್ರ ಪಡೆಯನ್ನೂ ವಿರೋಧಿಸಬೇಕಾಗಿ ಬಂತು. ತೆಲಂಗಾಣದ ರೈತರು ಕೃಷಿ ಕ್ರಾಂತಿಗಾಗಿ ಮುಂದೆ ಸಾಗುತ್ತಿರುವಾಗ ಅದನ್ನು ತಡೆ ಹಿಡಿಯುವ ಸಲುವಾಗಿ, ರೈತ ಚಳುವಳಿಯನ್ನು ನಾಶ ಮಾಡಲು ಕೇಂದ್ರ ಸರಕಾರ ತನ್ನ ಸಶಸ್ತ್ರ ಸೈನ್ಯವನ್ನು ಅಲ್ಲಿಗೆ ಕಳುಹಿಸಿತ್ತೆಂಬ ವಿಷಯವನ್ನು ಯಾರು ಮರೆತಾರು ?

ರೈತರಲ್ಲಿ ಬೆಳೆದು ಬರುತ್ತಿದ್ದ ಅಸಮಾಧಾನವನ್ನು ಬೇರೆಡೆ ತಿರುಗಿಸುವ ಸಲುವಾಗಿ ಕಾಂಗ್ರೆಸ್ "ಭೂದಾನ" "ಗ್ರಾಮದಾನ" ಚಳುವಳಿ, ಹಾಗೆಯೇ ಅಸಮರ್ಪಕವಾದ ಭೂ ಸುಧಾರಣೆಗಳ ಕುರಿತು, ಆ ಧೋರಣಾತ್ಮಕ ಪ್ರಕಟಣೆ ಉಲ್ಲೇಖಿಸುತ್ತದೆ. ಅವುಗಳ ಪರಿಣಾಮವೇನು ? ಚಳುವಳಿಗೆ ಎಂಥ ಭೂಮಿಯನ್ನು ದಾನವಾಗಿ ಕೊಡಲಾಯಿತು, ಮುಂದೆ ಅದರ ಪರಿಣಾಮವೇನಾಯಿತೆಂದು ನಮಗೆಲ್ಲಗೊತ್ತು. ಈ ರೀತಿ ಗಾಂಧಿವಾದದ ಪದ್ಧತಿಯಲ್ಲಿ ಕೃಷಿ ಸಮಸ್ಯೆಯ ಪರಿಹರಿಸುವಿಕೆ ಸಂಪೂರ್ಣ ವಿಫಲಗೊಂಡಿದೆಂಬುದರಲ್ಲಿ ಸಂಶಯವೇ ಇಲ್ಲ. ನಾವು ಪ್ರಭಾವಿತ ಚಳುವಳಿ ಮೂಲಕ ಭೂ ಸುಧಾರಣೆಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸರಕಾರಗಳ ಮೇಲೆ ಯಶಸ್ವಿಯಾದ ಒತ್ತಾಯ ತಂದರೂ, ಕೂಡ ಭೂ ಮಾಲಕರ ರಕ್ಷಣೆಗೆ ಬೇಕಾದ ವಿಧಾನಗಳನ್ನು ಕಾಂಗ್ರೆಸ್ ಸರಕಾರಗಳು ತಯಾರಿಸಿದ್ದವು. ಕಾಂಗ್ರೆಸ್ ಪಕ್ಷ ಮತ್ತು ಅದರ ಸರಕಾರದ ನಿಜವಾದ ಧೋರಣೆಗಳ ಕುರಿತು ನಾವೆಂದೂ ಭ್ರಮೆ ಇಟ್ಟು ಕೊಂಡಿಲ್ಲ., ಆ ಕಾರಣದಿಂದಲೇ 1 9 5 4 ಸೆಪ್ಟೆಂಬರಿನಲ್ಲಿ ಮೋಘಾದಲ್ಲಿ ನಡೆದ ಸಮ್ಮೇಳನದಲ್ಲಿ "ಭೂಮಿಗೆ ಅಂಟಿ ಕೊಳ್ಳಿರಿ" ಎಂಬ ಕರೆಯನ್ನು ರೈತರಿಗೆ ಕೊಟ್ಟಿದ್ದೆವು.

ಭೂ ಹಿಡುವಳಿಯ ಗರಿಷ್ಠಮಿತಿಯ ಕಾಯೆಯಿಂದಾಗಿ ಭೂ ಸುಧಾರಣೆ ಈಗಾಗಲೇ ಪೂರ್ಣಗೊಂಡಿದೆಂದು ಕಾಂಗ್ರೆಸ್ ಸರಕಾರಗಳು ಸಾರುತ್ತಿವೆ. ಆದರೆ ಒಕ್ಕಲುತನಕ್ಕೆ ಯೋಗ್ಯವಾದ ಶೇ 1 ರಷ್ಟು ಭೂಮಿಯನ್ನು ಕೂಡ ಹೆಚ್ಚುವರಿ ಭೂಮಿಯೆಂದು ಪ್ರಕಟಿಸಿಲ್ಲ, ಮತ್ತು ಗ್ರಾಮಾಂತರ ಪ್ರದೇಶದ ಶೇ 2.4 ರಷ್ಟು ಜನ ಶೇ 22.8 ರಷ್ಟು ಭೂಮಿಯ ತಾಬೇದಾರರಾಗಿದ್ದಾರೆ. ಈ ವಿಷಯದಲ್ಲಿ ಬಿಹಾರಿನ ಪರಿಸ್ಥಿತಿ ಅತಿ ಕೆಳಮಟ್ಟದ್ದು. ಅದು ಎಲ್ಲರಿಗೂ ಗೊತ್ತು.

ಅಸಮಾನತೆ ಹೆಚ್ಚಾಗುತ್ತಿದೆ

ಭೂಮಿಗೆ ಸಂಬಂಧಪಟ್ಟಂತಾ ಕಾಗದ ಪತ್ರಗಳು ಇಲ್ಲದಿರುವುದರಿಂದ ಭೂ ಮಸೂದೆಗಳು ಕೂಡ ತಮ್ಮ ಉದ್ದೇಶಸಾಧಿಸುವಲ್ಲಿ ವಿಫಲಗೊಂಡಿವೆ. ಆ ಮಸೂದೆಗಳ ಪ್ರಕಾರ ಭೂ ಮಾಲಕರು ಗೇಣಿದಾರರಿಂದ 1/4 ಅಥವಾ 1/5 ಭಾಗಗಳನ್ನು ಮಾತ್ರ ಪಡೆಯಬೇಕಾಗಿದ್ದರೂ ಕೂಡ, ಅವರು ನಿಜವಾಗಿಯೂ ಅರ್ಧಕ್ಕಿಂತಲೂ ಹೆಚ್ಚು ತೆಗೆದುಕೊಳ್ಳುತ್ತಿದ್ದಾರೆ. ಎಡರಂಗ ಸರಕಾರಗಳಿರುವ ಪಶ್ಚಿಮ ಬಂಗಾಲ, ತ್ರಿಪುರಾಗಳನ್ನು ಬಿಟ್ಟು ಬೇರೆ ಯಾವ ರಾಜ್ಯಗಳಲ್ಲಿಯೂ ಪಾಲಿಗಾಗಿ ಗೇಣಿಗಾಗಿ ಇನ್ನೂ ದುಡಿಯುತ್ತಿರುವ ರೈತರ ಕಾಗದ ಪತ್ರಗಳಿಲ್ಲ.

ದುರಾದೃಷ್ಟದಿಂದ, ಒಂದು ಹಂತದಲ್ಲಿ ಸಿ. ಪಿ. ಐ. ಮುಖಂಡತ್ವದಲ್ಲಿರುವ ಕಿಸಾನ್ ಸಭೆ ಭೂ ಸುಧಾರಣೆ ಮುಗಿದು ಹೋಗಿದೆ, ಈಗ ರೈತರ ಇತರ ಬೇಡಿಕೆಗಳಿಗಾಗಿ ಮಾತ್ರ ಹೋರಾಟ ಮಾಡಬೇಕೆಂಬ ಭ್ರಮೆಗೊಳಪಟ್ಟಿದ್ದರು. ಆವಾಗಲು ಅಂಥ ಪರಿಸ್ಥಿತಿ ಇರಲಿಲ್ಲ. ಈಗಲೂ ಕೂಡ ಆ ಪರಿಸ್ಥಿತಿ ಇಲ್ಲ.

1965–66 ರಲ್ಲಿ ಆಗ ಗ್ರಾಮಾಂತರ ಪ್ರದೇಶದಲ್ಲಿ ಉಂಟಾಗಿದ್ದ ಸಾಮಾಜಿಕ ಬಿಕ್ಕಟ್ಟಿನ ಕಾರಣಗಳನ್ನು ಕಂಡು ಹಿಡಿಯಲು ಆಗಿನ ಕೇಂದ್ರದ ಗೃಹ ಮಂತ್ರಿ ಕ್ರಮ ಕೈಗೊಂಡಿದ್ದರು. 1969 ರಲ್ಲಿ ಅವರು ಸಲ್ಲಿಸಿದ ವರದಿಯಲ್ಲಿ ವೇತನದ ಪ್ರಶ್ನೆಯ ಜೊತೆಯಲ್ಲಿ ಭೂ ಪ್ರಶ್ನೆಯೇ ಬಿಕ್ಕಟ್ಟಿಗೆ ಮೂಲ ಕಾರಣವೆಂದು ಸ್ಪಷ್ಟ ಪಡಿಸಿದ್ದರು. ಭೂಮಿ ಹಿಡುವಳಿ ಮತ್ತು ಹೆಚ್ಚುವರಿ ಭೂಮಿ ಮಹಾಲನೋಬೀಸ್ ಕಮಿಟಿಯ ವರದಿಯ ಗತಿಯೇನಾಯಿತು ? ಹೆಚ್ಚುವರಿ ಭೂಮಿ ಎಷ್ಟೆಂದು ಹೇಳಬೇಕಾಗಿತ್ತು, ನಿಜವಾಗಿ ಎಷ್ಟು ಭೂಮಿ ವಶಪಡಿಸಿಕೊಳ್ಳಬೇಕಾಯಿತು. ಎಷ್ಟು ಹಂಚಲಾಯಿತು ? ಈ ಕಾರ್ಯ ನಿರಾಶಾದಾಯಕ.

1960 ರ ದಶಕದ ಮಧ್ಯದಲ್ಲಿ ಕಾಂಗ್ರೆಸ್ ಸರಕಾರ ಕೃಷಿ ತಂತ್ರಜ್ಞಾನದತ್ತ ಮತ್ತು ಗಮನ ಹರಿಸಿತು, ಮತ್ತು ಅವರು ಜ್ಯಾರಿಯಲ್ಲಿ ತಂದ ಹಸಿರು ಕ್ರಾಂತಿ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸಲು ಕಾರಣವಾಯಿತು ಕೆಲವು ಬದಲಾವಣೆಗಳಾಗಿವೆ ನಿಜ, ಆದರೆ ರೈತರ ಬಡತನವೂ ಹೆಚ್ಚಾಗುತ್ತಲೇ ಇದೆ

ಈಗ ಭೂಮಿಯ ಪ್ರಶ್ನೆ ಕೇಂದ್ರ ಸಮಸ್ಯೆಯಾಗಿದ್ದರೂ ಕೂಡ, ಬಡ ರೈತರು, ಕೃಷಿ ಕಾರ್ಮಿಕರು ಮಾತ್ರ ನೇರವಾಗಿ ಅದರ ಕುರಿತು ಆಸ್ಥೆ ವಹಿಸಿದವರಾಗಿದ್ದಾರೆ. ತುರ್ತಿನ ತಂತ್ರದ ಕುರಿತು ಹೇಳಬೇಕೆಂದರೆ ಎಲ್ಲಾ ಭೂ ಸುಧಾರಣ ಮಸೂದೆಗಳಲ್ಲಿರುವ ರೈತ ವಿರೋಧಿ ಅಂಶಗಳನ್ನು ತೆಗೆದು ಹಾಕುವುದಾಗಿದೆ. ಅದರ ಸಲುವಾಗಿ ಪಶ್ಚಿಮ ಬಂಗಾಲದ ಹೊಸ ಭೂ ಸುಧಾರಣಾ ಮಸೂದೆಯಂಥ ಮಸೂದೆ ಜ್ಯಾರಿಯಲ್ಲಿ ಬರಬೇಕೆಂದು ದೇಶಾದ್ಯಂತ ಚಳುವಳಿ ಹೂಡ ಬೇಕಾಗಿದೆ.

ವಿಶಾಲ ತಳ ಹದಿಯ ಸಮಸ್ಯೆಗಳು

ತೆರಿಗೆ ಹೊರೆ, ನೀರಾವರಿ, ಆರೋಗ್ಯ ಶಿಕ್ಷಣ ಮತ್ತು ಸಾಲ ಹಾಗೆಯೇ ಕೃಷಿ ಬೆಳೆಗೆ ನ್ಯಾಯ ಬೆಲೆ ಇವು ನಮ್ಮನ್ನೆದುರಿಸುವ ಸಮಸ್ಯೆಗಳಾಗಿವೆ. ಭಾರತದ ಇಡೀ ರೈತ ಸಮೂಹವನ್ನು ಈ ಸಮಸ್ಯೆಗಳು ಎದುರಿಸುತ್ತಿವೆ. ಆದ್ದರಿಂದ ಅವುಗಳ ಆಧಾರದಲ್ಲಿ ರೈತರನ್ನು ಸಂಗ್ರಾಮಕ್ಕಿಳಿಸಬೇಕು. ರೈತರಲ್ಲಿ ಅಸಮಾಧಾನ ತೀವ್ರ ಬೆಳೆಯುತ್ತಿದೆ. ಆಳುವ ಪಕ್ಷದ ಶ್ರೀಮಂತ ರೈತರ ಸ್ಥಾನ ಅಲುಗಾಡುತ್ತಿದೆ. ಭೂಮಾಲಕ ಮತ್ತು ಬಂಡವಾಳದಾರರ ಮಧ್ಯೆ ಭಿನ್ನಾಭಿಪ್ರಾಯ ಎದ್ದು ಕಾಣುತ್ತಿದೆ. ಬಂಡವಾಳದಾರರ ಕೈಮೇಲಾಗಿದೆ. ಇಂಥ ಪರಿಸ್ಥಿತಿಯಲ್ಲಿ ರೈತರ ಚಳುವಳಿಯನ್ನು ಬೆಳೆಸಲು ಒಳ್ಳೆ ಅವಕಾಶಗಳಿವೆ.

ಇಂದು ನಮ್ಮ ದೇಶದ ಪರಿಸ್ಥಿತಿಗನುಸರಿಸಿ, ವಿಶೇಷ ವಿಶ್ಲೇಷಣೆ ನಡೆಸಿ, ಮುಂದಿನ ತಂತ್ರಗಳನ್ನು ನಿರೂಪಿಸಿದ್ದರೂ ಕೂಡ, ಸಮ್ಮೇಳನದ ಮುಂದೆ ಮಂಡಿಸಿರುವ ಧೋರಣೆಯ ಕರಡು ಪ್ರಕಟಣೆಯನ್ನು ಇನ್ನೂ ಸುಧಾರಿಸಬಹುದೆಂದು ನನ್ನ ಅಪೇಕ್ಷೆ. ಆದ್ದರಿಂದಲೇ ರಾಜ್ಯ ಮಟ್ಟದಲ್ಲಿ ಅದರ ಕುರಿತು ಚರ್ಚೆ ನಡೆಯುವುದು ಅತ್ಯಗತ್ಯ. ರಾಜ್ಯ ಸಮಿತಿಗಳು ಎರಡು ತಿಂಗಳೊಳಗಾಗಿ ತಮ್ಮ ಸೂಚನೆಗಳನ್ನು ಕಳುಹಿಸಿ ಕೊಡಬೇಕು. ಅನಂತರ ಅವುಗಳ ಆಧಾರದಲ್ಲಿ ಕೇಂದ್ರ ಕಿಸಾನ್ ಕೌನ್ಸಿಲ್ ಧೋರಣೆಯ ಕರಡನ್ನು ಪೂರ್ಣಗೊಳಿಸುವುದು.

ವಿಜಯದಿಂದ ಸಂತುಷ್ಟರಾಗಬೇಡಿ – ಬಸು

ಇತ್ತೀಚೆಗೆ ಪುರಸಭೆಗಳಿಗೆ ನಡೆದ ಚುನಾವಣೆಯಲ್ಲಿ ಗಳಿಸಿದ ವಿಜಯದಿಂದಾಗಿ ಆತ್ಮಸಂತುಷ್ಟರಾಗಬೇಡಿ. ಆ ವಿಜಯ ಎಡರಂಗದ ಮೇಲೆ ಜನರ ಆಶೋತ್ತರಗಳನ್ನು ಜವಾಬ್ದಾರಿಯನ್ನು ಹೊರಿಸಿದಂತಾಗಿದೆಂದು ಪ. ಬಂಗಾಳದ ಮುಖ್ಯ ಮಂತ್ರಿ ಜ್ಯೋತಿ ಬಸು ಅವರು ಹೇಳಿದರು. ಪಶ್ಚಿಮ ಬಂಗಾಲದಲ್ಲಿ ಎಡರಂಗದ 9 ವರ್ಷದ ಆಡಳಿತೆಯ ಮುಕ್ತಾಯದ ನೆನಪಿಗಾಗಿ ಸಂಘಟಿಸಲ್ಪಟ್ಟ ಸಭೆಯಲ್ಲಿ ಅವರು ಭಾಷಣ ಮಾಡುತ್ತಿದ್ದರು. "ನಮ್ಮ ಅಶಕ್ತತೆಗಳನ್ನು ತಪ್ಪುಗಳನ್ನು ಕಂಡು ಹಿಡಿಯೋಣ. ಹಾಗಾದರೆ ಮಾತ್ರ ನಾವು ಜನತೆಗಿತ್ತ ಆಶ್ವಾಸನೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ" ಎಂದು ಹಿತವಚನ ನುಡಿದರು.

ಪಕ್ಷದ ತತ್ವಗಳನ್ನು ಎಡರಂಗ ಎಂದೂ ಒಪ್ಪಂದ ಮಾಡಿಕೊಂಡಿಲ್ಲ. ಮತಗಳಿಕೆಯ ಸಲುವಾಗಿಯೂ ಸುಳ್ಳು ಆಶ್ವಾಸನೆಗಳನ್ನು ನೀಡಿಲ್ಲ. ಅದು ಯಾವಾಗಲೂ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಹೆಚ್ಚು ಪ್ರಾಧಾನ್ಯತೆ ನೀಡಿದೆಂದು ಹೇಳಿದರು.

ಎಡರಂಗದ ವಿಜಯಕ್ಕಾಗಿ ಮತ್ತು 9 ವರ್ಷದ ಆಡಳಿತ ಪೂರ್ತಿಗೊಳಿಸಿದ್ದಕ್ಕಾಗಿ ಪಕ್ಷದ ಕಾರ್ಯಕರ್ತರು ದುರಭಿಮಾನದಿಂದ ವರ್ತಿಸಬಾರದು. ಅದರಲ್ಲೂ ಈ ಕುರಿತು ಯಾವುದೇ ತರದ ಸಂತುಷ್ಟಿಯನ್ನು ನಾವು ಸಹಿಸುವುದಿಲ್ಲೆಂದು ಹೇಳಿದರು

ಪ. ಬಂಗಾಲದ ಕುರಿತು ಕೇಂದ್ರದ ಅನಾಸ್ಥೆಯಿದ್ದರೆ ರಾಜ್ಯದ ಉತ್ಪನ್ನ ಮಿತಿಗೊಳಗಾಗಿದ್ದರೆ, ಕೂಡ, ತನ್ನ ಪ್ರಜಾಪ್ರಭುತ್ವ ಚಳುವಳಿಯ ಮೂಲಕ ಪ್ರತಿಯೊಬ್ಬನಿಗೂ ಕೂಡ ತನ್ನ ಸ್ವಂತ ಮರ್ಯಾದೆಯನ್ನು ಕಾಪಾಡಿಕೊಳ್ಳಲು; ದುಡಿಯುವ ಜನತೆಗೆ ಹಲವಾರು ಹಕ್ಕುಗಳನ್ನು ಒದಗಿಸಲು ಸಾಧ್ಯವಾಯಿತೆಂದು ಮುಖ್ಯ ಮಂತ್ರಿ ಹೇಳಿದರು.

ಅತಿಕ್ರಮಣಕಾರರಿಗೆ ಪುನರ್ವಸತಿ

ಕಾಂಗ್ರೆ ಹಾಗೂ ಜನತಾ ಆಳುವ ಹಾಗೆಯೇ ಇತರ ವಿರೋಧ ಪಕ್ಷಗಳು ಆಳುವ ರಾಜ್ಯಗಳಲ್ಲಿ ಅತಿಕ್ರಮಣಕಾರರನ್ನು ಕೇಳುವವರಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಈ ಬಡಪಾಯಿಗಳನ್ನು ಅವರ ಹೆಂಡರು ಮಕ್ಕಳನ್ನೆಲ್ಲ ತಾವಿರುವ ಸ್ಥಳಗಳಿಂದ ಕಿತ್ತೆಸೆದು ಅವರನ್ನೆಲ್ಲ ನಿರ್ಗತಿಕರನ್ನಾಗಿ ಮಾಡುವ ಪದ್ಧತಿ ಆ ಎಲ್ಲ ರಾಜ್ಯಗಳಲ್ಲಿ ದಿನವೂ ನಡೆಯುತ್ತಿರುವ ದುರಂತ ಕಥೆಗಳು. ಆದರೆ ಮಾರ್ಕ್ಸವಾದಿ ಕಮ್ಯುನಿಷ್ಟ ಪಕ್ಷದ ಮುಖಂಡತ್ವದಲ್ಲಿರುವ ಪ. ಬಂಗಾಲದ ಎಡರಂಗ ಸರಕಾರ ಮಾತ್ರ ಈ ಬಡಪಾಯಿಗಳಿಗೆ ಪೂರ್ಣ ಕರುಣೆ ತೋರಿಸುತ್ತಿದೆ. ಕಾಂಗ್ರೆ ಮತ್ತು ಇತರ ವಿರೋಧ ಪಕ್ಷಗಳ ಸರಕಾರಗಳಿಗಿಂತ ಪ್ರತ್ಯೇಕ ನಿಲುವೆ ತಾಳುತ್ತಿದೆ.

ಕಲ್ಕತ್ತದಲ್ಲಿ ಭೂಗತ ರೈಲ್ವೆ ನಿರ್ಮಾಣವಾಗುತ್ತಿದೆ. ಬಿಲ್ಲಾರಂಗಾ ಮತ್ತು ಡಂಡಂ ಮಧ್ಯೆ ನೂರಾರು ಕುಟುಂಬಗಳು ಜೀವನ ನಡೆಸುತ್ತಿವೆ. ಎಡರಂಗ ಸರಕಾರ ಪೋಲೀಸರ ಸಹಾಯದಿಂದ ಅವರ ಗುಡಿಸಲುಗಳನ್ನು ಕಿತ್ತಲಿಲ್ಲ. ಅವರನ್ನು ಮಳೆ ಬಿಸಿಲಿಗೆ ಒಳಪಡಿಸಲಿಲ್ಲ. ಮಕ್ಕಳ-ಮಹಿಳೆಯರ ಕೂಗಿಗೆ ಅವಕಾಶ ಮಾಡಿಕೊಡಲಿಲ್ಲ. ಸರಕಾರವೇ ರೂ 60 ಲಕ್ಷ ಖರ್ಚು ಮಾಡಿ ಆ ಜನರಿಗೆ ಪ್ರತ್ಯೇಕ ವಾಸದ ವ್ಯವಸ್ಥೆ ಮಾಡುತ್ತದೆಂದು ಸ್ಲಮ್ಮೀಯ ಸಂಸ್ಥೆಗಳ ಮಂತ್ರಿ ಪ್ರಶಾಂತ ಸೂರ್ ಅವರು ಹೇಳಿದ್ದಾರೆ. ಬಂಡವಾಳ ಶಾಹಿ ಪಕ್ಷಗಳ ಮತ್ತು ಸಿ. ಪಿ. ಐ. (ಎಂ) ಮುಖಂಡತ್ವದ ಎಡಸಾರಕಾರಕ್ಕಿರುವ ಮಹಾನ್ ವ್ಯತ್ಯಾಸ ಇದು ವೇ ನೋಡಿ.

ಇತ್ತ ಗಮನಿಸಿ

ಮೇ ಶತಮಾನೋತ್ಸವ ಇಡೀ ವರ್ಷ ಆಚರಿಸಲ್ಪಡುವುದರಿಂದ ಮೇ ದಿನಾಚರಣೆಗೆ ಸಂಬಂಧ ಪಟ್ಟ ಲೇಖನ, ಮಾಹಿತಿಗಳನ್ನೊಳಗೊಂಡ ಐಕ್ಯರಂಗದ ಮೇ ದಿನದ ವಿಶೇಷಾಂಕವನ್ನು ತರಿಸಿ ಓದಬೇಕೆಂದೂ, ಮಾರಾಟ ಮಾಡಬೇಕೆಂದೂ ಪಾರ್ಟಿ ಸದಸ್ಯರಿಗೆ, ಹಿತೈಷಿಗಳಿಗೆ ಕೇಳಿಕೊಳ್ಳುತ್ತೇವೆ.

ಸಂಪಾದಕ ಮಂಡಳಿ

ಪುಟ 8

REG No. BGW-148 MAG (2) PRB DECR 319/78-79

July 6, 1986

ಬರಪೀಡಿತ ರೈತರ ನೆರವಿಗೆ ಧಾವಿಸಿದ ಕಾರ್ಮಿಕ ವರ್ಗ

(1ನೆಯ ಪುಟದಿಂದ)

ಕಾರ್ಮಿಕರಿಗೆ ಪಿಕಾಸಿ, ಸನಿಕೆ ನೀಡಿಕೆ, ಹೀಗೆಯೇ ಹಲವಾರು.

ಬೆಂಗಳೂರು ಜಿಲ್ಲೆಯಲ್ಲಿ ಅತ್ಯಂತ ಬರ ಪೀಡಿತವಾದ ಹೊಸಕೋಟೆ ತಾಲ್ಲೂಕಿನ ಮೂರು ಸ್ಥಳದಲ್ಲಿ ಬಡ ರೈತರಿಗೆ ಬಿತ್ತನೆ ರಾಗಿ, ಕೃಷಿ ಕಾರ್ಮಿಕರಿಗೆ ಆಹಾರದ ರಾಗಿ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ.

ಈ ರಾಗಿ ಹಂಚಿಕೆಗಾಗಿ ಮತ್ತಕೂರು ಗ್ರಾಮದಲ್ಲಿ ನಡೆದಕಾರ್ಯಕ್ರಮದ ವರದಿಯನ್ನು ನೋಡಿ.

ಕರ್ನಾಟಕ ರಾಜ್ಯದಾದ್ಯಂತ ಬೀಕರ ಬರಗಾಲಕ್ಕೆ ಒಳಗಾದ ರೈತ ಸಮುದಾಯದ ಸಂಕಷ್ಟದಲ್ಲಿ ಅವರಿಗೆ ತನ್ನ ಸಹಾನು ಭೂತಿಯನ್ನು ಸೂಚಿಸಿ ಪರಿಹಾರ ಒದಗಿಸಲು ಮುಂದಾಗಿದ್ದು ನಗರದ ಕಾರ್ಮಿಕ ವರ್ಗ. ಇದು ರೈತ ಕಾರ್ಮಿಕರ ಸಖ್ಯತೆಯ ಸೂಚಕವಾಗಿತ್ತು.

ಬೆಂಗಳೂರು ಗ್ರಾಮಾಂತರ ಪ್ರದೇಶವಾದ ಹೊಸಕೋಟೆ ತಾಲೂಕು ಅನುಗೊಂಡನ ಹಳ್ಳಿ ಹೋಬಳಿಯ ಸುತ್ತಮುತ್ತಲ ಸುಮಾರು 50 ಗ್ರಾಮಗಳ ವಿವಿಧ ಮೂಲೆಗಳಿಂದ 15 ಕಿ ಮೀ ದೂರದಿಂದ ಕಾಲ್ನಡಿಗೆಯಲ್ಲಿ ನಡೆದು ಬಂದ ಸಹಸ್ರಕ್ಕೂ ಮೀರಿದ ರೈತಾಪಿ ಜನತೆ ತಾವು ನಡೆದು ಬಂದ ಆಯಾಸವನ್ನು ಮರೆತು ಕೆಂಬಾವುಟ. ಹಸಿರು ತಳಿರು ತೋರಣದಿಂದ ಅಲಂಕೃತವಾಗಿದ್ದ ಪ್ರಾಂತ ರೈತ ಸಂಘದ ಬಹಿರಂಗ ಸಭೆಗೆ ಬಂದು ಜಣಿ ನೆರೆದಿದ್ದರು.

ರೈತ ಸಂಘದ ಕಾರ್ಯಕರ್ತರು ಗ್ರಾಮ ಗ್ರಾಮಗಳಿಗೆ ಬೇಟಿ ನೀಡಿ ಬಡವರನ್ನು ಗುರುತಿಸಿ ಪರಿಹಾರವನ್ನು ಒದಗಿಸುವ ಗುರಿಯನ್ನು ಹೊತ್ತು ಹಳ್ಳಿಗೆ ಹೋದಾಗ ಆದ ಅನುಭವವಂತೂ ಹೃದಯ ಹಿಂಡುವಂತಹ ಸನ್ನಿವೇಶ. ಪ್ರತಿಯೊಂದು ಹಳ್ಳಿಯಿಂದ ಕನಿಷ್ಟ 25 ಜನತೆಗೆ ಪರಿಹಾರವನ್ನು ನೀಡಲು ನಿಗದಿ ಗೊಳಿಸಲಾಗಿತ್ತು. ಬಡವರು, ಅತೀ ಬಡವರು ಕೃಷಿ ಕೂಲಿಗಾರರನ್ನು ಪಟ್ಟಿ ಮಾಡಲು ಹೊರಟಾಗ ಪ್ರತಿ ಹಳ್ಳಿಯಲ್ಲೂ ಸುಮಾರು 200 ರಂತೆ ಮುಂದೆ ಬರುತ್ತಿದ್ದರು. ಅಯ್ಕೆಯಂತೂ ತುಂಬ ಪ್ರಯಾಸದ ಸಂಗತಿಯಾಗಿತ್ತು.

ಆಯ್ಕೆಗೆ ತೆಗೆದುಕೊಂಡ ಅಳತೆಗೋಲು 1 ಎಕರೆ ಜಮೀನು ಉಳ್ಳವರು ಹಾಗೂ ಏನು ಇಲ್ಲದ ಕೂಲಿ ಮಾಡಿ ಜೀವನ ನಡೆಸುವವರು, ಅಂಗವಿಕಲರು ಪಟ್ಟಿಯ ಮೊದಲ ಸಾಲಿಗೆ ಸೇರುವವರಾಗಿದ್ದರು.

ಹೊಸಕೋಟೆ ತಾಲೂಕು ರೈತರಿಗೆ ರೈತ ಸಂಘ ಚಿರಪರಿಚಿತವಾದದ್ದು. ಭೂ ಆಕ್ರಮಣ ಚಳುವಳಿ – ವಸತಿ ಹೀನ ಬಡ ಜನತೆಗೆ ವಸತಿ ಮುಂತಾದ ಹಲವಾರು ಬೇಡಿಕೆಗಳಿಗೆ ಹೋರಾಟ ನಡೆಸಿರುವ ಅನುಭವ ರೈತರಿಗಿದೆ.

ನಗರದ ಕಾರ್ಮಿಕರು ಹೆಚ್ಚಿನ ಸೌಲಭ್ಯ ಸೌಲತ್ತುಗಳನ್ನು ಉಳ್ಳವರೆಂದು, ರೈತರಬಡತನಕ್ಕೆ ಕಾರ್ಮಿಕರು ಕಾರಣವೆಂಬ ಮಿಥ್ಯಾರೋಪವನ್ನು ಆಳುವ ಪಕ್ಷಗಳು ಮಾಡುತ್ತಿರುವುದರ ವಿರುದ್ಧ ಸಂಘಟಿತ ಹೋರಾಟವನ್ನು ರೈತ - ಕಾರ್ಮಿಕರು ಕೂಡಿ ನಡೆಸುವ ಅಗತ್ಯವನ್ನು ಒತ್ತಿ ಹೇಳಿದವರು. ಸಮಾರಂಭ ಉದ್ಘಾಟಿಸಿದ ಕಾರ್ಮಿಕ ನಾಯಕರಾದ ಕಾ|| ಎಸ್. ಸೂರ್ಯನಾರಾಯಣರಾವ್‌ರವರು. ಕ್ಷಾಮ, ಬರಗಾಲ, ಬಡತನಕ್ಕೆ ಹಣೆ ಬರಹ ಮುಂದು ಮಾಡುವುದನ್ನು ಬಿಟ್ಟು ತಮ್ಮನ್ನು ಶೋಷಣೆ ಮಾಡುವ ಜಮೀನ್ದಾರರ ದಬ್ಬಾಳಿಕೆ ವಿರುದ್ಧ ಜೀವನದ ಪರಿಸ್ಥಿತಿಯ ಬದಲಾವಣೆ ಹಾಗೂ ಹಕ್ಕಿಗಾಗಿ ಹೋರಾಡಲು ಸಿದ್ಧರಾಗಬೇಕೆಂದು ಕರೆ ನೀಡಿದರು.

ರಾಜ್ಯದ ಜನತೆಗೆ ಜನತಾ ಸರ್ಕಾರ ಬರ ಪರಿಹಾರವನ್ನು ಒದಗಿಸುವುದರಲ್ಲಿ ವಿಫಲವಾಗಿರುವಾಗ ಹಳ್ಳಿ ಹಳ್ಳಿಗೆ ತೆರಳಿ ನೊಂದ ರೈತಾಪಿ ಜನತೆಗೆ ನೆರವಾಗಿ ಪರಿಹಾರವನ್ನು ತಲುಪಿಸುವ ದೃಷ್ಟಿಯಿಂದ ಈ ಕಾರ್ಯ ಶ್ಲಾಘನೀಯವಾದದೆಂದು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಕ್ರೆಟಾರಿಯಟ್ ಸದಸ್ಯರಾದ ಕಾ|| ಎಸ್. ಕೆ. ಉಪಾಧ್ಯಾಯರು ಕಾರ್ಮಿಕ ವರ್ಗಕ್ಕೆ ಪಕ್ಷದ ಪರವಾಗಿ ಅಭಿನಂದನೆಯನ್ನು ಸಲ್ಲಿಸಿದರು.

ಚುನಾವಣೆಗಳಲ್ಲಿ ಮಂತ್ರಿ ಶಾಸಕರ ಭರವಸೆಗಳನ್ನೆ ನಂಬಿ ಬದುಕುವ ಕಾಲ ಬದಲಿಸಿ ತಮ್ಮ ಗ್ರಾಮದ ಜನತೆಯ ಅವಶ್ಯಕತೆಯ ಬಗ್ಗೆ ಹರಿಸಲು ಒತ್ತಾಯಿಸುವ ತಾನು ಬೆಳೆದ ಬೆಳೆಗೆ ಅನ್ಯಾಯ ಬೆಲೆಗಾಗಿ ಹೋರಾಡಲು ಸಂಘಟನೆ ಬಲಪಡಿಸಲು ಅಧ್ಯಕ್ಷತೆ ವಹಿಸಿದ್ದ ಕಾಂ|| ಪಿ ಜಗನ್ನಾಥ್‌ರವರು ಕರೆನೀಡಿದರು. ತಾಲೂಕು ರೈತ ಸಂಘದ ಕಾರ್ಯದರ್ಶಿಯವರಾದ ಕಾ|| ಮನೋಹರ್‌ರವರು ವಂದನಾರ್ಪಣೆ ಸಲ್ಲಿಸುವಾಗ ಹಳ್ಳಿ ಹಳ್ಳಿಗೆ ಬೇಟಿ ನೀಡಿದಾಗ ಆದ ಅನುಭವಗಳನ್ನು ಬಣ್ಣಿಸಿದರು.

ರೈತರು ಸಾಲಾಗಿ ನಿಂತು ಬಿತ್ತನೆಯ ಹಾಗೂ ಆಹಾರದ ರಾಗಿಯನ್ನು ಪಡೆದು ಅದನ್ನು ಹೊಲದಲ್ಲಿ ಬಿತ್ತಿ ಆದರಿಂದ ಬರುವ ಫಸಲಿನ ಕನಸನ್ನು ಕಾಣುತ್ತಾ ತಮ್ಮ ಗ್ರಾಮದ ಕಡೆ ನಡೆದರು.

ಆಟೋರಿಕ್ಷಾ ಮುಷ್ಕರದ ದಾಖಲೆ

1986 ಜೂನ್ 30 ಬೆಂಗಳೂರು ನಗರದ ಆಟೋರಿಕ್ಷಾ ಚಾಲಕರ ಚರಿತ್ರೆಯಲ್ಲಿ ದಾಖಲೆ ಮಾಡಬೇಕಾದ ದಿನ ನಗರದ ಹನ್ನೆರಡು ಸಹಸ್ರ ಆಟೋಗಳನ್ನು ತಮ್ಮ ತಮ್ಮ ಷೆಡ್ಡುಗಳಲ್ಲಿ ನಿಲ್ಲಿಸಿ ಇಪ್ಪತ್ತು ಸಹಸ್ರಕ್ಕೂ ಹೆಚ್ಚು ಆಟೋ ಚಾಲಕರು ಐಕ್ಯತೆಯಿಂದ ಸರ್ಕಾರದ ಚಾಲಕ ವಿರೋಧಿ ನೀತಿಯನ್ನ ಪ್ರತಿಭಟಿಸಿ ಮುಷ್ಕರ ಮಾಡಿದ ದಿನ. 5 ಬೇಡಿಕೆಗಳನ್ನು ಒತ್ತಾಯಿಸಿ ಆಟೋರಿಕ್ಷಾ ಡ್ರೈವರ್ಸ್ ಯುನಿಯನ್, ಸಿ ಐ ಟಿ.ಯು ಸಾರ್ವಜನಿಕರ ಮತ್ತು ಸರ್ಕಾರದ ಗಮನವನ್ನು ಸೆಳೆಯಲು 30-6-1986 ರಂದು ಮುಷ್ಕರ ಆಚರಿಸಲು ಚಾಲಕರಿಗೆ ಕರೆ ನೀಡಿತ್ತು.

ನಗರದ ವಿವಿಧ ಪ್ರದೇಶಗಳಿಂದ ಮೆರವಣಿಗೆಗಳಲ್ಲಿ ಬಂದ ಚಾಲಕರು ಚಿಕ್ಕ ಲಾಲ್‌ಭಾಗ್‌ನಲ್ಲಿ ಬೆಳಿಗ್ಗೆ 11-30 ಗಂಟೆಗೆ ಸಭೆ ಸೇರಿ 2 ಸಾವಿರಕ್ಕೂ ಹೆಚ್ಚು ಚಾಲಕರು ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷರಾದ ಕಾ|| ಎಸ್. ಸೂರ್ಯನಾರಾಯಣರಾವ್ ಅವರ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ತೆರಳಿ ವಿಧಾನಸೌಧದ ಮುಂದೆ ಧರಣಿ ಮಾಡಿದರು.

ಸಭೆ ಮತ್ತು ಧರಣಿಯಲ್ಲಿ ಭಾಗ ವಹಿಸಿದ ಚಾಲಕರನ್ನು ಉದ್ದೇಶಿಸಿ ಕಾ|| ಎಸ್. ಸೂರ್ಯನಾರಾಯಣ ರಾವ್ ಸಂಘದ ಅಧ್ಯಕ್ಷರಾದ ಕಾ| ಜಿ. ಸುಬ್ಬರಾವ್, ಪ್ರಧಾನ ಕಾರ್ಯದರ್ಶಿ ಕಾ|| ಎ. ವಿ. ರಮೇಶ್, ಸಿ. ಪಿ. ಟಿ. ಯು ಮುಖಂಡರುಗಳಾದ ಕಾ|| ಆರ್, ಶ್ರೀನಿವಾಸ್, ಕಾ| ಪಿ ಕೆ. ಸುಬ್ರಮಣಿ ಮತ್ತು ಇತರರು ಮಾತನಾಡಿ ಸಮಸ್ಯೆಗಳು ಬಗೆಹರಿಯಬೇಕಾದರೆ ಸಂಘಟನೆ ಬಲಪಡಿಸಿ ರೈತ ಕಾರ್ಮಿಕ ವರ್ಗದ ಬೆಂಬಲ ಪಡೆದು ಹೋರಾಟ ನಡೆಸಬೇಕೆಂದು ಕರೆ ನೀಡಿದರು

ಸಮಗ್ರ ಕೃಷಿಕ್ರಾಂತಿಯ ಕಹಳೆ ಮೊಳಗಿಸೋಣ

(1ನೆಯ ಪುಟದಿಂದ)

ಹೆಚ್ಚಿನ ತ್ಯಾಗ ಬಲಿದಾನಕ್ಕಾಗಿ ಅಣಿಗೊಳಿಸ ಬೇಕು ಕೃಷಿ ಕ್ರಾಂತಿಗಾಗಿ ನಡೆಯುವ ಹೋರಾಟದಲ್ಲಿ ಅವರೇ ಪ್ರಧಾನ ಪಾತ್ರಧಾರಿಗಳಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಪಾಟ್ನ ಅಧಿವೇಶನದ ಸಮಗ್ರ ಸಾಹಿತ್ಯವನ್ನು ಐಕ್ಯರಂಗದ ಪುರವಣಿ ಮೂಲಕ ಒದಗಿಸುತ್ತಿದ್ದೇವೆ.

ಹಾಗೆಯೇ ರೈತ ಹೋರಾಟದ ಸಂಗಾತಿಯಾಗಿರುವ "ಐಕ್ಯರಂಗ" ಪತ್ರಿಕೆ ಪ್ರತಿಯೊಂದು ಹಳ್ಳಿಯಲ್ಲಿಪಂಚಾಯಿತಿಯಲ್ಲಿ, ರೈತರ ಮನೆಯಲ್ಲಿ ಕಾಣುವಂತಾಗಬೇಕು,

ಈ ಪುರವಣಿ ತಂದದ್ದು ಆಗ ಸಾರ್ಥಕ.

ಅಭೂತಪೂರ್ವ ಘಟನೆ

(1ನೆಯ ಪುಟದಿಂದ)

ಸಾಧ್ಯವಾಗುವ ಕನಿಷ್ಟ ಕಾರ್ಯಕ್ರಮ ಅಂಗೀಕರಿಸಿ ಸರಕಾರದ ಸ್ಥಾಪನೆಯ ಅವಕಾಶವೊದಗಿ ಬಂದಲ್ಲಿ ಸಿ. ಪಿ. ಐ. (ಎಂ) ಅಂತಹ ಅವಕಾಶವನ್ನು ಬಳಸಿಕೊಳ್ಳುತ್ತದೆ. ಎಂದು ನಮ್ಮ ಪಕ್ಷದ 112ನೇ ಪರಿಚ್ಛೇದ ಹೇಳುತ್ತದೆ. "ನಾವು ಎಡರಂಗ ಸರ್ಕಾರವನ್ನು ಈ ದೃಷ್ಟಿಯಿಂದಲೇ ಕಾಣುತ್ತೇವೆ. ಮತ್ತು ನಾವು ಸರಿಯಾದ ಮಾರ್ಗದಲ್ಲಿ ನಡೆಯುತ್ತಿದ್ದೇವೆ ಎಂಬುದು ಈ ನಡುವೆ ಸಿದ್ಧಗೊಂಡಿದೆ" ಎಂದ ಕಾ. ಜ್ಯೋತಿಬಸು ಜನಸಾಮಾನ್ಯರೊಡನೆ ನಿಕಟ ಸಂಬಂಧ ಸ್ಥಾಪಿಸಿ, ಅವರಪ್ರಜ್ಞೆಯ ಮಟ್ಟವನ್ನುಮೇಲೆತ್ತುವುದು ಸಾಧ್ಯ, ನಾವು ಕಾಂಗ್ರೆಸ್ಸಿಗರಿಗಿಂತ ಭಿನ್ನ ಎಂಬುದನ್ನು ಜನಸಾಮಾನ್ಯರಿಗೆ ತೋರಿಸಿಕೊಡುವುದು ಸಾಧ್ಯ, ಇದರ ಪ್ರಭಾವ ಬೇರೆ ರಾಜ್ಯಗಳ ಮೇಲೆ ಕೂಡ ಬೀಳುತ್ತದೆ ಎಂಬುದು ಮುಖ್ಯ ಸಂಗತಿ ಎಂದು ಹೇಳಿದ್ದಾರೆ.

ಈ ಒಂಬತ್ತು ವರ್ಷಗಳಲ್ಲಿ ಮೇಲೆ ಹೇಳಿದ ದಾರಿಯನ್ನು ಅನುಸರಿಸಿ ತನ್ನ ಸೀಮಿತ ಅಧಿಕಾರಗಳೊಂದಿಗೆ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ (ಐ)ನ ಅಡ್ಡಿ ಆತಂಕಗಳನ್ನು, ಕೇಂದ್ರ ಸರಕಾರದ ರಾಜಕೀಯ ವಿರೋಧವನ್ನು ಎದುಸಿಯೂ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಒಂದು ಭಿನ್ನವಾದ ಹಾಗೂ, ರಚನಾತ್ಮಕ ಉದಾಹರಣೆಯನ್ನು ದೇಶದ ಮುಂದಿಟ್ಟಿದೆ. ಎಂಬುದನ್ನು ಕಾಂಗ್ರೆಸ್ ಆಳ್ವಿಕೆಯ ಕರಾಳರೂಪ ತಿಳಿದವರೆಲ್ಲಾ ಒಪ್ಪುತ್ತಿದ್ದಾರೆ.

ಕೆಲವು ಉದಾಹರಣೆಗಳು

ಇವಕ್ಕೆ ಒಂದೆರಡು ಉದಾಹರಣೆಗಳೇ ಸಾಕು ಕಾಂಗ್ರೆಸ್ ತನ್ನ ಆಳ್ವಿಕೆಯ ಕಾಲದಲ್ಲಿ 17 ವರ್ಷಗಳ ಕಾಲ ಪಂಚಾಯತ್ ಚುನಾವಣೆಗಳನ್ನು, 12ವರ್ಷಗಳ ಕಾಲ ನಗರ ಸಭಾ ಚುನಾವಣೆಗಳನ್ನು ನಡೆಸಲಿಲ್ಲ, ಆದರೆ ಎಡರಂಗ ಸರ್ಕಾರ ತನ್ನ ಒಂಬತ್ತು ವರ್ಷಗಳ ಅವಧಿಯಲ್ಲಿ ಎರಡೆರಡು ಬಾರಿ ಪಂಚಾಯತ್ ಹಾಗೂ ನಗರ ಸಭಾ ಚುನಾವಣೆಗಳನ್ನು ನಡೆಸಿರುವುದರಿಂದ ಪ್ರಜಾಪ್ರಭುತ್ವ ಆಂದೋಲನ ಹಿಂದೆಂದೂ ಕಾಣದ ರೀತಿಯಲ್ಲಿ ಉತ್ತರಿಸಲು ಅವಕಾಶವಾಗಿವೆ. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ, ದುರ್ಬಲ ಜನವಿಭಾಗಗಳ ನಡುವೆ, ಶಿಕ್ಷಣದ ಕ್ಷೇತ್ರದಲ್ಲಿ ಹಾಗೂ ರಾಜ್ಯಪಟ್ಟಿಯಲ್ಲಿರುವ ಸಣ್ಣ ಕೈಗಾರಿಕೆಗಳ ವಲಯದಲ್ಲಿ ಸಾಧನೆ ಅಭೂತಪೂರ್ವ. ದೊಡ್ಡ ಕೈಗಾರಿಕೆಗಳು ಕೇಂದ್ರದ ಪಟ್ಟಿಯಲ್ಲಿದ್ದು ಕೇಂದ್ರದ ಕಾಂಗ್ರೆಸ್ (ಐ) ಸರಕಾರದ ತೀವ್ರ ಅನಾಸಕ್ತಿ ಹಾಗೂ ಅಸಹಕಾರ ತೋರ್ಪಡಿಸಿದರೂ ರಾಜ್ಯ ಸರ್ಕಾರವೇ ಕೆಲವು ಶ್ರಮಗಳನ್ನು ತಗೊಂಡು ಲಕ್ಷಾಂತರ ಕಾರ್ಮಿಕರ ಹಿತಾಸಕ್ತಿ ಕಾಪಾಡಿದೆ. 14 ರೋಗಗ್ರಸ್ತ ಗಿರಣಿಗಳನ್ನು, ರಾಜ್ಯ ಸರ್ಕಾರ ವಹಿಸಿಕೊಂಡಿದೆ. ಅವುಗಳ ಆರೋಗ್ಯ ಸುಧಾರಿಸಲು ಪ್ರಯತ್ನಿಸಲಾಗುತ್ತಿದೆ. ಅವುಗಳಲ್ಲಿ ನಾಲ್ಕನ್ನು ರಾಷ್ಟ್ರೀಕರಿಸಿ ಇನ್ನೂ ಕೆಲವನ್ನು ರಾಷ್ಟ್ರೀಕರಿಸುವ ನಿರ್ಧಾರ ಮಾಡಲಾಗಿದೆ. ಸಂಯುಕ್ತ ವಲಯದಲ್ಲೂ ಹಲವು ಉದ್ಯಮಗಳನ್ನು ಸ್ಥಾಪಿಸಲಾಗುತ್ತಿವೆ. ಇವುಗಳ ಮೂಲಧನದಲ್ಲಿ ಸರ್ಕಾರದ ಪಾಲೇ ಹೆಚ್ಚಾಗಿರುತ್ತದೆ. ಇನ್ನೊಂದು ಗಮನಾರ್ಹ ವಿಷಯವೆಂದರೆ ತನ್ನ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲು ಎಡರಂಗ ಸರ್ಕಾರ ಉಳಿದ ಸರ್ಕಾರಗಳಂತೆ ಕಾಂಟ್ರಾಕ್ಟ್‌ದಾರರನ್ನು ಅವಲಂಬಿಸುವುದಿಲ್ಲ ಇದರಿಂದ ಕೆಲಸವೂ ಚೆನ್ನಾಗಿದೆ. ಖರ್ಚು ಕಡಿಮೆಯಾಗಿದೆ.

ಕೇವಲ ಚುನಾವಣಾರಂಗವಲ್ಲ

ಹಲವು ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ತೀವ್ರ ಅಸ್ಥಿರತೆಯಿರುವಾಗ ಪಶ್ಚಿಮ ಬಂಗಾಳವನ್ನು ಸಂಪ್ರದಾಯಸರಣತೆ, ಸಂಕುಚಿತವಾದ, ಪ್ರತ್ಯೇಕತವಾದಗಳಿಂದ ರಕ್ಷಿಸುವಲ್ಲಿ ಈ ರಾಜ್ಯದಲ್ಲಿ ದುಡಿಯುತ್ತಿರುವ ಕಾರ್ಮಿಕರಳ ಬಹುಪಾಲು ಬೇರೆ ರಾಜ್ಯಗಳಿಂದ ಬಂದಿದ್ದರೂ ಇವರೆಲ್ಲರೂ ಐಕ್ಯತೆಯಿಂದಿರುವಂತೆ ಮಾಡುವಲ್ಲಿ ಎಡರಂಗ ಸರ್ಕಾರ ಸಫಲವಾಗಿದೆ. ಇದಕ್ಕೆ ಅದರ ಸೈದ್ಧಾಂತಿಕ ನೆಲಗಟ್ಟೇ ಕಾರಣ.

ಪಶ್ಚಿಮ ಬಂಗಾಳ ಮತ್ತು ತ್ರಿಪುರಾದ ಎಡರಂಗಗಳು ಇತರರಂತೆ ಕೇವಲ ಚುನಾವಣಾರಂಗಗಳಲ್ಲ ಎಂಬುದು ಇನ್ನೊಂದು ಮುಖ್ಯಸಂಗತಿ. ಸಂಘರ್ಷಗಳ ನಡುವೆ ಇವುಗಳು ರೂಪಗೊಂಡಿವೆ ಆಗಾಗ ಕಂಡು ಬಂದ ಒಡಕುಗಳನ್ನು ಮಾತು ಕತೆಗಳ ಮೂಲಕ ಪರಿಹರಿಸಿಕೊಂಡು ಈ ರಂಗಗಳ ಐಕ್ಯತೆ ಇನ್ನಷ್ಟು ಬೆಸೆದಿದೆ. ಎಡರಂಗ ಐಕ್ಯತೆ ಬಗ್ಗೆ ಸಿ. ಪಿ ಐ. (ಎಂ) ತೀವ್ರ ಒತ್ತು ನೀಡುತ್ತಾ ಬಂದುದರ ಪರಿಣಾಮ ಇದು.

ಒಟ್ಟನಲ್ಲಿ, ನಮ್ಮ ಪಕ್ಷದ ಕಾರ್ಯಕ್ರಮದ 112ನೇ ಪರಿಚ್ಛೇದದಲ್ಲಿ ಹೇಳಿದ ದಾರಿಯಲ್ಲಿ "ನಾವು ನಡೆಯುತ್ತಿದ್ದೇವೆ. ಆದರೆ ಸಾಧಿಸಬೇಕಾದುದು ಬಹಳಷ್ಟಿದೆ........ ಜನಸಾಮಾನ್ಯರೊಡನೆ ಅತ್ಯಂತ ನಿಕಟ ಸಂಬಂಧಗಳನ್ನು ಖಾಯಂ ಗೊಳಿಸಿಕೊಳ್ಳುವಲ್ಲಿ ನಾವು ಅಸಫಲವಾದರೆ, ಬಹಳ ನಷ್ಟ ಅನುಭವಿಸಬೇಕಾಗುತ್ತದೆ. .... ದೊಡ್ಡ ಹಾಗೂ ಸಣ್ಣ ಪತ್ರಿಕೆಗಳು ನಿರಂತರವಾಗಿ ಅಪಪ್ರಚಾರ ನಡೆಸುತ್ತಿವೆ. ಅದ್ದರಿಂದ ನಾವು ಸದಾ ಜಾಗರೂಕರಾಗಿರಬೇಕು" ಎಂದು ಕಾಂ. ಜ್ಯೋತಿ ಬಸು ತಮ್ಮ ಲೇಖನದಲ್ಲಿ ಎಚ್ಚರಿಸಿದ್ದಾರೆ.

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Sultanpet B-53 Phone : 75331
Editorial and manageriel office: L-56, K. V. Temple Street,
Editor P. Ramachandra Rao
Managing Editor : N K. Upadhyaya